ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಫೆಬ್ರವರಿ 2 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 284 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಮೆಟ್ಟಿಲುಗಳ ಮೂಲಕ ಚಾಮುಂಡಿಬೆಟ್ಟ ಸಂರಕ್ಷಣೆ ನಡಿಗೆ

● ರಾಜವಂಶಸ್ಥರು, ಪರಿಸರ ಪ್ರೇಮಿಗಳು, ಚಿಂತಕರು, ಶಾಲಾ ಮಕ್ಕಳಿಂದ 'ಬೆಟ್ಟ' ರಕ್ಷಣೆ ಕೂಗು ● 'ಪ್ರಸಾದ' ಕಾಮಗಾರಿಯಿಂದಾಗುವ ಅನಾಹುತಕ್ಕೆ ಆಕ್ರೋಶ

ನಾನು ಯಾವುದೇ ಪಕ್ಷದ ಸದಸ್ಯೆ ಅಲ್ಲ



ಇಂದಿನ ಕಾರ್ಯಕ್ರಮಕ್ಕೆ ಬೆಂಬಲ ಕೇಳಿದ್ದರು. ಭಾಗ ವಹಿಸಿದ್ದೇನೆ. ಇಂದು ಸ್ಪಷ್ಟವಾಗಿ ಹೇಳು ತ್ತಿದ್ದೇನೆ, ನಾನು ಯಾವುದೇ ಪಕ್ಷದ ಸದಸ್ಯೆ ಅಲ್ಲ. ನನ್ನ ಪತಿ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕಾಂಗ್ರೆಸ್‌ನಲ್ಲಿದ್ದರು. ಈಗ ಮಗ ಯದುವೀರ್ ಕೃಷ್ಣದತ್ತ ಒಡೆಯರ್ ಬಿಜೆಪಿಯಲ್ಲಿ ಇದ್ದಾರೆ. ಎರಡು ಪಕ್ಷದಲ್ಲಿಯೂ ನಾನು ಸದಸ್ಯೆ ಆಗಿಲ್ಲ. ಆ ರೀತಿ ಭಾವನೆ ಇಟ್ಟುಕೊಳ್ಳಬೇಡಿ. ನಾನು ಜನರ ಪರ ಅವರೊಟ್ಟಿಗೆ ಇರುತ್ತೇನೆ. ಯಾವುದೇ ಪಕ್ಷದೊಂದಿಗೆ ನನ್ನನೂ ಸೇರಿಸ ಬೇಡಿ. ಜನರೊಟ್ಟಿಗೆ ನನ್ನನ್ನು ಸೇರಿಸಿ.

–ಪ್ರಮೋದಾದೇವಿ ಒಡೆಯರ್, ರಾಜವಂಶಸ್ಥೆ









ಚಾಮುಂಡಿಬೆಟ್ಟದಲ್ಲಿ ನಡೆಯುತ್ತಿರುವ ಕಾಮಗಾರಿ. ಭಾನುವಾರ ಬೆಳಗ್ಗೆ ನೂರಾರು ಮಂದಿ ಚಾಮುಂಡಿಬೆಟ್ಟ ರಕ್ಷಣೆಗಾಗಿ ಸಾವಿರ ಮೆಟ್ಟಿಲುಗಳನ್ನು ಹತ್ತುವ ಮೂಲಕ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಪರಂಪರೆ ಉಳಿವಿಗೆ ಆಗ್ರಹಿಸಿದರು.

ಮೈಸೂರು, ಫೆ.1(ಜಿಎ)–ಚಳಿಯನ್ನು ಲೆಕ್ಕಿಸದೇ ನೂರಾರು ಮಂದಿ ಚಾಮುಂಡಿ ಬೆಟ್ಟದ ರಕ್ಷಣೆಗಾಗಿ ಚಾಮುಂಡಿಬೆಟ್ಟದ ಸಾವಿರ ಮೆಟ್ಟಿಲುಗಳನ್ನು ಹತ್ತುವ ಮೂಲಕ ಧಾರ್ಮಿಕ, ಆಧ್ಯಾತ್ಮಿಕ ಮತ್ತು ಪರಂಪರೆ ಉಳಿಸುವಂತೆ ಆಗ್ರಹಿಸಿದರು.

ಪ್ರಸಾದ ಯೋಜನೆ ಅಡಿ ಚಾಮುಂಡಿ ಬೆಟ್ಟದ ಮೇಲೆ ನಡೆಯುತ್ತಿರುವ ಕಾಮಗಾರಿ ವಿರೋಧಿಸಿ 'ಪರಿಸರಕ್ಕಾಗಿ ನಾವು' ಬಳಗದ ವತಿಯಿಂದ ಆಯೋಜಿಸಿದ್ದ 'ಚಾಮುಂಡಿಬೆಟ್ಟದ ಸಂರಕ್ಷಣೆಗಾಗಿ ನಡಿಗೆ'ಯಲ್ಲಿ ಮೈಸೂರಿನ ರಾಜವಂಶ್ಥರು, ಪರಿಸರ ಪ್ರೇಮಿಗಳು, ಪ್ರಗತಿಪರ ಚಿಂತಕರು, ವಿವಿಧ ಶಾಲೆಯ ನೂರಾರು ಮಕ್ಕಳು ಮೆಟ್ಟಿಲು ಹತ್ತಿ ಚಾಮುಂಡಿ ಬೆಟ್ಟ ಉಳಿಸುವಂತೆ ಗಮನ ಸೆಳೆದರು.

ವಿದ್ಯಾರ್ಥಿಗಳು 'ಅಭಿವೃದ್ಧಿ ಮೇಲಕ್ಕೆ ಪರಿಸರ ಪಾತಾಳಕ್ಕೆ', ಪರಿಸರ ಸ್ನೇಹಿ ಅಭಿವೃದ್ಧಿ ಬೇಕು ವಿನಾಶದ ಅಭಿವೃದ್ಧಿ ಸಾಕು' ಬೇಡವೇ ಬೇಡ ಬೆಟ್ಟವು ಕಾಂಕ್ರೀಟ್ ಕಾಡಾಗುವುದು ಬೇಡ', 'ಬೆಟ್ಟದ ಮೇಲೆ ಅತಿ ನಿರ್ಮಾಣ ಭೂಕುಸಿತಕ್ಕೆ ಕಾರಣ' ಎಂಬ ವಿವಿಧ ಪ್ಲೇಕಾರ್ಡ್‌ಗಳನ್ನು ಹಿಡಿದು ಕಾಮಗಾರಿ ವಿರುದ್ಧ ಘೋಷಣೆ ಕೂಗಿದರು.

ಈ ವೇಳೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಮಾತನಾಡಿ, ಬೆಟ್ಟ ಉಳಿಸ ಬೇಕಿರುವುದು ಎಲ್ಲರ ಕರ್ತವ್ಯ. ನಮ್ಮ ಕುಟುಂಬದಿಂದ ವೈಯಕ್ತಿಕವಾಗಿ ಕಳೆದ 30 ವರ್ಷದಿಂದ ಹೋರಾಟ ಮಾಡುತ್ತಿದ್ದೇವೆ. ಅದು ವೈಯಕ್ತಿವಾಗಿ ಮಾತ್ರ ಇತ್ತು. ಈಗ ಜನರಿಗೆ ತಲುಪಿದ್ದು, ಜನರು ಸಹ ನಮ್ಮೊಟ್ಟಿಗೆ ಸೇರಿದ್ದಾರೆ. ಚಾಮುಂಡಿ ಬೆಟ್ಟ ಬೆಟ್ಟವಾಗಿ ಉಳಿದುಕೊಳ್ಳಲಿ ಎಂಬುದೇ ಎಲ್ಲರ ಮುಖ್ಯ ಉದ್ದೇಶವಾಗಿದೆ ಎಂದರು.

ಬೆಟ್ಟದ ಮೇಲ್ಭಾಗದಲ್ಲಿ ಕಾಂಕ್ರೀಟೀಕರಣ ಮಾಡುವ ಅವಶ್ಯತೆ ಇಲ್ಲ. ಭಕ್ತಾದಿಗಳಿಗೆ ಬೇಕಿರುವ ಕುಡಿಯುವ ನೀರು, ಶೌಚಾಲಯ, ಹಿರಿಯ ನಾಗರಿಕರಿಗೆ ಸೌಲಭ್ಯ ನೀಡುವುದಕ್ಕೆ ಯಾರಿಗೂ ಅಸಮಧಾನವಿಲ್ಲ. ಮೂಲ ಸೌಕರ್ಯ ಸೌಲಭ್ಯವನ್ನು ಒದಗಿಸಬೇಕು. ಆದರೆ, ದೇವಸ್ಥಾನದ ಪಕ್ಕದಲ್ಲಿಯೇ ಕಾಮಗಾರಿ ಆರಂಭವಾಗಿದೆ. ವರ್ಷಕ್ಕೊಮ್ಮೆ ರಥೋತ್ಸವದ ಸಂದರ್ಭದಲ್ಲಿ ತೇರು ಬರುಲು ಸಾಕಷ್ಟು ಇಕ್ಕಟ್ಟಾಗಲಿದೆ. ಜನರಿಗೂ ಸಮಸ್ಯೆ ಆಗಲಿದೆ ಎಂದರು.

ಜನರು ಚಾಮುಂಡಿಬೆಟ್ಟಕ್ಕೆ ಬರುವುದೇ ಚಾಮುಂಡೇಶ್ವರಿ ದರ್ಶನ ಪಡೆದುಕೊಳ್ಳಲು. ಅದಕ್ಕೂ ಅವಕಾಶವಿಲ್ಲದೆ. ಈ ರೀತಿ ಕಟ್ಟಡ ನಿರ್ಮಾಣ ಮಾಡುವುದರಿಂದ ಎಲ್ಲರಿಗೂ ತೊಂದರೆ ಆಗಲಿದೆ. ಉತ್ಸವಕ್ಕೂ ಅಡ್ಡಿಯಾಗುತ್ತದೆ ಎಂಬ ಭಾವನೆ ಇದೆ. ಕಾಮಗಾರಿಯ ಪ್ಲಾನ್ ನೋಡಿದರೆ ಅದು ತಾತ್ಕಾಲಿಕ ಎಂದು ಅನಿಸುತ್ತಿಲ್ಲ. ಇದರಿಂದ ಎಲ್ಲರಿಗೂ ತೊಂದರೆ ಆಗುತ್ತದೆ. ಬೆಟ್ಟಕ್ಕೂ ಹಾನಿಯಾಗುತ್ತದೆ. ಈಗಾಗಲೇ ನಂದಿ ಮಾರ್ಗದ ರಸ್ತೆ ಕುಸಿದು ನಾಲ್ಕು ವರ್ಷಗಳಾಗಿ ಈಗ ತಾತ್ಕಾಲಿಕವಾಗಿ ರಸ್ತೆ ತೆರೆಯಲಾಗಿದೆ. ಅದನ್ನು ಸರಿಪಡಿಸಲು ಇಷ್ಟು ವರ್ಷ ಬೇಕಾಯಿತು. ಈ ಹಿಂದೆ ಬೆಟ್ಟದಲ್ಲಿ ಪಾರ್ಕಿಗೂ ಕಾಮಗಾರಿ ಮಾಡಿದ್ದಾಗ ರಾಜೇಂದ್ರ ವಿಲಾಸ್ ಅರಮನೆಗೂ ಸಾಕಷ್ಟು ಹಾನಿಯಾಗಿದೆ. ಗಾಳಿ ಸಮಸ್ಯೆಯಿಂದ ಕಾಮಗಾರಿ ಮಾಡಲು ಸಾಧ್ಯವಿಲ್ಲ. ಮತ್ತೆ ಗುಮ್ಮಟ್ಟ ಕಾಮಗಾರಿಯನ್ನು ನಡೆಸಲು ಕಷ್ಟವಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಬೆಟ್ಟದಲ್ಲಿ ಈಗಾಗಲೇ ಸಾಕಷ್ಟು ಕಟ್ಟಡಗಳು ನಿರ್ಮಾಣವಾಗಿವೆ. ತುರ್ತು ಸಂದರ್ಭಕ್ಕೆ ಬೇಕಿರುವ ಆರೋಗ್ಯ ಕೇಂದ್ರ ಸ್ಥಾಪಿಸಿ, ಬೇರೆ ಕಟ್ಟಡಗಳು ಅನಾವಶ್ಯಕವಾಗಿವೆ. ಜನರ ಭಾವನೆಯೂ ಅದೇ ಆಗಿದೆ ಕಾಮಗಾರಿ ತಡೆಗಾಗಿ ಒಂದು ಕಡೆ ನ್ಯಾಯಾಲಯದಲ್ಲಿ ಮತ್ತೊಂದೆಡೆ ಚಾಮುಂಡೇಶ್ವರಿ ಅಪೀಲ್ ಸಲ್ಲಿಸಿದ್ದೇವೆ. ಕಾಮಗಾರಿ ತಡೆಗೆ ಸರ್ಕಾರದ ಗಮನಕ್ಕೆ ತರಲಾಯಿತು. ಅದಕ್ಕೆ ಪ್ರತಿಕ್ರಿಯೆ ಬರದಿದ್ದರಿಂದ ನ್ಯಾಯಾಲಯದಲ್ಲಿ ಕಾಮಗಾರಿ ತಡೆಗಾಗಿ ಹೋರಾಟ ಮಾಡುತ್ತಿದ್ದೇವೆ. ಚಾಮುಂಡಮ್ಮನ ಬಳಿ ಕೇಳಿಕೊಂಡಿದ್ದೇವೆ. ಸರ್ಕಾರಕ್ಕೆ ದೇವರೆ ಪ್ರೇರಣೆ ನೀಡಿ ಕಾಮಗಾರಿ ನಿಲ್ಲಿಸಲಿ. ಕಡೆಯದಾಗಿ ನಮ ಕೈಯಲ್ಲಿ ಎಷ್ಟು ಆಗುತ್ತದೆ ಅಷ್ಟು ಮಾಡೋಣ. ಅಂತಿಮವಾಗಿ ಚಾಮುಂಡೇಶ್ವರಿಯೇ ಪ್ರೇರಣೆ ನೀಡಬೇಕು ಎಂದರು. ನಡಿಗೆಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ, ಮೇಜರ್ ಜನರಲ್ ಒಂಬತ್ಕೆರೆ, ಗ್ರಾಹಕ ಪರಿಷತ್ ಸಂಸ್ಥಾಪಕ ಭಾಮಿ ವಿ.ಶೆಣೈ, ಇತಿಹಾಸ ತಜ್ಞ ಪ್ರೊ.ರಂಗರಾಜು, ಧರ್ಮೇಂದ್ರ ಸೇರಿದಂತೆ ವಿವಿಧ ಸಂಘ ಸಂಸ್ಥೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ವಿದ್ಯಾರ್ಥಿಗಳಿಗೆ ಜಾತಿ ಪ್ರಮಾಣ ಪತ್ರ ಶೀಘ್ರ ಕಲ್ಪಿಸಿ

ಮೈಸೂರು,ಫೆ.1(ಜಿಎ)–ಸಿಇಟಿ ಪರೀಕ್ಷೆ ನೋಂದಣಿಗೆ ರಾಜ್ಯ ಸರ್ಕಾರ ಪ್ರಕಟಣೆ ಹೊರಡಿಸಿದೆ. ಜಾತಿ ಪ್ರಮಾಣ ಪತ್ರ ಪಡೆಯಲು ವಿದ್ಯಾರ್ಥಿಗಳಿಗೆ ಅಧಿಕಾರಿ ವರ್ಗ ಸಹಕಾರ ನೀಡಬೇಕೆಂದು ಭೀಮ ಬಲ ಬಳಗದ ಸಂಚಾಲಕ ಎಂ.ಎಸ್. ಪರಮಾನಂದ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯ ಅಭ್ಯರ್ಥಿಗಳು ಒಳ ಮೀಸಲಾತಿ ಪ್ರಕಾರ ಪ್ರವರ್ಗ–1, ಪ್ರವರ್ಗ–ಬಿ, ಪ್ರವರ್ಗ–ಸಿ ವರ್ಗೀಕರಣ ಮಾಡಿರುವ ಕಾರಣದಿಂದಾಗಿ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವಾಗ ಒಳ ಮೀಸಲಾತಿ ಮುದ್ರಿತವಾಗಿರುವ ಪ್ರವರ್ಗಗಳು, ಅದರಲ್ಲಿ ತಮ್ಮ ಮೂಲ ಜಾತಿಯೂ ನಮೂದಿಸಿರುವಂತೆ ತಹಸೀಲ್ದಾರ್‌ರಿಂದ ಜಾತಿ ಪ್ರಮಾಣಪತ್ರ ಪಡೆದು ಆನ್‌ಲೈನ್‌ನಲ್ಲಿ ನಮೂದಿಸಬೇಕು. ಈ ವೇಳೆ ಈ ಹಿಂದೆಯೇ ಇದ್ದ ಪರಿಶಿಷ್ಟ ಜಾತಿಯ ವಿದ್ಯಾರ್ಥಿಗಳ ಜಾತಿ ಪ್ರಮಾಣ ಪತ್ರವನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಈಗ ಪರಿಗಣಿಸುತ್ತಿಲ್ಲ ಎಂಬುದನ್ನು ಗಮನಿಸಬೇಕೆಂದು ಸಲಹೆ ನೀಡಿದರು.

ಪರಿಶಿಷ್ಟ ಜಾತಿಯ ಹೊಲೆಯ ಅಥವಾ ಬಲ ಸಂಬಂಧಿತ ಪಿಯುಸಿ ವಿಜ್ಞಾನ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ವೇಳೆ ಆರ್‌ಡಿ ಸಂಖ್ಯೆ ಇರುವ ಪ್ರವರ್ಗ ಬಿ ಎಂದು ಮುದ್ರಿತವಾಗಿರುವ ಜಾತಿ ಪ್ರಮಾಣಪತ್ರವನ್ನೇ ಸಲ್ಲಿಸಬೇಕು. ಇದರಿಂದ ಮಾತ್ರ ಈ ವರ್ಗಕ್ಕೆ ನಿಗದಿಯಾದ ಸೀಟುಗಳ ಹಂಚಿಕೆಗೆ ಪರಿಗಣಿಸಲಾಗುತ್ತದೆ. ಈ ವಿಷಯದಲ್ಲಿ ಗೊಂದಲ ಉಂಟಾದಲ್ಲಿ ದೂ. 98864 53800 ಅನ್ನು ಸಂಪರ್ಕಿಸುವಂತೆ ತಿಳಿಸಿದರು.

ಫೆ.8ರಿಂದ ಹರಿಹರದ ರಾಜನಹಳ್ಳಿಯ ವಾಲ್ಮೀಕಿ ಗುರುಪೀಠದಲ್ಲಿ ವಾಲ್ಮೀಕಿ ಜಾತ್ರೆ

ಮೈಸೂರು,ಫೆ.1(ಜಿಎ)–ದಾವಣಗೆರೆ ಜಿಲ್ಲೆಯ ಹರಿಹರ ತಾಲೂಕು ರಾಜನಹಳ್ಳಿಯಲ್ಲಿನ ಮಹರ್ಷಿ ವಾಲ್ಮೀಕಿ ಗುರು ಪೀಠದಲ್ಲಿ ಫೆ.8 ಮತ್ತು 9ರಂದು ಹಮ್ಮಿಕೊಂಡಿರುವ ವಾಲ್ಮೀಕಿ ಜಾತ್ರೆಯಲ್ಲಿ ಜಿಲ್ಲೆಯಿಂದಲೂ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕೆಂದು ತಾಲೂಕು ನಾಯಕರ ಸಂಘದ ಅಧ್ಯಕ್ಷ ಉದ್ಬೂರು ಮಹದೇವಸ್ವಾಮಿ ಮನವಿ ಮಾಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಶ್ರೀಮಠದ 28ನೇ ವಾರ್ಷಿಕೋತ್ಸವ, ಲಿಂಗೈಕ್ಯ ಜಗದ್ಗುರು ಪುಣ್ಯಾನಂದಪುರಿ ಸ್ವಾಮೀಜಿಯವರ 19ನೇ ಪುಣ್ಯಾರಾಧನೆ ಸಹಾ ನೆರವೇರಲಿವೆ. 18ನೇ ವರ್ಷದ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರ ಪಟ್ಟಾಧಿಕಾರ ಮಹೋತ್ಸವ ಸಹಾ ಜರುಗಲಿದೆ ಎಂದರು.

ಶ್ರೀಮಠದ ವತಿಯಿಂದ ನಡೆಯುತ್ತಿರುವ 7ನೇ ವರ್ಷದ ಜಾಗೃತಿ ಜಾತ್ರೆ ಇದಾಗಿದ್ದು, ಮಹರ್ಷಿ ವಾಲ್ಮೀಕಿಯವರ ರಥೋತ್ಸವದ ಜೊತೆಗೆ ವೇದಿಕೆ ಕಾರ್ಯಕ್ರಮ ಫೆ.9ರಂದು ಇರಲಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸಂಸದ ಬಸವರಾಜ ಬೊಮ್ಮಾಯಿ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಮುಂತಾದ ಗಣ್ಯರು ಪಾಲ್ಗೊಳ್ಳುವರು ಎಂದರು.

ಈ ಸಂದರ್ಭದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಸಾಧಕರನ್ನು ಮಠದ ವತಿಯಿದ ಸನ್ಮಾನಿಸಲಾಗುವುದು. ಜಾತ್ರೆ ಹಿನ್ನೆಲೆಯಲ್ಲಿ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡಿದ್ದಾರೆ. ಇನ್ನು ಈ ಜಾತ್ರೆ ಯಶಸ್ವಿಗೊಳಿಸಲು ಸಮುದಾಯದವರು ಸಹಕರಿಸಬೇಕೆಂದು ಕೋರಿದರು.

ಸುದ್ದಿಗೋಷ್ಠಿಯಲ್ಲಿ ಉಪಾಧ್ಯಕ್ಷ ಜಯಪುರ ಜವರನಾಯಕ, ಕಡಕೊಳ ಕುಮಾರಸ್ವಾಮಿ, ರಮ್ಮನಹಳ್ಳಿ ವೆಂಕಟಯ್ಯ, ಮರಿಸ್ವಾಮಿ ನಾಯಕ, ಕಾಟೂರು ಸಿದ್ದರಾಜು, ಕ್ಯಾತಮಾರನಹಳ್ಳಿ ವೆಂಕಟೇಶ್ ಉಪಸ್ಥಿತರಿದ್ದರು.

ನಾಮಪತ್ರ ಸಲ್ಲಿಕೆ...



ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘಕ್ಕೆ ಫೆ.5ರಂದು ನಡೆಯಲಿರುವ ಆಡಳಿತ ಮಂಡಳಿ ಸದಸ್ಯರ ಚುನಾವಣೆಗೆ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹುಯಿಲಾಳು ರಾಮಸ್ವಾಮಿ ನಾಮಪತ್ರ ಸಲ್ಲಿಸಿದರು. ಈ ವೇಳೆ ಮಾಜಿ ನಿರ್ದೇಶಕರಾದ ಬೋರೇಗೌಡ, ಈರಪ್ಪನಕೊಪ್ಪಲು ಕುಮಾರ್, ಗ್ರಾಪಂ ಸದಸ್ಯರಾದ ಪಿಲ್ಲಳ್ಳಿ ರಾಮಚಂದ್ರ, ರೇವಣ್ಣ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಸೋಮವಾರ 2026

46

ಸಂಪುಟ: 46 | ಸಂಚಿಕೆ: 284 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ನಕ್ಕರೆ ಅದೇ ಸ್ವರ್ಗ

ಮಗ : ಯಾರೋ ಡೊನೇಷನ್ ಕೇಳ್ಕೊಂಡು ಬಂದಿದ್ದಾರೆ.
ಅಪ್ಪ : ಯಾವುದಕ್ಕಂತೆ?
ಮಗ : ಈಜುಕೊಳ ಕಟ್ಟುಸ್ತಾರಂತೆ.
ಅಪ್ಪ : ಹೋಗ್ಲಿ... ಒಂದು ಚೆಂಬು ನೀರು ಕೊಟ್ಟು ಕಳ್ಸು!

ಮೈಸೂರು ಮಿತ್ರ
ಸೋಮವಾರ, ಫೆಬ್ರವರಿ 2, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ..........

ಸ್ವಾರ್ಥಿಯಾಗಿ ಬದುಕುವುದು ಸಾಧನೆಯಲ್ಲ, ಕಷ್ಟದಲ್ಲಿದ್ದವರನ್ನು ಮೇಲಕ್ಕೆತ್ತುವುದು ದೇವರು ಮೆಚ್ಚುವ ಸಾಧನೆ.

ವೇದ ಸುಳ್ಳಾದರೂ
ಗಾದೆ ಸುಳ್ಳಾಗದು { ಉಗಮವಾಗದಿರಲಿ ಹಿಂಸೆ, ಹೆಚ್ಚಿಗೆಯಾಗದಿರಲಿ ಆಸೆ

ನಿಮ್ಮ ಪತ್ರಗಳು

ತನಿಖಾಧಿಕಾರಿ ಆತ್ಮಹತ್ಯೆ ಮಾಡಿಕೊಳ್ಳುವಷ್ಟು ಭಯಂಕರವಾಗಿ ವರ್ತಿಸಬಾರದು



ಮಾನ್ಯರೆ,

ಉದ್ಯಮಿ ಸಿ.ಜೆ.ರಾಯ್ ಅವರ ದುರಂತ ಅಂತ್ಯ ಆಘಾತಕಾರಿಯಾದದ್ದು. ತನಿಖಾಧಿಕಾರಿಯೂ ಸೇರಿದಂತೆ ಯಾವುದೇ ಮನುಷ್ಯ ಪರಿಪೂರ್ಣನಲ್ಲ. ತನಿಖೆ ವೇಳೆ ತನಿಖಾಧಿಕಾರಿಗಳು ಎಲ್ಲಾ ವ್ಯಕ್ತಿಗಳೊಡನೆ ಒಂದೇ ರೀತಿ ವರ್ತಿಸದೇ ತನಿಖೆಗೊಳಪಡುವವರ ಹಿನ್ನೆಲೆ, ಅವರ ಸ್ವಭಾವ, ತನಿಖೆಗೆ ನೀಡುವ ಸಹಕಾರ ಇವುಗಳನ್ನು ಗಮನದಲ್ಲಿಟ್ಟುಕೊಂಡು ವರ್ತಿಸಿದರೆ ಬಹುಶಃ ಇಂತಹ ಘಟನೆಗಳು ಸಂಭವಿಸುವುದಿಲ್ಲ. ಸಿ.ಜೆ.ರಾಯ್ ಅವರ ಸಹೋದರನ ಹೇಳಿಕೆ ಗಮನಿಸಿದಾಗ ತನಿಖಾಧಿಕಾರಿಗಳಿಂದ ಬಹಳ ಒತ್ತಡ ಇದ್ದದ್ದು ತಿಳಿದು ಬರುತ್ತದೆ. ಆರ್ಥಿಕ ಅಪರಾಧಗಳ ಪ್ರಕರಣಗಳಲ್ಲಿ ತೆರಿಗೆ ಏನಾದರೂ ಸೋರಿಕೆ ಆಗಿದ್ದಲ್ಲಿ ಅದರ ವಸೂಲಾತಿಯೇ ಪ್ರಮುಖ ಗುರಿಯಾಗಿರಬೇಕೇ ಹೊರತು, ಪ್ರಶ್ನಾವಳಿಗಳಲ್ಲಿ ಅವರಿಗೆ ಅಪಮಾನಕಾರಿಯಾಗುವಂತಹ ಮಾತುಗಳು ಇರಬಾರದು. ವರದಿಗಳನ್ನು ಗಮನಿಸಿದಾಗ ರಾಯ್‌ರವರು ತಮ್ಮ ಉದ್ದಿಮೆ ಜೊತೆಗೆ ಅನೇಕ ಸಮಾಜಮುಖಿ ಕೆಲಸಗಳನ್ನು ಮಾಡುತ್ತಿರುವುದು ಹಾಗೂ ಅನೇಕ ಗಣ್ಯ ವ್ಯಕ್ತಿಗಳೊಡನೆ ಒಡನಾಟವೂ ಇದ್ದದ್ದು ತಿಳಿದು ಬರುತ್ತದೆ. ಅಂತಹ ಸಜ್ಜನ ವ್ಯಕ್ತಿಯನ್ನು ಕಳೆದು ಕೊಂಡದ್ದು ದುರಾದೃಷ್ಟಕರ. ದ್ವೇಷ ಸಾಧಿಸುವವರಾಗಿದ್ದರೆ ಬಹುಶಃ ಹೇಗಿದ್ದರೂ ಸಾಯಲು ನಿರ್ಧರಿಸಿದ್ದ ವ್ಯಕ್ತಿ ಪಿಸ್ತೂಲ್ ತನ್ನ ಬಳಿ ಇದ್ದಾಗ್ಯೂ ತನಗೆ ಒತ್ತಡ ಹೇರಿದ ವ್ಯಕ್ತಿ ಎದುರಿಗಿದ್ದರೂ ಅವರಿಗೆ ಗುರಿ ಮಾಡದೇ ತಾನೊಬ್ಬನೇ ಸಾಯುತ್ತಿರಲಿಲ್ಲ. ಇಷ್ಟರಿಂದಲೇ ಅರ್ಥೈಸಬಹುದು ಅವರೆಂತಹ ಮೇರು ವ್ಯಕ್ತಿತ್ವದ ವ್ಯಕ್ತಿ ಎಂದು.

–ಕೆ.ಎಂ.ನಾಗರಾಜು, ವಿಜಯನಗರ 1ನೇ ಹಂತ, ಮೈಸೂರು.

ನಗು ಬಾರದೇ ಇರುವುದೇ...!?

ಮಾನ್ಯರೆ,

ಮೈಸೂರು ನಗರ ಪೊಲೀಸರು ರಾತ್ರಿ ಗಸ್ತು ವೇಳೆ ತಪಾಸಣೆ ನಡೆಸುತ್ತಿರುವ ವೈಖರಿ ನಗು ತರುತ್ತದೆ. ನಾವು ವರ್ಷದ 365 ದಿನವೂ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವವರು. ನಾವು ಸಂಚರಿಸುವುದು ಒಂದೇ ಮಾರ್ಗದಲ್ಲಿ. ಪ್ರತಿ ರಾತ್ರಿ ಹೆಬ್ಬಾಳು, ಮೇಟಗಳ್ಳಿ ಪೊಲೀಸರು ನಮ್ಮನ್ನು ತಡೆಯುತ್ತಾರೆ. ಫೋಟೋ ತೆಗೆದು ಕೊಳ್ಳುತ್ತಾರೆ. ನಮ್ಮನ್ನು ತಪಾಸಣೆ ನಡೆಸುವ ವೇಳೆ ಒಂದೇ ದ್ವಿಚಕ್ರ ವಾಹನದಲ್ಲಿ 3 ಜನ ಕುಳಿತು ಹೆಲ್ಮೆಟ್ ಇಲ್ಲದೆ ಸಾಗುತ್ತಿದ್ದರೆ, ಅವರನ್ನು ಬಿಟ್ಟು ನಮ್ಮ ಫೋಟೋ ತೆಗೆಯುವುದರಲ್ಲಿ ನಿರತರಾಗಿರುತ್ತಾರೆ. ಇದರ ಬಗ್ಗೆ ಕೇಳಿದರೆ ಮೊದಲು ನಿಮ್ಮದು ಆಗಲಿ, ಆಮೇಲೆ ಬೇರೆಯವರ ನೋಡೋಣ ಅನ್ನುತ್ತಾರೆ. ನಾವು ರಾತ್ರಿ ಒಂದೂವರೆ–ಎರಡು ಗಂಟೆಯಲ್ಲಿ ಬನ್ನಿಮಂಟಪದಿಂದ ಮಂಜುನಾಥಪುರ, ಬೃಂದಾವನ, ಕುಂಬಾರಕೊಪ್ಪಲು ಹಾದು ಹೋಗುವಾಗ ಹಾದಿಯುದ್ದಕ್ಕೂ ಮದ್ಯಪಾನ, ಡ್ರಗ್ಸ್ ಸೇವಿಸಿ ಮತ್ತಲ್ಲಿ ತೇಲಾಡಿಕೊಂಡು, ವಾಹನ ಚಲಾಯಿಸುವವರೇ ಎದುರಾಗುತ್ತಾರೆ. ಕೆಲ ಪುಂಡರು ನಮ್ಮನ್ನು ಹಿಂಬಾಲಿಸುವುದು ಉಂಟು. ಅಂತಹ ಕಡೆ ಪೊಲೀಸರು ಏಕೆ ತಪಾಸಣೆ ನಡೆಸಲ್ಲ ಎಂಬುದು ಯಕ್ಷ ಪ್ರಶ್ನೆ!

–ರಾಮಚಂದ್ರ, ಹೆಬ್ಬಾಳು, ಮೈಸೂರು.

ಕೆಎಸ್ಆರ್‌ಟಿಸಿಯಲ್ಲಿ ರೋಚಕ ಪ್ರಯಾಣ

ಮಾನ್ಯರೆ,

ನಾವು ದುಡ್ಡು ಕೊಟ್ಟು ಟಿಕೆಟ್ ರಿಸರ್ವ್ ಮಾಡಿ ಜ.25ರಂದು ಭಾನುವಾರ ಮೈಸೂರಿಗೆ ಹೋಗಲು ಶೃಂಗೇರಿಯಿಂದ ರಾತ್ರಿ 8.30ಕ್ಕೆ ಕೆಎಸ್ಆರ್‌ಟಿಸಿ ಬಸ್ ಹತ್ತಿದೆವು. ಬಸ್ ಮಧ್ಯರಾತ್ರಿ 1 ಗಂಟೆ ಸುಮಾರಿಗೆ ಕಾಡಿನ ಮಧ್ಯೆ ಕೆಟ್ಟು ನಿಂತಿತು. ಸುಮಾರು 3 ಗಂಟೆಗಳ ಕಾಲ ಬಸ್‌ನಲ್ಲಿಯೇ ಸುಮ್ಮನೆ ಕುಳಿತಿದ್ದೆವು. ನಮಗೆ ಕಷ್ಟ ಆಗಿದ್ದು ಹೌದು. ಆದರೆ ಡ್ರೈವರ್ ಶ್ರೀಕಂಠ ಮತ್ತು ಕಂಡಕ್ಟರ್ ಅವಿನಾಶ್ ತಾಳ್ಮೆ, ಧೈರ್ಯ ಹೇಳಿ, ಇನ್ನೊಂದು ಕೆಎಸ್ಆರ್‌ಟಿಸಿ ಬಸ್ ಅನ್ನು ಚಿಕ್ಕಮಗಳೂರಿನಿಂದ ತಂದು, ನಮ್ಮನ್ನೆಲ್ಲಾ ಮೈಸೂರಿಗೆ ಬೆಳಿಗ್ಗೆ 4.45ಕ್ಕೆ ಬರಬೇಕಾಗಿದ್ದದ್ದನ್ನು 5.30ಕ್ಕೆ ಅಂದರೆ ಒಂದು ಗಂಟೆಯಷ್ಟೇ ತಡವಾಗಿಯಾದರೂ ಕ್ಷೇಮವಾಗಿ ತಲುಪಿಸಿದರು. ಅವರಿಗೆ ನಮ್ಮ ಕೃತಜ್ಞತೆಗಳು. ಪ್ರಯಾಣಿಕರ ಒತ್ತಡದಿಂದ ತುಂಬಾ ವೇಗವಾಗಿ ಓಡಿಸಿದರೂ ಚಾಕಚಕ್ಯತೆಯಿಂದ ವಾಹನ ಚಲಾಯಿಸಿದರು.

ಬಸ್ ನಿರ್ವಹಣೆ ಚೆನ್ನಾಗಿ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲ. ಸರ್ಕಾರ ವಾಹನಗಳನ್ನು ಸುವ್ಯವಸ್ಥೆಯಲ್ಲಿ ಇಡಬೇಕು. ಚಾಲಕರಿಗೆ ಕಷ್ಟ ಕೊಡಬೇಡಿ. ಅವರೂ ಮನುಷ್ಯರು. ಅವರ ಮಾನಸಿಕ ವಿಷಯಕ್ಕೂ ಗಮನ ಕೊಡಿ ಎಂದು ಸಂಬಂಧಪಟ್ಟವರಿಗೆ ಕೇಳಿಕೊಳ್ಳುತ್ತೇನೆ. ಹಾಗೆಯೇ ನಮ್ಮನ್ನೆಲ್ಲ ಸುರಕ್ಷಿತವಾಗಿ ತಲುಪಿಸಿದ ಅವಿನಾಶ್ ಮತ್ತು ಶ್ರೀಕಂಠ ಅವರಿಗೆ ನಮ್ಮ ಧನ್ಯವಾದಗಳು.

–ಡಾ.ವಾಣಿಶ್ರೀ ಜಗದೀಶ್, ಮೈಸೂರು.

ನೀರು ಪೋಲು ತಡೆಗಟ್ಟಿ, ರಸ್ತೆ ಸುರಕ್ಷತೆಗೆ ಕ್ರಮ ಕೈಗೊಳ್ಳಿ

ಮಾನ್ಯರೆ,

ಮೈಸೂರು ನಗರದ ಹಿನಕಲ್ ಫ್ಲೈ ಓವರ್ ಸರ್ವೀಸ್ ರಸ್ತೆಯಲ್ಲಿರುವ ಗ್ರ್ಯಾಂಡ್ ಮೌರ್ಯ ಹೋಟೇಲ್ ಎದುರು ಕಳೆದ ಕೆಲವು ತಿಂಗಳುಗಳಿಂದ ರಸ್ತೆ ಮೇಲೆ ಉಂಟಾಗಿರುವ ದೊಡ್ಡ ಗುಂಡಿಯಿಂದ ಶುದ್ಧ ಕುಡಿಯುವ ನೀರು ವ್ಯರ್ಥವಾಗಿ ಹರಿದು ಹೋಗುತ್ತಿದೆ. ಗುಂಡಿಯ ಸುತ್ತಲೂ ತಾತ್ಕಾಲಿಕವಾಗಿ ಬ್ಯಾರಿಕೇಡ್‌ಗಳನ್ನು ಹಾಕಲಾಗಿದೆ. ಆದರೆ ಅವುಗಳನ್ನು ಸರಿಯಾಗಿ ಹಾಕದೇ ಇರುವ ಕಾರಣ ರಾತ್ರಿ ವೇಳೆ ಪ್ರಯಾಣ ಮಾಡುವ ವಾಹನ ಚಾಲಕರಿಗೆ ಅಪಾಯವನ್ನುಂಟು ಮಾಡುವ ಸಂಭವ ಹೆಚ್ಚಾಗಿದೆ. ಈ ಮಾರ್ಗದಲ್ಲಿ ಹೆಚ್ಚಾಗಿ ದ್ವಿಚಕ್ರ ವಾಹನಗಳು, ಕಾರುಗಳು, ಪಾದಚಾರಿಗಳು ಸಂಚರಿಸುವುದರಿಂದ ಬ್ಯಾರಿಕೇಡ್ ಗಮನಿಸದೆ ಅಪಘಾತಕ್ಕೊಳಗಾಗುವ ಸಾಧ್ಯತೆ ಹೆಚ್ಚಿದ್ದು, ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಅವ್ಯವಸ್ಥೆಗಳನ್ನು ಸರಿಪಡಿಸಬೇಕೆಂದು ಕೋರುತ್ತೇನೆ.

ಇನ್ನೇನು ಬೇಸಿಗೆ ಸಮೀಪಿಸುತ್ತಿದ್ದು, ಕುಡಿಯುವ ನೀರಿಗೆ ತತ್ವಾರವಾಗುವ ಸಂದರ್ಭದಲ್ಲಿ ನೂರಾರು ಲೀಟರ್ ವ್ಯರ್ಥವಾಗಿ ಹರಿದು ಹೋಗುತ್ತಿರುವುದು ವಿಪರ್ಯಾಸವಾಗಿದೆ. ಸಂಬಂಧಪಟ್ಟ ಮೈಸೂರು ಮಹಾನಗರ ಪಾಲಿಕೆ ಅಧಿಕಾರಿಗಳು ಕೂಡಲೇ ಕಾರ್ಯೋನ್ಮುಖರಾಗಿ ಗುಂಡಿಯನ್ನು ಶಾಶ್ವತವಾಗಿ ಮುಚ್ಚಿ ನೀರಿನ ಸೋರಿಕೆಯನ್ನು ತಡೆಗಟ್ಟುವ ಜೊತೆಗೆ ರಸ್ತೆಯ ಸುರಕ್ಷತೆ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.

–ಸಾಗರ್ ಎಸ್.ಪಿ., ಅವಿಯಾನ ಫೌಂಡೇಷನ್, ಮೈಸೂರು.

ಅರಿವು



ಜಿ. ಎಲ್. ತ್ರಿಪುರಾಂತಕ
ಮೊ: 96866–77284

ದೇಶದ ದಿಕ್ಸೂಚಿ ಬದಲಿಸುವ ಪುಸ್ತಕ ಸಂಸ್ಕೃತಿ...!



“ ಒಂದು ದೇಶದ ಆರ್ಥಿಕತೆ ಸುಧಾರಣೆ ಆದರೆ ಸಾಲದು, ಆ ದೇಶದ ಸಾಮಾಜಿಕ ಪರಿಸ್ಥಿತಿಯೂ ಸಹ ಉತ್ತಮವಾಗಿರಬೇಕು. ಉತ್ತಮ ಸಮಾಜ ನಿರ್ಮಾಣದಲ್ಲಿ ಪುಸ್ತಕ ಸಂಸ್ಕೃತಿಯ ಪಾತ್ರವೂ ಇದೆ. ಜನರಲ್ಲಿ ಪುಸ್ತಕ ಓದುವ ಅಭಿರುಚಿ ಹಾಗೂ ಹವ್ಯಾಸ ಬೆಳೆಯಬೇಕು. ಮನೆಯಲ್ಲಿ ಪುಸ್ತಕ ಸಂಸ್ಕೃತಿ ಇರಬೇಕು. ಶಾಲಾ–ಕಾಲೇಜುಗಳಲ್ಲಿ ಪಠ್ಯಪುಸ್ತಕ ಹೊರತಾಗಿ ವ್ಯಕ್ತಿತ್ವ ವಿಕಸನ, ದೇಶ ಪ್ರೇಮ ಮೂಡಿಸುವಂತಹ ಪುಸ್ತಕ ಓದುವ ಹವ್ಯಾಸವನ್ನು ಕಡ್ಡಾಯಗೊಳಿಸಬೇಕು. ಬೆಳಗಾವಿ ಜಿಲ್ಲೆಯ ಹಲಗ ಎಂಬ ಗ್ರಾಮದಲ್ಲಿ ಒಂದು ವಿಶೇಷ ಪ್ರಯೋಗ ನಡೆದಿದೆ. ರಾತ್ರಿ 7.00ಕ್ಕೆ ಸೈರನ್ ಶಬ್ದ ಹೊರಟಾಗ ಮನೆಯಲ್ಲಿನ ಟಿ.ವಿ. ಹಾಗೂ ಮೊಬೈಲ್ ಇನ್ನಿತರ ಡಿಜಿಟಲ್ ಉಪಕರಣಗಳು ಬಂದಾಗಬೇಕು. 2.00 ಗಂಟೆಗಳ ಕಾಲ ವಿದ್ಯಾರ್ಥಿಗಳಿಗೆ ಅಧ್ಯಯನ ಸಮಯವಾಗಿ ಇರಬೇಕು ಎಂಬ ನಿಯಮವನ್ನು ಇಡೀ ಗ್ರಾಮಸ್ಥರು ಅನುಸರಿಸುತ್ತಿದ್ದಾರೆ. ಅದರಿಂದ ಮಕ್ಕಳಲ್ಲಿ ಧನಾತ್ಮಕ ಚಿಂತನೆಗಳು ಮೂಡುತ್ತಿದ್ದು, ಅಧ್ಯಯನಕ್ಕೆ ಅವಶ್ಯವಾದ ಏಕಾಗ್ರತೆ ಉಂಟಾಗುತ್ತಿದೆ. ಇದೇ ರೀತಿ ನೂತನ ಕ್ರಮವನ್ನು ಎಲ್ಲಾ ಗ್ರಾಮಗಳಲ್ಲಿ ಅನುಸರಿಸಿದರೆ, ಪುಸ್ತಕ ಸಂಸ್ಕೃತಿ ಬೆಳೆಯುವ ಸಾಧ್ಯತೆ ಇದೆ.

ಮಂಡ್ಯ ಜಿಲ್ಲೆ ಪಾಂಡವಪುರದ 75 ವರ್ಷ ವಯೋಮಾನದ ಶ್ರೀ ಅಂಕೇಗೌಡರ ಪುಸ್ತಕ ಪ್ರೇಮಕ್ಕೆ ದೇಶದ ಅತ್ಯುನ್ನದ ಪುರಸ್ಕಾರಗಳಲ್ಲಿ ಒಂದಾದ ಪದ್ಮಶ್ರೀ ಪುರಸ್ಕಾರ ದೊರಕಿರುವುದಕ್ಕೆ ಅವರಿಗೆ ಅಭಿನಂದನೆಗಳು. 20 ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ, ವಿದ್ಯಾರ್ಥಿಗಳು, ಶಿಕ್ಷಕರು, ಸಾಹಿತ್ಯಾಸಕ್ತರಿಗೆ ಜ್ಞಾನದಾಸೋಹ ಮಾಡುತ್ತಿರುವ ಶ್ರೀಯುತರ ಸೇವೆ ಕಡಿಮೆಯೇನಲ್ಲ. ತಮ್ಮ ಸಂಪಾದನೆಯ ಬಹುಪಾಲು ಹಣವನ್ನು ಸುಮಾರು 50 ವರ್ಷಗಳ ಕಾಲ ಪುಸ್ತಕ ಖರೀದಿಗೆ ವ್ಯಯ ಮಾಡಿರುವುದು ಶ್ಲಾಘನೀಯ. ಮೈಸೂರಿನ ಆದಿಚುಂಚನಗಿರಿ ಬಿ.ಎಡ್. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿರುವ ಶ್ರೀ ಬೆಟ್ಟಸ್ವಾಮಿ ಅವರು ಸಹ ತಮ್ಮ ಮನೆಯ ಹಾಲ್, ಬೆಡ್‌ರೂಂ ಅಷ್ಟೇ ಅಲ್ಲದೆ ಅಡುಗೆ ಮನೆಯಲ್ಲಿಯೂ ಸಹ ಸಾವಿರಾರು ಪುಸ್ತಕಗಳ ಸಂಗ್ರಹ ಮಾಡಿ, ಸಾಹಿತ್ಯಾಸಕ್ತರಿಗೆ ಎರವಲು ನೀಡುತ್ತಾ ಸಾಹಿತ್ಯ ಸೇವೆ ಮಾಡುವ ಮೂಲಕ ಈ ಪೀಳಿಗೆಯ ಶಿಕ್ಷಕ ಸಮುದಾಯಕ್ಕೆ ಮಾದರಿಯಾಗಿದ್ದಾರೆ. ಹಾಗೆಯೇ ಕನ್ನಡ ಪುಸ್ತಕ ಪ್ರಾಧಿಕಾರದಿಂದ ಮನೆಗೊಂದು ಗ್ರಂಥಾಲಯ ಅನುಷ್ಠಾನ ಎಂಬ ವಿನೂತನ ಕಾರ್ಯಕ್ರಮ ರೂಪಿಸಿದ್ದು, ಗ್ರಂಥಾಲಯ ಹೊಂದಿರುವ ಸಾಹಿತ್ಯಾಸಕ್ತರನ್ನು ಗುರುತಿಸಿ, ಅವರ ಮನೆಯಲ್ಲಿ ಒಂದು ಸಮಾರಂಭ ಏರ್ಪಡಿಸಿ, ಅವರಿಗೆ ಅಭಿನಂದನಾ ಪತ್ರ ನೀಡುತ್ತಿರುವುದು ಒಂದು ಸಾಹಿತ್ಯಾಸಕ್ತರಿಗೆ ಪ್ರೋತ್ಸಾಹ ನೀಡುವ ಕಾರ್ಯವಾಗಿದೆ.

ಪುಸ್ತಕಂ ಹಸ್ತ ಭೂಷಣಂ ಎಂಬ ಮಾತೊಂದಿದೆ. ಆದರೆ ಇಂದಿನ ಕಾಲಘಟ್ಟದಲ್ಲಿ **ಜಂಗಮವಾಣಿಂ ಹಸ್ತ ಭೂಷಣಂ** ಎಂದು ಬದಲಿಸಿಕೊಳ್ಳುವ ಮಟ್ಟಿಗೆ ಮೊಬೈಲ್ ಫೋನ್ ಕ್ರಾಂತಿಯಾಗಿದೆ. ಇಂದು ಪುಸ್ತಕ ಪ್ರಿಯರಾದ ವಿದ್ಯಾವಂತರ ಕೈಯ್ಯಲ್ಲಿ ಮಾತ್ರ ಪುಸ್ತಕ ನೋಡಬಹುದು, ಆದರೆ ಈಗ ಅವಿದ್ಯಾವಂತರೂ ಸಹ ಮೊಬೈಲ್ ಪ್ರಿಯರಾಗಿ ತಮ್ಮದೇ ಲೋಕದಲ್ಲಿ ವಿಹರಿಸುತ್ತಿದ್ದಾರೆ. ಪುಸ್ತಕವನ್ನು ಒಳ್ಳೆಯ ಸ್ನೇಹಿತ, ಮಾರ್ಗದರ್ಶಕ, ದಾರ್ಶನಿಕ ಎನ್ನುತ್ತಾರೆ. ಅಷ್ಟೇ ಅಲ್ಲ ದಣಿವರಿಯದ ಶಿಕ್ಷಕ ಅಂತಲೂ ಕರೆಯುತ್ತಾರೆ. ವ್ಯಕ್ತಿತ್ವ ವಿಕಸನ ಮಾಡುವಂತಹ ಶಕ್ತಿ ಪುಸ್ತಕಗಳಿಗೆ ಇದೆ. ನಿತ್ಯ ಅರ್ಧಗಂಟೆ ಪುಸ್ತಕ ಓದುವವನಿಗೆ ಯಾವ ಧ್ಯಾನ ಮಾಡುವ ಅಗತ್ಯವಿಲ್ಲ. ಮಸ್ತಕವನ್ನು ಹೊಕ್ಕಿರುವ ಅನೇಕ ವಿಕೃತ ವೈರಸ್‌ಗಳನ್ನು ಹೊಡೆದೋಡಿಸುವ ಶಕ್ತಿ ಪುಸ್ತಕಗಳಿಗೆ ಇದೆ. ಪುಸ್ತಕ ಸಂಸ್ಕೃತಿಯು ಮನುಷ್ಯನನ್ನು ಸುಸಂಸ್ಕೃತನನ್ನಾಗಿ ಮಾಡುತ್ತದೆ. ದೇಶದ ಪ್ರತಿಯೊಂದು ಗ್ರಂಥಾಲಯದಲ್ಲಿ ಓದುಗರು ತುಂಬಿ ತುಳುಕುತ್ತಿದ್ದರೆ, ಆ ದೇಶದ ಜೈಲುಗಳು ಅಪರಾಧಿಗಳಿಂದ ತುಂಬಿ ತುಳುಕುತ್ತಿರುವುದಿಲ್ಲ ಎಂಬುದು ಸತ್ಯ.

ಕ್ರಿಪೂ 5ನೇ ಶತಮಾನದಲ್ಲಿ ಗುಪ್ತ ಸಾಮ್ರಾಜ್ಯದ ಕುಮಾರ ಗುಪ್ತ ಸ್ಥಾಪಿಸಿದ ನಳಂದ ವಿಶ್ವವಿದ್ಯಾನಿಲಯದಲ್ಲಿ ಖಗೋಳ ವಿಜ್ಞಾನ, ಜ್ಯೋತಿಷ್ಯ, ಗಣಿತಶಾಸ್ತ್ರ, ಇತಿಹಾಸ, ಆರೋಗ್ಯ, ಲೋಹ ಶಾಸ್ತ್ರಗಳ ಕುರಿತು ಸಂಶೋಧನೆ ನಡೆಯುತ್ತಿತ್ತು. 12ನೇ ಶತಮಾನದಲ್ಲಿ ಬೌದ್ಧ ಧರ್ಮ ನಾಶಪಡಿಸಿ ಇಸ್ಲಾಂ ಧರ್ಮ ವಿಸ್ತರಣೆಗೆ ಈ ವಿಶ್ವವಿದ್ಯಾನಿಲಯ ನಾಶ ಮಾಡಲಾಯಿತು. ಟರ್ಕಿ ಸೇನೆ ಇಡೀ ವಿಶ್ವವಿದ್ಯಾನಿಲಯಕ್ಕೆ ಬೆಂಕಿ ಹಚ್ಚಿತ್ತು. ಈ ವಿಶ್ವವಿದ್ಯಾನಿಲಯದ ಗ್ರಂಥಾಲಯವು ಮೂರು ತಿಂಗಳುಗಳ ಕಾಲ ಉರಿಯುತ್ತಿತ್ತು ಎಂದರೆ ಊಹೆ ಮಾಡಿಕೊಳ್ಳಿ, ಅಲ್ಲಿ ಎಷ್ಟು ಲಕ್ಷ ಪುಸ್ತಕಗಳು ಇದ್ದವು ಎಂದು. ಭಾರತ ಹಾವಾಡಿಗರ ದೇಶವಲ್ಲ, ಬದಲಿಗೆ ವಿಶ್ವಕ್ಕೆ ಅನೇಕ ಕೊಡುಗೆಗಳನ್ನು ಕೊಟ್ಟ ದೇಶ ಎಂಬ ವಿಚಾರಕ್ಕೆ ಹೆಮ್ಮೆಪಡಬೇಕು.

ಇಂದಿನ ಸರ್ಕಾರಗಳು ಶಾಲೆಗಳಲ್ಲಿ ಅನ್ನ ದಾಸೋಹವನ್ನು ಮಾಡುತ್ತಿರುವುದು ಒಂದು ಕಡೆ ಶ್ಲಾಘನೀಯ ಕಾರ್ಯ ಎನಿಸಿದರೂ ಜ್ಞಾನ ದಾಸೋಹ ಮಾಡುವಲ್ಲಿ ವಿಫಲವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಪ್ರತಿ ಹಳ್ಳಿಯಲ್ಲಿಯೂ ಒಂದು ಗ್ರಂಥಾಲಯ, ಪ್ರತಿ ಶಾಲೆಯಲ್ಲಿಯೂ ಒಂದು ಗ್ರಂಥಾಲಯ ಸ್ಥಾಪಿಸಿ ಮಕ್ಕಳನ್ನು ಓದುವ ಹವ್ಯಾಸಕ್ಕೆ ರೂಢಿಸುವ ಕಾರ್ಯವನ್ನು ಪೋಷಕರು, ಶಿಕ್ಷಕರು ಹಾಗೂ ಸರ್ಕಾರದ ಸಂಬಂಧಪಟ್ಟ ಇಲಾಖೆ ಮಾಡಬೇಕಾದ ಅವಶ್ಯವಿದೆ. ಭಾರತದ ಅಸ್ಮಿತೆ ಉಳಿದಿರುವುದು ಗ್ರಾಮಗಳಲ್ಲಿ, ಆದರೆ ಅಂತಹ ಗ್ರಾಮಗಳು ಇಂದು ಜ್ಞಾನ ಪಿಪಾಸುಗಳಿಂದ ಕೂಡಿರಬೇಕಿತ್ತು, ಬದಲಿಗೆ ಬಹುಪಾಲು ಗ್ರಾಮಗಳು ಮದ್ಯ ಹಾಗೂ ಧೂಮಪಾನ ವ್ಯಸನಿಗಳಿಂದ ಕೂಡಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ರಾಜಕಾರಣಿಗಳಲ್ಲಿ ದೇಶ, ರಾಜ್ಯ, ಜನತೆ ಕುರಿತು ಹಿತಾಸಕ್ತಿ ಕಡಿಮೆಯಾಗಿ, ಸ್ವಹಿತಾಸಕ್ತಿ ಹೆಚ್ಚಾಗುತ್ತಿದೆ. ಅದಕ್ಕೆ ಕಾರಣ ಅವರ ಮನಸ್ಥಿತಿ. ಅಂತಹ ಮನಸ್ಥಿತಿಯನ್ನು ಬದಲಿಸುವ ಶಕ್ತಿ ಪುಸ್ತಕಗಳಿಗೆ ಇದೆ. ಹಿಂದೆ ಎಂ.ಪಿ. ಪ್ರಕಾಶ್, ವೀರಪ್ಪ ಮೊಯ್ಲಿ, ರಾಮಕೃಷ್ಣ ಹೆಗ್ಗಡೆಯವರಂತಹ ರಾಜಕಾರಣಿಗಳಿಗೆ ಸಾಹಿತ್ಯ ಕ್ಷೇತ್ರದಲ್ಲಿ ಆಸಕ್ತಿ ಇತ್ತು. ಆ ಕಾರಣಕ್ಕೆ ಸ್ವಚ್ಛ ಆಡಳಿತ ನಡೆಯುತ್ತಿತ್ತು. ಆದರೆ ಇಂದು ಪುಸ್ತಕ ಸಂಸ್ಕೃತಿ ಕಡಿಮೆಯಾಗಿ ಧನ ಗಳಿಕೆ ಸಂಸ್ಕೃತಿ ಹೆಚ್ಚಾದ ಕಾರಣಕ್ಕೆ ಮಡಿವಂತಿಕೆ ಕಡಿಮೆಯಾಗಿ, ಎಲ್ಲರೂ ಹಣ ಮಾಡುವ ಇರಾದೆಯಲ್ಲಿಯೇ ಇದ್ದಾರೆ. ಇಂತಹ ಜಂಜಾಟದಲ್ಲಿ ಪುಸ್ತಕ ಸಂಸ್ಕೃತಿಯೇ ನಶಿಸಿ ಹೋಗುತ್ತಿರುವುದು ಆತಂಕಕಾರಿ ವಿಷಯವಾಗಿದೆ. ಇಂದಿನ ಮಾಹಿತಿ ತಂತ್ರಜ್ಞಾನ ಯುಗದಲ್ಲಿ ವಿದ್ಯಾರ್ಥಿಗಳು ಪುಸ್ತಕಗಳನ್ನು ಕಡೆಗಣಿಸಿ, ವಿದ್ಯುನ್ಮಾನ ಯಂತ್ರಗಳಿಂದ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಪುಸ್ತಕವನ್ನು ಓದಿ ಮನನ ಮಾಡಿಕೊಂಡು ಜ್ಞಾನ ಭಂಡಾರವನ್ನು ವೃದ್ಧಿಸಿಕೊಳ್ಳುವ ಬದಲು, ಮಾಹಿತಿ ಕಣಜವಾಗಿ ಮಾರ್ಪಾಡಾಗುತ್ತಿದ್ದಾರೆ. ಪುಸ್ತಕ ಸಂಸ್ಕೃತಿ ಕಡಿಮೆಯಾದ ಕಾರಣಕ್ಕೆ ಸಮಾಜದಲ್ಲಿ ವಿಕೃತಿ ಮೆರೆಯುತ್ತಿದೆ.

ಮನೆಯಲ್ಲಿ ಅಲಂಕಾರಿಕ ವಸ್ತುಗಳು ಎಷ್ಟೇ ಇದ್ದರೂ, ಪುಸ್ತಕಗಳ ಕಪಾಟು ಒಂದಿದ್ದರೆ ಆ ಮನೆಯ ಮೌಲ್ಯವೇ ಬೇರೆ. ಮನೆಯಲ್ಲಿ ಸದಸ್ಯರಿಗೆ ಓದುವ ಹವ್ಯಾಸವಿದ್ದರೆ ಆ ಮನೆಯಲ್ಲಿ ಸದಾಚಾರ, ಸದ್ವಿಚಾರಗಳು ಇರುತ್ತವೆ. ಇತ್ತೀಚಿಗೆ ಪುಸ್ತಕ ಓದಲು ಸಮಯವಿಲ್ಲ ಎಂದು ಭಾವಿಸುವ ಗೃಹಿಣಿಯರು ಆಧುನಿಕ ತಂತ್ರಜ್ಞಾನದ 'ಆಡಿಯೋ ಬುಕ್'ಗೆ ಮೊರೆ ಹೋಗಿದ್ದಾರೆ. ಇದೊಂದು ಆರೋಗ್ಯಕರ ಬೆಳವಣಿಗೆಯಾಗಿದೆ. ಟಿ.ವಿ.ಯಲ್ಲಿ ಬರುವ ಮನೆಹಾಳು ಧಾರಾವಾಹಿಗಳು ಮನಸ್ಸಿನಲ್ಲಿ ಋಣಾತ್ಮಕ ಚಿಂತನೆಗಳನ್ನು ಮೂಡಿಸಿದರೆ, ಪುಸ್ತಕದ ಓದು ಅಥವಾ ಕೇಳು ಧನಾತ್ಮಕ ಚಿಂತನೆಯನ್ನು ಮೂಡಿಸುತ್ತದೆ. ಸಾಮಾಜಿಕ ಜಾಲತಾಣಗಳು, ರೀಲ್ಸ್‌ಗಳು ಕೀಳು ಅಭಿರುಚಿಯನ್ನು ಹುಟ್ಟುಹಾಕಿದರೆ, ಪುಸ್ತಕಗಳು ಉತ್ಕೃಷ್ಟವಾದ ಅಭಿರುಚಿಗಳಿಗೆ ಕಾರಣವಾಗುತ್ತವೆ. ಮಾನಸಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಪುಸ್ತಕಗಳ ಪಾತ್ರ ಅಪಾರ. ಪುಸ್ತಕಗಳು ಮನೋವೈದ್ಯನಾಗಿ ಕೆಲಸ ಮಾಡುತ್ತವೆ ಎಂದರೆ ಅತಿಶಯೋಕ್ತಿಯಿಲ್ಲ.

ಇಂದು ಪುಸ್ತಕ ಬರೆಯುವವರ ಸಂಖ್ಯೆ ಹೆಚ್ಚಳವಾಗಿದೆ. ಆದರೆ ಅದಕ್ಕೆ ಅನುಗುಣವಾಗಿ ಪುಸ್ತಕ ಓದುವವರ ಸಂಖ್ಯೆ ವೃದ್ಧಿಸಿಲ್ಲ. 1980–90ರ ದಶಕದಲ್ಲಿ ಪಟ್ಟಣ ಹಾಗೂ ನಗರ ಪ್ರದೇಶಗಳಲ್ಲಿ ಸರ್ಕಾರಿ ಗ್ರಂಥಾಲಯಗಳಲ್ಲದೆ, ಖಾಸಗಿ ಸರ್ಕುಲೇಟಿಂಗ್ ಲೈಬ್ರರಿಗಳು ಜನಪ್ರಿಯವಾಗಿದ್ದವು. ದಿನಕ್ಕೆ 50 ಪೈಸೆ, ಒಂದು ರೂಪಾಯಿ ಕೊಟ್ಟು ಎರವಲು ಪಡೆದು ಆಸಕ್ತ ಜನ ಪುಸ್ತಕಗಳನ್ನು ಓದುತ್ತಿದ್ದರು. ಬಾಡಿಗೆ ಮೊತ್ತ ಜಾಸ್ತಿಯಾಗುತ್ತದೆ ಎಂದು ಬೇಗ ಬೇಗನೆ ಪುಸ್ತಕಗಳನ್ನು ಓದುತ್ತಿದ್ದರು. ಆ ಕಾಲಘಟ್ಟದಲ್ಲಿ ಸಮಾಜದ ಸ್ವಾಸ್ಥ್ಯ ಆರೋಗ್ಯಕರವಾಗಿತ್ತು. ಯಾವಾಗ ಟಿ.ವಿ. ಹಾವಳಿ ಹೆಚ್ಚಾಯಿತೋ ಸರ್ಕುಲೇಟಿಂಗ್ ಲೈಬ್ರರಿಗಳು ಬಾಗಿಲು ಮುಚ್ಚಿದವು. ವಿ.ಸಿ.ಪಿ., ವಿ.ಸಿ.ಡಿ, ವೀಡಿಯೋ ಕ್ಯಾಸೆಟ್, ಸಿ.ಡಿ. ಲೈಬ್ರರಿಗಳು ತಲೆ ಎತ್ತಿದವು. 2000 ಇಸವಿಯ ನಂತರ ಯಾವಾಗ ಮೊಬೈಲ್ ಲಗ್ಗೆ ಇಟ್ಟಿತೋ ಆಗ ಪುಸ್ತಕಗಳು, ಸಿ.ಡಿ.ಗಳು ಎಲ್ಲವೂ ಜನ ಮಾನಸದಿಂದ ಮರೆಯಾದವು. ಅಂಗೈಯಲ್ಲಿಯೇ ಮನರಂಜನೆ ಸಿಗುತ್ತಿರುವಾಗ ಪುಸ್ತಕಗಳ ಓದುವ ಗೊಡವೆ ಏಕೆ ಎಂಬುದು ಜನರ ಧೋರಣೆಯಾಯಿತು.

ಪುಸ್ತಕ ಸಂತೆಗಳಲ್ಲಿ, ಪುಸ್ತಕ ಮಾರಾಟ ಮಳಿಗೆಗಳಲ್ಲಿ ನೂರು ರೂಪಾಯಿ ಪುಸ್ತಕಕ್ಕೂ ರಿಯಾಯಿತಿ ಇಲ್ಲವೇ ಎಂದು ಕೇಳುವ ಜನ, ಸವೆದು ಹೋಗುವ ಶೂ/ಚಪ್ಪಲಿಗಳಿಗೆ ಎಷ್ಟೇ ಹಣವಾದರೂ ಕೊಟ್ಟು ತರುತ್ತಾರೆ. ಪಾನಿಪೂರಿ/ ಗೋಬಿ ಮಂಚೂರಿ ತಿನ್ನಲು ಸಾವಿರಾರು ರೂಪಾಯಿಗಳನ್ನು ಉದಾರವಾಗಿ ಖರ್ಚು ಮಾಡುವ ಶಿಕ್ಷಿತ ಜನ ಪುಸ್ತಕ ಖರೀದಿಯಲ್ಲಿ ಮಾತ್ರ ಜಿಪುಣತನ ಅನುಸರಿಸುತ್ತಾರೆ. ಎಷ್ಟೋ ಜನ ಸಾಹಿತ್ಯಾಸಕ್ತರು ಶುಭ ಸಮಾರಂಭಗಳಲ್ಲಿ ವಚನ ತಾಂಬೂಲ, ಅಕ್ಷರ ತಾಂಬೂಲ ಎಂದು ಮೌಲ್ಯಯುತ ಪುಸ್ತಕಗಳನ್ನು ತಾಂಬೂಲದ ರೂಪದಲ್ಲಿ ಕೊಟ್ಟರೂ ಅವುಗಳನ್ನು ಮನೆಗೆ ತೆಗೆದುಕೊಂಡು ಹೋಗುವ ಕನಿಷ್ಠ ಸೌಜನ್ಯವೂ ಜನರಿಗೆ ಇಲ್ಲ. ಲೆಕ್ಕಾಚಾರದ ಜನರಿಗೆ ಚಟ್ನಿ ಮಾಡಲು ಉಪಯೋಗವಾಗುವ ತೆಂಗಿನಕಾಯಿಯನ್ನು ಮರೆಯದೆ ಕೊಂಡೊಯ್ಯುತ್ತಾರೆ, ಆದರೆ ಪುಸ್ತಕವನ್ನು ಕೊಂಡಯ್ಯದೇ ಇರುವುದು ವಿಪರ್ಯಾಸ.

ಎಷ್ಟೋ ಜನರ ಮನೆಯಲ್ಲಿ ಪುಟ್ಟ ಗ್ರಂಥಾಲಯವಿರುತ್ತದೆ. ಇದನ್ನು ಕಂಡ ಅವರ ಬಂಧು ಬಳಗ ಗ್ರಂಥಾಲಯದ ಮೌಲ್ಯ ಅರಿಯದೆ, ಪುಸ್ತಕಗಳ ಖರೀದಿ ಬದಲು ಚಿನ್ನ ಬೆಳ್ಳಿ ಖರೀದಿಸಿದ್ದರೆ ಇಂದು ಬಂಪರ್ ಬೆಲೆ ಸಿಗುತ್ತಿತ್ತು, ಪುಸ್ತಕ ಓದಿಯಾದ ಮೇಲೆ ಏನು ಮಾಡುತ್ತೀರಿ? ಮಾರಲು ಹೊರಟರೆ ಅರ್ಧ ಬೆಲೆಯೂ ಸಿಗುವುದಿಲ್ಲ. ತೂಕಕ್ಕೆ ಹಾಕಿದರೆ ಮುಖಬೆಲೆಯಲ್ಲಿ ಶೇ.5ರಷ್ಟು ಹಣವೂ ಸಿಗುವುದಿಲ್ಲ ಎಂದು ಲೆಕ್ಕಾಚಾರ ಹಾಕಿ, ಗ್ರಂಥಾಲಯ ಹೊಂದಿರುವ ಸಾಹಿತ್ಯ ಪ್ರೇಮಿಗಳಿಗೆ ತಣ್ಣೀರೆರಚಿ, ಅವರನ್ನು ವ್ಯವಹಾರ ಜ್ಞಾನವಿಲ್ಲದ ಅಯೋಗ್ಯ ಎಂದು ಜರಿಯುವವರಿದ್ದಾರೆ. ಆದರೆ ಅವರ ಮಾತಿಗೆ ಬೆಲೆ ಕೊಡದೆ 'ಕತ್ತೆಗೆ ಏನು ಗೊತ್ತು ಕಸ್ತೂರಿ ಗುಣ' ಎಂದು ಭಾವಿಸಿ, ಗ್ರಂಥ ಸಂಗ್ರಹ ಮಾಡುವವರು ತಮ್ಮ ಕಾಯಕ ಮುಂದುವರಿಸಬೇಕು.

ಪಾಶ್ಚಾತ್ಯ ದೇಶಗಳಲ್ಲಿ, ಐರೋಪ್ಯ ದೇಶಗಳಲ್ಲಿ ಲೇಖಕರು ಹಾಗೂ ಪುಸ್ತಕೋದ್ಯಮಕ್ಕೆ ವಿಶೇಷವಾದ ಬೆಲೆ ಇದೆ. ನಮ್ಮಲ್ಲಿ ಕೆಲವು ಖ್ಯಾತ ನಾಮ ಲೇಖಕರನ್ನು ಹೊರತುಪಡಿಸಿ ಉಳಿದ ಲೇಖಕರನ್ನು ಸಮಾಜದಲ್ಲಿ ಕೀಳಾಗಿ ಕಾಣಲಾಗುತ್ತದೆ. ಲೇಖಕರು ಕೆಲಸಕ್ಕೆ ಬಾರದವರು ಎಂದು ಪರಿಗಣಿಸುವ ಸಮಾಜ, ಅದೇ ಜ್ಯೋತಿಷಿಗಳು, ರಿಯಲ್ ಎಸ್ಟೇಟ್‌ನವರಿಗೆ ವಿಶೇಷವಾದ ಗೌರವ ನೀಡುತ್ತದೆ. ಎಲ್ಲದಕ್ಕೂ ಮೂಲ ಹಣ ಗಳಿಕೆ. ನಮ್ಮ ದೇಶದ ಪುಸ್ತಕೋದ್ಯಮ ಲಾಭದಲ್ಲಿದ್ದರೆ ಲೇಖಕರಿಗೂ ಸ್ಟಾರ್ ವ್ಯಾಲ್ಯೂ ಇರುತ್ತಿತ್ತು.

ಒಂದು ದೇಶದ ಆರ್ಥಿಕತೆ ಸುಧಾರಣೆ ಆದರೆ ಸಾಲದು, ಆ ದೇಶದ ಸಾಮಾಜಿಕ ಪರಿಸ್ಥಿತಿಯೂ ಸಹ ಉತ್ತಮವಾಗಿರಬೇಕು. ಉತ್ತಮ ಸಮಾಜ ನಿರ್ಮಾಣದಲ್ಲಿ ಪುಸ್ತಕ ಸಂಸ್ಕೃತಿಯ ಪಾತ್ರವೂ ಇದೆ. ಜನರಲ್ಲಿ ಪುಸ್ತಕ ಓದುವ ಅಭಿರುಚಿ ಹಾಗೂ ಹವ್ಯಾಸ ಬೆಳೆಯಬೇಕು. ಮನೆಯಲ್ಲಿ ಪುಸ್ತಕ ಸಂಸ್ಕೃತಿ ಇರಬೇಕು. ಶಾಲಾ ಕಾಲೇಜುಗಳಲ್ಲಿ ಪಠ್ಯಪುಸ್ತಕ ಹೊರತಾಗಿ ವ್ಯಕ್ತಿತ್ವ ವಿಕಸನ, ದೇಶ ಪ್ರೇಮ ಮೂಡಿಸುವಂತಹ ಪುಸ್ತಕ ಓದುವ ಹವ್ಯಾಸವನ್ನು ಕಡ್ಡಾಯಗೊಳಿಸಬೇಕು. ಬೆಳಗಾವಿ ಜಿಲ್ಲೆಯ ಹಲಗ ಎಂಬ ಗ್ರಾಮದಲ್ಲಿ ಒಂದು ವಿಶೇಷ ಪ್ರಯೋಗ ನಡೆದಿದೆ. ರಾತ್ರಿ 7ಕ್ಕೆ ಸೈರನ್ ಶಬ್ದ ಹೊರಟಾಗ ಮನೆಯಲ್ಲಿನ ಟಿವಿ ಹಾಗೂ ಮೊಬೈಲ್ ಇನ್ನಿತರ ಡಿಜಿಟಲ್ ಉಪಕರಣಗಳು ಬಂದಾಗಬೇಕು. 2.00 ಗಂಟೆಗಳ ಕಾಲ ವಿದ್ಯಾರ್ಥಿಗಳಿಗೆ ಅಧ್ಯಯನ ಸಮಯವಾಗಿ ಇರ ಬೇಕು ಎಂಬ ನಿಯಮವನ್ನು ಇಡೀ ಗ್ರಾಮಸ್ಥರು ಅನುಸರಿಸು ತ್ತಿದ್ದಾರೆ. ಅದರಿಂದ ಮಕ್ಕಳಲ್ಲಿ ಧನಾತ್ಮಕ ಚಿಂತನೆಗಳು ಮೂಡು ತ್ತಿದ್ದು, ಅಧ್ಯಯನಕ್ಕೆ ಅವಶ್ಯವಾದ ಏಕಾಗ್ರತೆ ಉಂಟಾಗುತ್ತಿದೆ. ಇದೇ ರೀತಿ ನೂತನ ಕ್ರಮವನ್ನು ಎಲ್ಲಾ ಗ್ರಾಮಗಳಲ್ಲಿ ಅನುಸರಿಸಿದರೆ, ಪುಸ್ತಕ ಸಂಸ್ಕೃತಿ ಬೆಳೆಯುವ ಸಾಧ್ಯತೆ ಇದೆ.

ಹೂರಣ : ಒಬ್ಬ ಓದುಗ ನಿಧನ ಹೊಂದುವ ಮುನ್ನ ಸಾವಿರ ಬದುಕನ್ನು ಬದುಕಿರುತ್ತಾನೆ.–ಆರ್.ಆರ್.ಮಾರ್ಟಿನ್

ಬುದ್ಧಗಯಾ: ಫೆ.8–9ಕ್ಕೆ ರಾಷ್ಟ್ರೀಯ ಅಧಿವೇಶನ

ಬೆಂಗಳೂರು, ಫೆ.1– ಅಖಿಲ ಭಾರತ ಬೌದ್ಧರ ವೇದಿಕೆಯು ಫೆ.8 ಮತ್ತು 9ರಂದು ಬುದ್ಧಗಯಾದಲ್ಲಿ ರಾಷ್ಟ್ರೀಯ ಅಧಿವೇಶನ ಹಮ್ಮಿಕೊಂಡಿದೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವೇದಿಕೆಯ ರಾಜ್ಯ ಸಂಚಾಲಕ ಎಂ. ವೆಂಕಟಸ್ವಾಮಿ, ಈ ಅಧಿವೇಶನಕ್ಕೆ ದಕ್ಷಿಣ ಭಾರತದಿಂದ 100 ಬೌದ್ಧ ಬಿಕ್ಕುಗಳು ತೆರಳಲಿದ್ದಾರೆ ಎಂದು ಮನವಿ ಮಾಡಿದರು.

ಬಸ್ ಮೇಲೆ, ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನ ಜಾಹೀರಾತಿಗೆ ನಿರ್ಬಂಧ

ಮೈಸೂರು, ಫೆ.1(ಪಿಎಂ)– ನಾಲ್ಕು ನಿಗಮಗಳ ಸಾರಿಗೆ ಬಸ್‌ಗಳು ಹಾಗೂ ಬಸ್ ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಸೇವನೆಗೆ ಪ್ರಚೋದಿಸುವ ನೇರವಾದ ಅಥವಾ ಪರೋಕ್ಷವಾದ ಜಾಹೀರಾತು ಗಳಿಗೆ ಅವಕಾಶ ನೀಡದಂತೆ ಸದರಿ ನಿಗಮಗಳ ವ್ಯವಸ್ಥಾಪಕರಿಗೆ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಕಟ್ಟುನಿಟ್ಟಿನ ಸೂಚನೆ ನೀಡಿದ್ದಾರೆ. ಈ ಸಂಬಂಧ ಟಿಪ್ಪಣಿ ಹೊರಡಿಸಿ ಸಚಿವರು, ನಿಗಮಗಳ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಸಾರ್ವಜನಿಕ ಹಿತದೃಷ್ಟಿಯಿಂದ ಈ ಕೂಡಲೇ ಜಾರಿಗೆ ಬರುವಂತೆ ಸಾರಿಗೆ ಸಂಸ್ಥೆಯ ಬಸ್‌ಗಳಲ್ಲಿ ಹಾಗೂ ಬಸ್



ನಿಲ್ದಾಣಗಳಲ್ಲಿ ತಂಬಾಕು ಉತ್ಪನ್ನಗಳ ಸೇವನೆಗೆ ಪ್ರಚೋದಿಸುವ ನೇರವಾದ ಅಥವಾ ಪರೋಕ್ಷವಾದ ಯಾವುದೇ ಜಾಹೀರಾತುಗಳನ್ನು ಇನ್ನು ಮುಂದೆ ಪ್ರಚಾರ ಮಾಡಬಾರದು. ಈಗಾಗಲೇ ಅಂತಹ ಜಾಹೀರಾತುಗಳನ್ನು ಬಸ್‌ಗಳಲ್ಲಿ ಹಾಗೂ ಬಸ್ ನಿಲ್ದಾಣಗಳಲ್ಲಿ ಅಳವಡಿಸಿದ್ದರೆ, ಅದನ್ನು ತೆಗೆಯಲು ಒಂದು ನಿರ್ದಿಷ್ಟ ಸಮಯ ನಿಗದಿಪಡಿಸಿ, ಅಷ್ಟರೊಳಗೆ ಸದರಿ ಜಾಹೀರಾತುಗಳನ್ನು ತೆಗೆದು ಹಾಕುವಂತೆ ಸಂಬಂಧಪಟ್ಟವರಿಗೆ ಕಟ್ಟುನಿಟ್ಟಾಗಿ ನಿರ್ದೇಶನ ನೀಡಬೇಕೆಂದು ನಾಲ್ಕು ನಿಗಮಗಳ ವ್ಯವಸ್ಥಾಪಕ ನಿರ್ದೇಶಕರಿಗೆ ಟಿಪ್ಪಣಿ ಮೂಲಕ ಸೂಚನೆ ನೀಡಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...

ಇಂದಿನ ಪಂಚಾಂಗ

**2.2.2026 ಸೋಮವಾರ, ಮಳೆ ನಕ್ಷತ್ರ: ಶ್ರವಣ 24.01.2026ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಶುಕ್ಲ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಆಶ್ಲೇಷ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ**

- **ಬೇವಿನಮರದ ಶ್ರೀ ಯಲ್ಲಮ್ಮ ದೇವಸ್ಥಾನ:** ಬೇವಿನ ಮರದ ಶ್ರೀ ಯಲ್ಲಮ್ಮನವರ 78ನೇ ವರ್ಷದ ಮಹೋತ್ಸವ, ಬೆಳಗ್ಗೆ 9.30ಕ್ಕೆ ಮಹಾಪೂಜೆ. ಸ್ಥಳ: ದೇವಸ್ಥಾನದ ಪ್ರಾಂಗಣ, ನಾಲಾ ಬೀದಿ, ಕೆ.ಆರ್ ಮೊಹಲ್ಲಾ.
- **ಕಾವೇರಿ ಆಯುರ್ವೇದ ಆಸ್ಪತ್ರೆ** : ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.
- **ಶ್ರೀ ಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, ಶ್ರೀ ಸುಬ್ರಹ್ಮಣ್ಯಸ್ವಾಮಿ ಟೆಂಪಲ್ ಟ್ರಸ್ಟ್:** 60ನೇ ವರ್ಷದ ತೈಪೂಸಂ ಮಹೋತ್ಸವ–2026, ಬೆಳಗ್ಗೆಯಿಂದ ಕ್ಷೀರ, ರುದ್ರ, ಪಂಚಾಮೃತ, ಗಂಧ, ವಿಭೂತಿ, ಅಭಿಷೇಕ, ನೈವೇದ್ಯ, ಸಹಸ್ರನಾಮ ಅರ್ಚನೆ, ಮಧ್ಯಾಹ್ನ 1ಕ್ಕೆ ಅನ್ನ ಸಂತರ್ಪಣೆ, ಸ್ಥಳ: ದೇವಸ್ಥಾನದ ಪ್ರಾಂಗಣ, ವಿಶ್ವೇಶ್ವರ ನಗರ.
- **ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ (ಎಸ್‌ಎನ್‌ಪಿಎಸಿ), ಮೈಸೂರು:** ಮಂಜೀರ ಮಹೋತ್ಸವ (ಭಾರತೀಯ ಕಲೆಗಳ ಸಂಭ್ರಮ) ಸಂಜೆ. 5.45ಕ್ಕೆ ಉದ್ಘಾಟನೆ: ಕೆಎಸ್‌ಜಿಎಚ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವ ವಿದ್ಯಾಲಯದ ಕುಲಪತಿ ಪ್ರೊ.ನಾಗೇಶ್.ವಿ ಬೆಟ್ಟಕೋಟೆ, ಮುಖ್ಯ ಅತಿಥಿಗಳು: ಹರಿ ವಿದ್ಯಾಲಯ ಕಾರ್ಯದರ್ಶಿ ಹೆಚ್.ಆರ್.ಭಗವಾನ್, ವಿಪಿ ಕಲ್ಚರ್ ಕ್ಲಬ್: ಪಾರ್ಟ್ನರ್– ಸ್ಟಾರ್ ಮ್ಯೂಸಿಕ್, ಸೃಜನಾತ್ಮಕ ನಿರ್ದೇಶಕಿ ಶ್ರೀಮತಿ ಮಹತೀ ವಿಜಯ ಪ್ರಕಾಶ್, ಅಧ್ಯಕ್ಷತೆ: ನೃತ್ಯಗಿರಿ ಪ್ರದರ್ಶನಾ ಕಲೆ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕಿ ಡಾ.ಕೃಪಾ ಪಡ್ಕೆ, ಶ್ರೀ ನಟರಾಜ ಪ್ರದರ್ಶನಾ ಕಲಾ ಕೇಂದ್ರ (ಎಸ್‌ಎನ್‌ಪಿಎಸಿ) ಅಧ್ಯಕ್ಷ ಬಾಲರಾಜು ಎಂ.ಕೆ, ಸಂಜೆ 6.30ರಿಂದ ತುಮಕೂರಿನ ವಿದ್ವಾನ್ ಡಾ.ಸಾಗರ್ ಟಿ.ಎಸ್, ಸಂಜೆ 7.30ರಿಂದ ಮೈಸೂರಿನ ಕಲಾ ಮಂಡಲಂ ಸುಚಿತ್ರಾ ಅನಿಲ್ ಅವರಿಂದ ಭರತನಾಟ್ಯ. ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.
- **ಸಂಚಲನ (ಮೈಸೂರು), ಅರಳಿ ಸೇವಾ ಟ್ರಸ್ಟ್ (ಬೆಂಗಳೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಚಲನ ದಶಮಾನೋತ್ಸವ–ರಂಗ ಸಂಭ್ರಮ, ಸಭಾ ಕಾರ್ಯಕ್ರಮ, ಮುಖ್ಯ ಅತಿಥಿಗಳು : ಸಮಾಜ ಸೇವಕ ಡಾ. ರಘುರಾಮ್ ವಾಜಪೇಯಿ, ಛೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರೀಸ್–ಮೈಸೂರು ಅಧ್ಯಕ್ಷ ಕೆ.ಬಿ. ಲಿಂಗರಾಜು, ಯುವ ಮುಖಂಡ ಸುರೇಶ್, ಕಸಾಪ ನಿಕಟಪೂರ್ವ ಅಧ್ಯಕ್ಷ ಚಂದ್ರಶೇಖರ್, ಜಿಬಿಎಸ್, ನಮ್ಮ ರಾಗ ತಂಡದಿಂದ ಜಾನಪದ ಗೀತೆಗಳು, ವೃತ್ತಿಪರ ತಂಡ (ಬೆಂಗಳೂರು)ದಿಂದ ದು–ರೋಧನ ನಾಟಕ, ಸ್ಥಳ: ಕಿರುರಂಗ ಮಂದಿರ, ಸಂಜೆ 6 ಗಂಟೆಯಿಂದ.
- **ವ್ಯವಸ್ಥಾಪಕರು:** ಭರತ ಹುಣ್ಣಿಮೆ ಅಂಗವಾಗಿ ಓಂ ಶ್ರೀ ಎಲ್ಲಮ್ಮ ತಾಯಿ ಅಮ್ಮನವರ 22ನೇ ವರ್ಷದ ಪೂಜಾ ಮಹೋತ್ಸವ, ಸಂಜೆ 6 ಗಂಟೆಗೆ ವಿಶೇಷ ಪೂಜೆ, ಪ್ರಸಾದ ವಿನಿಯೋಗ, ಸ್ಥಳ: ಶ್ರೀ ರಾಜರಾಜೇಶ್ವರಿ ನಿಲಯ, 11 ನೇ ಕ್ರಾಸ್, ರಾಮಾನುಜ ರಸ್ತೆ, ಕೆ.ಆರ್ ಮೊಹಲ್ಲಾ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 2 ಸೋಮವಾರ 2026

ಸಂಪುಟ: 46 | ಸಂಚಿಕೆ: 284 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, *website: www.mysurumithra.com*

ತೆರಿಗೆ ತಂಟೆ-ತಕರಾರಿಲ್ಲದ 'ನಿರ್ಮಲಾ' ಬಜೆಟ್



9ನೇ ಬಜೆಟ್ ಮಂಡಿಸಿದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್

ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಬರೋಬ್ಬರಿ 53.5 ಲಕ್ಷ ಕೋಟಿ ಬೃಹತ್ ಗಾತ್ರದ ಕೇಂದ್ರ ಆಯ–ವ್ಯಯವನ್ನು ಮಂಡಿಸಿದರು. ಇದರೊಂದಿಗೆ ಸತತ 9ನೇ ಬಜೆಟ್ ಮಂಡಿಸಿದ ದಾಖಲೆಯನ್ನೂ ಬರೆ ದರು. ಒಂದರ್ಥದಲ್ಲಿ ತೆರಿಗೆ ತಂಟೆ ತಕರಾರಿಲ್ಲದ 'ನಿರ್ಮಲಾ' ಬಜೆಟ್ ಇದು.

ಕೆನ್ನೇರಳೆ ಬಣ್ಣದ ಸಾಂಪ್ರದಾಯಿಕ ಕಾಂಜೀವರಂ ರೇಷ್ಮೆ ಸೀರೆಯುಟ್ಟು ಸಂಸತ್ ಭವನ ಪ್ರವೇಶಿಸಿದ ಸಚಿವರು, ವಿಶೇಷ ಮೇಘ ಪೂರ್ಣಿಮಾ ಹಿನ್ನೆಲೆಯಲ್ಲಿ ಬಜೆಟ್ ಮಂಡಿಸಿದರು. ಎಲ್ಲರಿಗೂ ರವಿದಾಸ್ ಜಯಂತಿಯ ಶುಭಾಶಯ ಹೇಳುವ ಮೂಲಕ ಬೆಳಗ್ಗೆ 11.06ಕ್ಕೆ ಬಜೆಟ್ ಓದಲು ಆರಂಭಿಸಿದರು. ಸುಮಾರು 85 ನಿಮಿಷಗಳ ಕಾಗದ ರಹಿತ ಬಜೆಟ್ ಮಂಡನೆ ಮೂಲಕ ಪ್ರಸಕ್ತ ವರ್ಷದ ದೇಶದ ಅಭಿವೃದ್ಧಿ ದಿಕ್ಸೂಚಿಯನ್ನು ಪ್ರಸ್ತುತಪಡಿಸಿದರು.

ಬಹುನಿರೀಕ್ಷಿತ 2026–27ನೇ ಸಾಲಿನ ಬಜೆಟ್ ಮಂಡನೆ ಆರಂಭದಲ್ಲಿ ನಮ್ಮ ಸರ್ಕಾರ ಬಂದಾಗಿನಿಂದ ಬಡತನದ ಪ್ರಮಾಣ ಕಡಿಮೆಯಾಗಿದೆ. ನಮ್ಮ ದೇಶ ವಿಶ್ವದಲ್ಲೇ ವೇಗವಾಗಿ ಬೆಳೆಯುತ್ತಿದೆ. ಸರ್ಕಾರದ ಪರವಾಗಿ ನಿಂತ ಭಾರತದ ಜನತೆಗೆ ಧನ್ಯವಾದಗಳು. 'ಕರ್ತವ್ಯ ಭವನದಲ್ಲಿ ರಚಿಸಲಾದ ಮೊದಲ ಬಜೆಟ್‌ನಲ್ಲಿ ಮೂರು ಪ್ರಮುಖ ಕರ್ತವ್ಯಗಳಿಗೆ ಆದ್ಯತೆ ನೀಡಲಾಗಿದೆ' ಎಂದರು.

ಮೊದಲನೆಯದಾಗಿ ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವುದು ಮತ್ತು ಅಸ್ಥಿರ ಜಾಗತಿಕ ಚಲನಶೀಲತೆಗೆ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವ ಮೂಲಕ ಆರ್ಥಿಕ ಬೆಳವಣಿಗೆ ವೇಗ ಹೆಚ್ಚಿಸುವುದು **ಎರಡನೆಯದಾಗಿ** ಜನರ ಆಕಾಂಕ್ಷೆಗಳನ್ನು ಈಡೇರಿಸುವುದರ ಜೊತೆಗೆ ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಭಾರತದ ಸಮೃದ್ಧಿಯ ಹಾದಿಯಲ್ಲಿ ಪಾಲುದಾರರನ್ನಾಗಿ ಮಾಡುವುದು. **ಮೂರನೆಯದಾಗಿ** ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಸಂಕಲ್ಪದಡಿ ಪ್ರತಿಯೊಬ್ಬರಿಗೂ ಸಂಪನ್ಮೂಲ ಬಳಕೆಯ ಸಮಾನ ಅವಕಾಶಗಳನ್ನು ಖಚಿತಪಡಿಸಿಕೊಳ್ಳುವುದಕ್ಕೆ ಪ್ರಾಧಾನ್ಯತೆ ನೀಡಲಾಗಿದೆ ಎಂದು ತಿಳಿಸಿದರು. ಕೃಷಿ ಕ್ಷೇತ್ರಕ್ಕೆ ಎಐ ಅತ್ಯಾಧುನಿಕ ಅಭಿವೃದ್ಧಿ ಸ್ಪರ್ಶ, ಗ್ರಾಮೀಣ ಮಹಿಳೆಯರಿಗೆ ಉದ್ಯಮಾವಕಾಶ, ■ 10ನೇ ಪುಟಕ್ಕೆ

ಆದಾಯ ತೆರಿಗೆ ವಿವರ ಸಲ್ಲಿಕೆ ಗಡುವು ಪರಿಷ್ಕರಣೆ

ನವದೆಹಲಿ: ಪರಿಷ್ಕೃತ ಆದಾಯ ತೆರಿಗೆ(ಐಟಿ) ವಿವರ ಸಲ್ಲಿಸುವ ಗಡುವನ್ನು ಡಿಸೆಂಬರ್ 31ರ ಬದಲು ಮಾರ್ಚ್ 31ರವರೆಗೆ ವಿಸ್ತರಿಸುವ ಘೋಷಣೆಯನ್ನು ಮಾಡಲಾಗಿದೆ. ಸರ್ಕಾರವು ಉದಾರೀಕೃತ ರವಾನೆ ಯೋಜನೆ ಅಡಿ ಯಲ್ಲಿ ಶಿಕ್ಷಣ ಮತ್ತು ವೈದ್ಯಕೀಯ ಉದ್ದೇಶಗಳಿಗಾಗಿ ವಿದೇಶಕ್ಕೆ ಕಳುಹಿಸುವ ಹಣದ ಮೇಲಿನ ಮೂಲದಲ್ಲಿ ಸಂಗ್ರಹಿಸಲಾದ ತೆರಿಗೆಯನ್ನು ಶೇ.5 ರಿಂದ ಶೇ.2ಕ್ಕೆ, ಹೀಗೆಯೇ ವಿದೇಶಿ ಪ್ರವಾಸ ಕೈಗೊಳ್ಳುವವರ ಮೇಲಿನ ಟಿಸಿಎಸ್ ಅನ್ನು ಶೇ.5 ರಿಂದ ಶೇ.2ಕ್ಕೆ ಇಳಿಸುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ. ಸಣ್ಣ ತೆರಿಗೆದಾರರಿಗೆ ನಿಯಮ ಆಧಾರಿತ ಸ್ವಯಂಚಾಲಿತ ವ್ಯವಸ್ಥೆಯನ್ನು ಪರಿಚಯಿಸಲಾಗುವುದು. ಮೋಟಾರು ಅಪಘಾತ ಹಕ್ಕುಗಳ ನ್ಯಾಯಮಂಡಳಿ ನೀಡುವ ಪರಿಹಾರ ಅಥವಾ ಪ್ರಶಸ್ತಿಗಳಿಗೆ ಆದಾಯ ತೆರಿಗೆ ವಿಧಿಸುವುದಿಲ್ಲ ಎಂದು ಇದೇ ವೇಳೆ ತಿಳಿಸಿದ್ದಾರೆ.

ಸಿಬಿಐಗೆ 1,105 ಕೋಟಿ ಅನುದಾನ

ನವದೆಹಲಿ: ಬಜೆಟ್‌ನಲ್ಲಿ ಕೇಂದ್ರ ಸರ್ಕಾರ, ಕೇಂದ್ರೀಯ ತನಿಖಾ ಸಂಸ್ಥೆ(ಸಿಬಿಐ)ಗೆ 1,104.98 ಕೋಟಿ ರೂ.ಗಳ ಅನುದಾನ ಘೋಷಿಸಿದೆ. ಇದು ಕಳೆದ ಹಣಕಾಸು ವರ್ಷಕ್ಕಿಂತ ಶೇ.4.4ರಷ್ಟು ಹೆಚ್ಚಳವಾಗಿದೆ. 2025–26ನೇ ಸಾಲಿನ ಬಜೆಟ್ ಅಂದಾಜಿನಲ್ಲಿ ಸಂಸ್ಥೆಯು 997.62 ಕೋಟಿ ರೂ. ಘೋಷಿಸಿ, ನಂತರ ಅದನ್ನು 1,058.3 ಕೋಟಿ ರೂ.ಗಳಿಗೆ ಪರಿಷ್ಕರಿಸ ಲಾಗಿತ್ತು. ಸಾರ್ವಜನಿಕ ಸೇವಕರು, ಖಾಸಗಿ ವ್ಯಕ್ತಿಗಳು, ಸಂಸ್ಥೆಗಳು ಮತ್ತು ಇತರ ಗಂಭೀರ ಅಪರಾಧಗಳ ಪ್ರಕರಣಗಳ ವಿರುದ್ಧದ ಭ್ರಷ್ಟಾಚಾರ ಪ್ರಕರಣಗಳಲ್ಲಿ ತನಿಖೆ ಮತ್ತು ವಿಚಾರಣೆಯನ್ನು ವಹಿಸಲಾಗಿರುವ ಕೇಂದ್ರೀಯ ತನಿಖಾ ದಳದ ಸ್ಥಾಪನೆ–ಸಂಬಂಧಿತ ವೆಚ್ಚಗಳಿಗಾಗಿ ನಿಬಂಧನೆಯನ್ನು ವಿಧಿಸಲಾಗಿದೆ.

ಯುವ ಜನತೆಗೆ ಅವಕಾಶಗಳ ಹೆಬ್ಬಾಗಿಲು

ನವದೆಹಲಿ, ಫೆ.1– ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ ಮಂಡಿಸಿದ 2026–27ನೇ ಸಾಲಿನ ಬಜೆಟ್ ಅನ್ನು ಐತಿಹಾಸಿಕ ಎಂದು ಬಣ್ಣಿಸಿರುವ ಪ್ರಧಾನ ಮಂತ್ರಿ ನರೇಂದ್ರ ಮೋದಿ, ಇದು ದೇಶದ 140 ಕೋಟಿ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸುತ್ತದೆ ಮತ್ತು ಸುಧಾರಣೆಯ ಹಾದಿಯನ್ನು ಮತ್ತಷ್ಟು ಬಲಪಡಿಸಲಿದ್ದು, ವಿಕಸಿತ ಭಾರತ ಸಂಕಲ್ಪದ ಸ್ಪಷ್ಟ ರೋಡ್ ಮ್ಯಾಪ್ ಆಗಿದೆ ಎಂದಿದ್ದಾರೆ. ಬಜೆಟ್ ಮಂಡನೆ ನಂತರ ಪ್ರತಿಕ್ರಿಯಿಸಿರುವ ಪ್ರಧಾನಿ ಮೋದಿ, ಬಜೆಟ್ ಅವಕಾಶಗಳ ಹೆಬ್ಬಾಗಿಲು ಎಂದು ಕೊಂಡಾಡಿದ್ದಾರೆ.



ದೇಶದ ಸ್ತ್ರೀ ಶಕ್ತಿಯ ಬಲವನ್ನು ಬಜೆಟ್ ಪ್ರತಿಬಿಂಬಿಸುತ್ತದೆ. ಸೀತಾರಾಮನ್ ಸತತ ಒಂಬತ್ತನೇ ಬಾರಿಗೆ ದೇಶದ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆಯನ್ನು ನಿರ್ಮಿಸಿದ್ದಾರೆ. ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ್ ಭಾರತ್' ಉಪಕ್ರಮಗಳಿಗೆ ಹೊಸ ವೇಗವನ್ನು ನೀಡಲು ಈ ವರ್ಷದ ಬಜೆಟ್ ಮಹತ್ವಾಕಾಂಕ್ಷೆಯ ಮಾರ್ಗಸೂಚಿಯನ್ನು ನೀಡುತ್ತದೆ ಎಂದು ಪ್ರಧಾನಿ ತಿಳಿಸಿದ್ದಾರೆ.

ಈ ಬಜೆಟ್ 2047ರೊಳಗೆ ವಿಕಸಿತ ಭಾರತದ ನಮ್ಮ ಪ್ರಯಾಣಕ್ಕೆ ಅಡಿಪಾಯವಾಗಿದೆ. ಈ ವರ್ಷದ ಬಜೆಟ್ ಭಾರತದ ಸುಧಾರಣೆಗೆ ಹೊಸ ಶಕ್ತಿ ■ 10ನೇ ಪುಟಕ್ಕೆ

ದೇಶೀಯ ವಸ್ತುಗಳು ಅಗ್ಗ; ಆಮದು ವಸ್ತುಗಳು ದುಬಾರಿ

ನವದೆಹಲಿ: ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹಲವು ಉತ್ಪನ್ನಗಳ ಮೇಲಿನ ತೆರಿಗೆಯನ್ನು ಇಳಿಕೆ ಮಾಡುವುದಾಗಿ ಘೋಷಿಸಿದ್ದಾರೆ. ಮುಖ್ಯವಾಗಿ 'ಮೇಕ್ ಇನ್ ಇಂಡಿಯಾ'ಗೆ ಒತ್ತು ನೀಡುವ ಮೂಲಕ ಎಲೆಕ್ಟ್ರಾನಿಕ್ಸ್ ಮತ್ತು ಔಷಧಿಗಳ ಬೆಲೆಯನ್ನು ಇಳಿಕೆ ಮಾಡಲು ಸರ್ಕಾರ ನಿರ್ಧರಿಸಿರುವುದು ಬಡ ಹಾಗೂ ಮಧ್ಯಮ ವರ್ಗದವರಿಗೆ ಸಮಾಧಾನ ತಂದಿದೆ. ಆದರೆ, ಕೆಲವು ಆಮದು ವಸ್ತುಗಳ ಮೇಲಿನ ಸುಂಕದ ಹೊಂದಾಣಿಕೆಗಾಗಿ ಕೆಲವೊಂದು ವಸ್ತುಗಳು ದುಬಾರಿಯಾಗಲಿವೆ.

ಅಗ್ಗ

● ಕ್ರೀಡಾ ಉಪಕರಣಗಳು ● ಮೈಕ್ರೋವೇವ್ ಓವನ್‌ಗಳು ● ಸೌರ ಫಲಕಗಳು ● ಇವಿ ಬ್ಯಾಟರಿಗಳು ● ಬಟ್ಟೆ ● ಸ್ಮಾರ್ಟ್ ಫೋನ್‌ಗಳು ● ಔಷಧಿಗಳು ● ಅಪರೂಪದ ಕಾಯಿಲೆಗಳ ಔಷಧ ● ಆಟೋಇಮ್ಯೂನ್ ಔಷಧಿಗಳು ● ಕ್ಯಾನ್ಸರ್ ಮತ್ತು ಮಧುಮೇಹ ಔಷಧಿ ● ಚರ್ಮದ ಉತ್ಪನ್ನಗಳು ● ವಿಮಾನ ಬಿಡಿಭಾಗಗಳು ● ಬಯೋಗ್ಯಾಸ್ ● ಸಿಎನ್‌ಜಿ ● ಸೆಣಬು ● ಬೀಡಿ ● ಬ್ಯಾಟರಿ ● ಪಾದರಕ್ಷೆ ● ಸೋಲಾರ್ ಬಿಡಿಭಾಗ ● ವಿದೇಶ ಪ್ರಯಾಣ ● ಸ್ಥಳೀಯ ಟ್ಯಾಬ್



ದುಬಾರಿ...

● ಆಮದಾಗುವ ಮದ್ಯ ● ಸಿಗರೇಟ್ ● ಪಾನ್ ಮಸಾಲ ● ಆಮದು ಯಂತ್ರೋಪಕರಣಗಳು ● ಹೊರ ದೇಶದ ಆಮದು ವಸ್ತುಗಳು ● ಖನಿಜ, ಕಬ್ಬಿಣದ ಅದಿರು ● ಕಲ್ಲಿದ್ದಲು ● ಆಮದಾಗುವ ಪ್ಲಾಸ್ಟಿಕ್ ವಸ್ತುಗಳು ● ನಿರ್ದಿಷ್ಟ ಟೆಲಿಕಾಂ ಉಪಕರಣಗಳು ● ಗುಜರಿ ವಸ್ತು ● ವಿಡಿಯೋ ಗೇಮ್ಸ್ ● ಸಾಫ್ಟ್‌ವೇರ್ ● ಛತ್ರಿಗಳು ● ಡಿಜಿಟಲ್ ಕ್ಯಾಮರಾ ● ಐಷಾರಾಮಿ ಕೈಗಡಿಯಾರ ● ರಸಗೊಬ್ಬರ ● ಆಮದಾಗುವ ಟಿವಿ ● ಚಲನಚಿತ್ರೀಕರಣಕ್ಕೆ ಬಳಸುವ ಉಪಕರಣಗಳು

ತಂಬಾಕು, ಮದ್ಯ ಪ್ರಿಯರಿಗೆ ಶಾಕ್



ನವದೆಹಲಿ: ನಿರೀಕ್ಷೆಯಂತೆ ಈ ಬಾರಿ ಕೇಂದ್ರ ಬಜೆಟ್, ತಂಬಾಕು ಮತ್ತು ಮದ್ಯಪ್ರಿಯರಿಗೆ ಶಾಕ್ ನೀಡಿದೆ. ಅಬಕಾರಿ ಸುಂಕ ಮತ್ತು ಆರೋಗ್ಯ ಸೆಸ್ ಹೆಚ್ಚಳದಿಂದಾಗಿ ಸಿಗರೇಟ್, ಪಾನ್ ಮಸಾಲಾ ಮತ್ತು ಇತರ ತಂಬಾಕು ಉತ್ಪನ್ನಗಳು ಇನ್ನು ದುಬಾರಿಯಾಗಲಿವೆ. ಬಜೆಟ್ ಮಂಡನೆಗೂ ಮೊದಲೇ ಈ ವಿಷಯ ಮಾರಾಟಗಾರರಿಗೆ ಹಾಗೂ ಖರೀದಿಗಾರರಿಗೆ ಗೊತ್ತಿತ್ತು. ಹಾಗಾಗಿ ಬಜೆಟ್ ಮುನ್ನವೇ ತುಸು ಹೆಚ್ಚಿನ ಬೆಲೆಗೆ ಮಾರಾಟ ಮಾಡಲಾರಂಭಿಸಿದ್ದರು. ದರದಲ್ಲಿ ಕೊಂಚ ಏರಿಕೆ ಆಗಬಹುದೆಂದು ಎಣಿಸಿದ್ದ ವ್ಯಾಪಾರಿಗಳು ಹಾಗೂ ಗ್ರಾಹಕರಿಗೆ ಹೆಚ್ಚು ದುಬಾರಿಯಾಗುವ ಚಿಂತೆ ಶುರುವಾಗಿದೆ. ಆದರೆ ಬೀಡಿ ಸೇದುವವರಿಗೆ ಕೊಂಚ ರಿಲೀಫ್ ಸಿಕ್ಕಿದೆ.

ರಾಜ್ಯಗಳಿಗೆ ಶೇ.41ರಷ್ಟು ತೆರಿಗೆ ಹಂಚಿಕೆ ಘೋಷಣೆ



ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಭಾನುವಾರ 2026-27ನೇ ಸಾಲಿನ ಬಜೆಟ್ ಮಂಡಿಸಿದರು.



ನವದೆಹಲಿ: ಕೃತಕ ಬುದ್ಧಿಮತ್ತೆ, ವಾಣಿಜ್ಯ, ಕೃಷಿ ಮತ್ತು ಗಂಭೀರ ಕಾಯಿಲೆಗಳಿಗೆ ಈ ಬಾರಿ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ.

ಹಲವಾರು ರಫ್ತು-ಸಂಬಂಧಿತ ನಿಯಮಗಳಲ್ಲಿ ಗಮನಾರ್ಹ ಬದಲಾವಣೆಗಳನ್ನು ತರಲು ಮುಂದಾಗಿದ್ದು, ಅಮೆರಿಕ ಸುಂಕಗಳ ಸವಾಲುಗಳನ್ನು ನಿವಾರಿಸಲು ವ್ಯಾಪಾರದ ಕಡೆಗೆ ಉದಾರೀಕರಣವನ್ನು ತೋರಿಸಿದೆ. ತಮಿಳುನಾಡು ಮತ್ತು ಇತರ ಕರಾವಳಿ ರಾಜ್ಯಗಳಲ್ಲಿ ವಾಣಿಜ್ಯ ಬೆಳೆಗಳಿಗೆ ಹಣಕಾಸು ಸಚಿವರು ಹಲವಾರು ಯೋಜನೆಗಳನ್ನು ಘೋಷಿಸಿದ್ದಾರೆ.

ರಾಷ್ಟ್ರೀಯ ಬೆಳವಣಿಗೆಯ ದರವು ಸುಮಾರು ಶೇ.7ರಷ್ಟು ಎಂದು ಸರ್ಕಾರ ಅಂದಾಜಿಸಿದ್ದು, ಸರ್ಕಾರವು ದೇಶೀಯ ಉತ್ಪಾದನಾ ಸಾಮರ್ಥ್ಯಗಳು, ನಾಗರಿಕ-ಪ್ರಯೋಜನ ಯೋಜನೆಗಳು, ಸಾರ್ವಜನಿಕ ಹೂಡಿಕೆ, ಹಣಕಾಸು ಸ್ಥಿರತೆ, ಹಣಕಾಸಿನ ಕೊರತೆ ಮತ್ತು ರಚನಾತ್ಮಕ ಸುಧಾರಣೆಗಳ ಮೇಲೆ ಬಜೆಟ್ ಕೇಂದ್ರೀಕರಿಸಿದೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸುಂಕಗಳಿಗೆ ಪ್ರತಿಕ್ರಿಯೆಯಾಗಿ, ಉತ್ಪಾದನಾ ವಲಯದ ಮೇಲೆ ತಮ್ಮ ಗಮನವನ್ನು ಕೇಂದ್ರೀಕರಿಸಲಾಗಿದೆ. 16ನೇ ಹಣಕಾಸು ಆಯೋಗ ಶಿಫಾರಸು ಮಾಡಿದಂತೆ ರಾಜ್ಯಗಳಿಗೆ ಶೇ.41 ರಷ್ಟು ತೆರಿಗೆ ಹಂಚಿಕೆ ಮಾಡುವುದಾಗಿ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ. ಅದರಂತೆ 2026-27ರಲ್ಲಿ ರಾಜ್ಯಗಳಿಗೆ 1.4 ಲಕ್ಷ ಕೋಟಿ ರೂಪಾಯಿಗಳನ್ನು ಹಂಚಿಕೆ ಮಾಡಲಾಗಿದೆ. ಈ ಹಣವನ್ನು ಹಣ ಕಾಸು ಆಯೋಗದ ಅನುದಾನಗಳ ಹೆಸರಿನಲ್ಲಿ ಒದಗಿಸಲಾಗಿದ್ದು, ಇದು ಕೇಂದ್ರ ಸರ್ಕಾರವು ರಾಜ್ಯಗಳಿಗೆ ಒದಗಿ ಸುವ ಹೆಚ್ಚುವರಿ ಸಹಾಯವಾಗಿದೆ. ಗ್ರಾಮೀಣ ಸಂಸ್ಥೆಗಳು, ನಗರ ಸ್ಥಳೀಯ ಸಂಸ್ಥೆಗಳು ಮತ್ತು ವಿಪತ್ತು ನಿರ್ವಹಣೆಗೆ ಈ ಮೊತ್ತವನ್ನು ಬಿಡುಗಡೆ ಮಾಡಲಾಗಿದೆ. ಪ್ರವಾಹ, ಬರ ಮತ್ತು ಭೂಕಂಪಗಳಂತಹ ವಿಪತ್ತುಗಳನ್ನು ಎದುರಿಸಲು ಗ್ರಾಮ ಪಂಚಾಯತ್‌ಗಳು, ಪುರಸಭೆಗಳು ಮತ್ತು ರಾಜ್ಯಗಳಿಗೆ ಹಣಕಾಸಿನ ನೆರವು ನೀಡಲಾಗಿದೆ.

2025ರ ನವೆಂಬರ್ 17ರಂದು 16ನೇ ಹಣಕಾಸು ಆಯೋಗವು ತನ್ನ ವರದಿಯನ್ನು ರಾಷ್ಟ್ರಪತಿಗಳಿಗೆ ಸಲ್ಲಿಸಿದೆ. ಸಂವಿಧಾನದ 281ನೇ ವಿಧಿಯ ಅಡಿಯಲ್ಲಿ, ಆಯೋಗದ ಶಿಫಾರಸುಗಳ ಮೇಲೆ ತೆಗೆದುಕೊಂಡ ಕ್ರಮ ವರದಿಯನ್ನು ಸರ್ಕಾರ ಸಂಸತ್ತಿಗೆ ಸಲ್ಲಿಸುತ್ತದೆ. ಹಣಕಾಸು ಆಯೋಗವು ಮಾಡಿದ ಶಿಫಾರಸಿನಂತೆ, ರಾಜ್ಯದ ಪಾಲನ್ನು ಶೇ.41ರಲ್ಲಿಯೇ ಇರಿಸಿ ಕೊಳ್ಳಲು ಸರ್ಕಾರ ಒಪ್ಪಿಕೊಂಡಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಕೇಂದ್ರ ಬಜೆಟ್‌ನಲ್ಲಿ ಸರ್ಕಾರವು ಸಾಲವನ್ನು ನಿಯಂತ್ರಿಸಲು ಪ್ರಯತ್ನಿಸಿದ್ದು, ಬಡ್ಡಿದರವನ್ನು ಕಡಿಮೆ ಮಾಡಲು ಮತ್ತು ಅಭಿವೃದ್ಧಿ ವೆಚ್ಚವನ್ನು ಹೆಚ್ಚಿಸಲು ಅವಕಾಶ ನೀಡಿದೆ. 2030-31ರ ವೇಳೆಗೆ ಕೇಂದ್ರ ಸರ್ಕಾರದ ಸಾಲವನ್ನು ಜಿಡಿಪಿಯ ಶೇ.50ಕ್ಕೆ ಇಳಿಸುವ ಗುರಿ ಹೊಂದಲಾಗಿದೆ. 2025-26ರ ಪರಿಷ್ಕೃತ ಅಂದಾಜು ಜಿಡಿಪಿಯ ಶೇ.56.1 ಆಗಿದೆ. 2026-27ರ ಬಜೆಟ್ ಸಾಲವು ಜಿಡಿಪಿಯ ಶೇ.55.6ಕ್ಕೆ ತಲುಪಬಹುದು ಎಂದು ಅಂದಾಜಿಸಿದೆ ಎಂದರು.

2025-26ರ ವೇಳೆಗೆ ಜಿಡಿಪಿಯ ಶೇ.4.5ಕ್ಕಿಂತ ಕಡಿಮೆ ಹಣಕಾಸಿನ ಕೊರತೆಯನ್ನು ಕಡಿಮೆ ಮಾಡುವ ಮೂಲಕ 2021-22ರಲ್ಲಿ ಸರ್ಕಾರ ನೀಡಿದ್ದ ಭರವಸೆಯನ್ನು ಈಡೇರಿಸಲಾಗಿದೆ ಎಂದು ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಕಳೆದ ಸಾಲಿನ ಶೇ.4.4ರಷ್ಟಿರುವ ಹಣಕಾಸಿನ ಕೊರತೆಯನ್ನು ಪ್ರಸಕ್ತ ಸಾಲಿನಲ್ಲಿ ಶೇ.4.3ಕ್ಕೆ ಇಳಿಸುವುದು ಗುರಿ ಹೊಂದಲಾಗಿದೆ. ಸರ್ಕಾರವು ಅಭಿವೃದ್ಧಿಯತ್ತ ಹೆಚ್ಚು ಗಮನಹರಿಸಿದ್ದು, ಒಟ್ಟು 49.6 ಲಕ್ಷ ಕೋಟಿ ರೂ. ಬಂಡವಾಳ ವೆಚ್ಚವನ್ನು ರಸ್ತೆಗಳು, ರೈಲ್ವೆಗಳು ಮತ್ತು ಕಾರ್ಖಾನೆಗಳಂತಹ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಲಾಗುತ್ತದೆ ಎಂದು ಸಚಿವರು ತಿಳಿಸಿದರು.

ರೈತರು, ಮಹಿಳೆಯರ ಸಬಲೀಕರಣಕ್ಕೆ ಬಜೆಟ್‌ನಲ್ಲಿ ವಿಶೇಷ ಒತ್ತು





ನವದೆಹಲಿ: ಈ ಬಾರಿ ಬಜೆಟ್‌ನಲ್ಲಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ರೈತರು, ಪಶುಸಂಗೋಪನೆ ಮತ್ತು ಪಶುವೈದ್ಯಕೀಯ ವೃತ್ತಿಪರರ ಬೆಂಬಲಿಸುವುದು ಹಾಗೂ ಮಹಿಳೆಯರ ನೇತೃತ್ವದ ಗ್ರಾಮೀಣ ಉದ್ಯಮಗಳನ್ನು ಬಲಪಡಿಸುವ ನಿಟ್ಟಿನಲ್ಲಿ ವಿಶೇಷ ಗಮನ ಹರಿಸಿದ್ದಾರೆ.

ಮೀನುಗಾರಿಕೆ ವಲಯವನ್ನು ಉತ್ತೇಜಿಸಲು 500 ಜಲಾಶಯಗಳು ಅಥವಾ ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿ, ಗ್ರಾಮೀಣ ಪ್ರದೇಶಗಳಲ್ಲಿ ಗುಣಮಟ್ಟದ ಉದ್ಯೋಗಗಳ ಸೃಷ್ಟಿ, ಪಶುಸಂಗೋಪನೆಯಲ್ಲಿ ಉದ್ಯಮಶೀಲತೆಯನ್ನು ಉತ್ತೇಜಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳನ್ನು ಘೋಷಿಸಿದರು.

ಕರಾವಳಿ ಪ್ರದೇಶಗಳಲ್ಲಿ ತೆಂಗು, ಗೋಡಂಬಿ ಮತ್ತು ಕೋಕೋ ಬೆಳೆಗಳ ಉತ್ಪಾದಕತೆಯನ್ನು ಹೆಚ್ಚಿಸಲು ವಿಶೇಷ ಕಾರ್ಯಕ್ರಮವನ್ನು ಘೋಷಿಸಲಾಗಿದ್ದು, 2030ರ ವೇಳೆಗೆ ಭಾರತೀಯ ಗೋಡಂಬಿ ಮತ್ತು ಕೋಕೋವನ್ನು ಜಾಗತಿಕ ಪ್ರೀಮಿಯಂ ಬ್ರ್ಯಾಂಡ್‌ಗಳಾಗಿ ರೂಪಿಸುವ ಗುರಿಯನ್ನು ಹೊಂದಲಾಗಿದೆ. ಇಳುವರಿ ಕಡಿಮೆಯಾಗಿರುವ ಹಳೆಯ ತೋಟಗಳನ್ನು ಆಧುನೀಕರಿಸಲು ಮತ್ತು ಹೆಚ್ಚಿನ ಸಾಂದ್ರತೆಯ ಕೃಷಿ ಅಳವಡಿಸಲು ನೆರವು, ವಾಲ್‌ನಟ್, ಬಾದಾಮಿ ಮತ್ತು ಪೈನ್‌ನಟ್ಸ್‌ಗಳ ಕೃಷಿಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಯುವಜನರನ್ನು ಸೆಳೆಯಲು ವಿಶೇಷ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ರೈತರಿಗೆ ಕೃಷಿ ಮಾಹಿತಿ, ಮಾರುಕಟ್ಟೆ ದರ ಮತ್ತು ಹವಾಮಾನ ಮುನ್ಸೂಚನೆಯನ್ನು ಅವರದ್ದೇ ಭಾಷೆಯಲ್ಲಿ ನೀಡಲು ಬಹುಭಾಷಾ ಎಐ ಕೃಷಿ ಉಪಕರಣವನ್ನು ಈ ಬಾರಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಗ್ರಾಮೀಣ ಮಹಿಳೆಯರ ಆದಾಯವನ್ನು ಹೆಚ್ಚಿಸಲು, ಮಹಿಳಾ ನೇತೃತ್ವದ ಉದ್ಯಮಗಳಿಗಾಗಿ ಸ್ವಸಹಾಯ ಉದ್ಯಮಿ ಮಾರ್ಟ್‌ಗಳನ್ನು ಸ್ಥಾಪಿಸಲು ಉತ್ತೇಜಿಸಲು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ತೆಂಗು ಬೆಳೆಗೆ ಪ್ರೋತ್ಸಾಹ



ಕೇರಳ ಮತ್ತು ತಮಿಳುನಾಡು ಮುಂತಾದ ತೆಂಗು ಬೆಳೆಯುವ ರಾಜ್ಯಗಳನ್ನು ಗುರಿಯಾಗಿಸಿಕೊಂಡು, ಉತ್ಪಾದನೆ ಮತ್ತು ಉತ್ಪಾದಕತೆಯನ್ನು ಸುಧಾರಿಸುವ ಮತ್ತು 10 ಮಿಲಿಯನ್ ತೆಂಗಿನ ಬೆಳೆಗಾರರು ಸೇರಿದಂತೆ ಸುಮಾರು 30 ಮಿಲಿಯನ್ ಜನರಿಗೆ ಪ್ರಯೋಜನವನ್ನು ನೀಡುವ ಗುರಿಯನ್ನು ಹೊಂದಿರುವ ತೆಂಗಿನ ಕಾಯಿ ಪ್ರಚಾರ ಯೋಜನೆಯನ್ನು ಘೋಷಿಸಿದ್ದಾರೆ.

ಚುನಾವಣೆ ವರ್ಷದ ಪ.ಬಂಗಾಳ, ತ.ನಾಡು, ಕೇರಳ, ಅಸ್ಸಾಂಗೆ ಭರಪೂರ ಕೊಡುಗೆ



ನವದೆಹಲಿ: ಚುನಾವಣೆಗಳು ಸನಿಹದಲ್ಲಿರುವ ರಾಜ್ಯಗಳಿಗೆ ಕೇಂದ್ರ ಬಜೆಟ್‌ನಲ್ಲಿ ಭರ ಪೂರ ಕೊಡುಗೆ ನೀಡುವ ಪರಿಪಾಠವನ್ನು ಈ ಬಾರಿಯೂ ಅನುಸರಿಸಿದ್ದು, ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮತ್ತು ಅಸ್ಸಾಂಗೆ ಉಳಿದ ರಾಜ್ಯಗಳಿಗಿಂತ ಹೆಚ್ಚಿನ ಫಲ ಸಿಕ್ಕಿದೆ.

ಪಶ್ಚಿಮ ಬಂಗಾಳದಲ್ಲಿ ಪರಿಸರ ಸ್ನೇಹಿ ಸರಕು ಸಾಗಣೆಯನ್ನು ಉತ್ತೇಜಿಸಲು ಪೂರ್ವದ ಡಂಕುನಿಯಿಂದ ಪಶ್ಚಿಮದ ಸೂರತ್‌ವರೆಗೆ ಹೊಸ ಮೀಸಲಾದ ಸರಕು ಸಾಗಣೆ ಕಾರಿಡಾರ್ ನಿರ್ಮಾಣ, ಐದು ಪೂರ್ವೋದಯ ರಾಜ್ಯಗಳಲ್ಲಿ ಐದು ಪ್ರವಾಸೋದ್ಯಮ ತಾಣಗಳ ಸೃಷ್ಟಿ, 4,000 ಇ-ಬಸ್‌ಗಳಿಗೆ ಅವಕಾಶ, ದುರ್ಗಾಪುರದಲ್ಲಿ ಉತ್ತಮ ಸಂಪರ್ಕ ಹೊಂದಿರುವ ಸಮಗ್ರ ಪೂರ್ವ ಕರಾವಳಿ ಕೈಗಾರಿಕಾ ಕಾರಿಡಾರ್ ಅಭಿವೃದ್ಧಿ ಘೋಷಿಸಲಾಗಿದೆ.

ಖನಿಜ ಸಮೃದ್ಧ ರಾಜ್ಯಗಳಾದ ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡುಗಳಿಗೆ ನಿರ್ಣಾಯಕ ಖನಿಜ ಸೌಲಭ್ಯಗಳನ್ನು ಸ್ಥಾಪಿಸಲು ಬೆಂಬಲ ನೀಡುವುದು. ನಗರಗಳ ನಡುವೆ ಸಂಪರ್ಕ ಸೇತುವೆಯಾಗಿ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳ ಅಭಿವೃದ್ಧಿ, ಮುಂಬೈನಿಂದ ಪುಣೆ, ಪುಣೆಯಿಂದ ಹೈದರಾಬಾದ್, ಹೈದರಾಬಾದ್‌ನಿಂದ ಬೆಂಗಳೂರು ಮತ್ತು ಚೆನ್ನೈ, ಚೆನ್ನೈನಿಂದ ಬೆಂಗಳೂರು, ದೆಹಲಿಯಿಂದ ವಾರಣಾಸಿ ಹಾಗೂ ವಾರಣಾಸಿಯಿಂದ ಸಿಲಿಗುರಿವರೆಗೆ ಹೈಸ್ಪೀಡ್ ರೈಲು ಕಾರಿಡಾರ್ ನಿರ್ಮಾಣ.

ತಮಿಳುನಾಡು ಮತ್ತು ಆಂಧ್ರಪ್ರದೇಶದ ಗಡಿ ಪ್ರದೇಶಗಳಲ್ಲಿ ಪುಲಿಕಾಟ್ ಸರೋವರದಲ್ಲಿ ಪಕ್ಷಿ ವೀಕ್ಷಣೆ ಮಾರ್ಗ ಅಭಿವೃದ್ಧಿ, ದೇವಾಲಯಗಳ ಪಟ್ಟಣವಾದ ತಮಿಳುನಾಡು ಸೇರಿದಂತೆ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ ಮೂಲಸೌಕರ್ಯವನ್ನು ಬಲಪಡಿಸಲು ಮುಂದಿನ 5 ವರ್ಷಗಳಲ್ಲಿ 20,000 ಕೋಟಿ ರೂ.ಗಳ ಅನುದಾನ ಘೋಷಣೆ. ಖನಿಜ ಸಮೃದ್ಧ ರಾಜ್ಯಗಳಾದ ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಗೆ ನಿರ್ಣಾಯಕ ಖನಿಜ ಸೌಲಭ್ಯಗಳನ್ನು ಸ್ಥಾಪಿಸಲು ಬೆಂಬಲ, ಆಮೆಗಳ ಗೂಡು ಕಟ್ಟುವ ಸ್ಥಳಗಳು, ಆಮೆ ಹಾದಿಗಳ ಅಭಿವೃದ್ಧಿ, ದೇವಾಲಯಗಳ ಪಟ್ಟಣ ವಾದ ಅಸ್ಸಾಂ ಸೇರಿದಂತೆ ಟೈಯರ್ 2 ಮತ್ತು ಟೈಯರ್ 3 ನಗರಗಳಲ್ಲಿ ಮೂಲಸೌಕರ್ಯವನ್ನು ಬಲಪಡಿಸಲು ಮುಂದಿನ 5 ವರ್ಷಗಳಲ್ಲಿ 20,000 ಕೋಟಿ ವಿನಿಯೋಗ ಸೇರಿದಂತೆ ಈ ನಾಲ್ಕು ರಾಜ್ಯಗಳಿಗೆ ಭರಪೂರ ಕೊಡುಗೆ ಘೋಷಿಸಲಾಗಿದೆ.

ಮಹಿಳಾ ಉದ್ಯಮಿ ವೃದ್ಧಿಗೆ 'ಶಿ-ಮಾರ್ಟ್' ಚಿಲ್ಲರೆ ಮಾರಾಟ ಮಳಿಗೆ



ನವದೆಹಲಿ: ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಗ್ರಾಮೀಣ ಮಹಿಳೆಯರಿಗೆ ಸಿಹಿಸುದ್ದಿ ನೀಡಿದ್ದಾರೆ. ಗ್ರಾಮೀಣ ಮಹಿಳೆಯರು ನಡೆಸುವ, ಸ್ವ-ಸಹಾಯ ಉದ್ಯಮಗಳಿಗೆ 'ಶಿ-ಮಾರ್ಟ್'ಗಳನ್ನು ಪ್ರಾರಂಭಿಸುವ ಮೂಲಕ ಮಹಿಳೆಯರ ಸಬಲೀಕರಣಕ್ಕೆ ಆದ್ಯತೆ ನೀಡಲಾಗಿದೆ. ಶಿ-ಮಾರ್ಟ್‌ಗಳು ಸ್ವ-ಸಹಾಯ ಉದ್ಯಮಿಗಳಿಂದ ನಡೆಸಲ್ಪಡುವ ಮತ್ತು ಸಮುದಾಯದ ಒಡೆತನದ ಚಿಲ್ಲರೆ ಮಾರಾಟ ಮಳಿಗೆಗಳಾಗಿ ಕಾರ್ಯನಿರ್ವಹಿಸುತ್ತವೆ. ಮಹಿಳೆಯರು ತಮ್ಮದೇ ಆದ ಉದ್ಯಮಗಳ ಮಾಲೀಕರಾಗಲು ಸಹಾಯ ಮಾಡಲು ಸರ್ಕಾರ ಬದ್ಧವಾಗಿದೆ ಎಂದು ಅವರು ತಿಳಿಸಿದ್ದಾರೆ.

ರಕ್ಷಣಾ ವಲಯಕ್ಕೆ 7.85 ಲಕ್ಷ ಕೋಟಿ ಮೀಸಲು



ನವದೆಹಲಿ: ಕೇಂದ್ರ ಬಜೆಟ್‌ನಲ್ಲಿ ರಕ್ಷಣಾ ವಲಯಕ್ಕೆ ಗಣನೀಯ ಪ್ರಮಾಣದ ನಿಧಿ ಮೀಸಲಿರಿಸಲಾಗಿದೆ. ಕಳೆದ ವರ್ಷಕ್ಕಿಂತ (6.22 ಲಕ್ಷ ಕೋಟಿ) ಶೇ.9.2ರಷ್ಟು ಹೆಚ್ಚುವರಿಯಾಗಿ ಮೀಸಲಿಡಲಾಗಿದೆ. 2026-27ರ ಹಣಕಾಸು ವರ್ಷದಲ್ಲಿ ಆಧುನೀಕರಣಕ್ಕಾಗಿ 2.19 ಲಕ್ಷ ಕೋಟಿ ರೂ. ನೀಡಿದ್ದು, ಇದು ಕಳೆದ ಬಾರಿಗಿಂತ ಶೇ.21.84ರಷ್ಟು ಹೆಚ್ಚಳವಾಗಿದೆ. ವಿಮಾನ ಮತ್ತು ಏರೋ ಎಂಜಿನ್‌ಗಳಿಗೆ 63,733 ಕೋಟಿ ಹಂಚಿಕೆ ಮಾಡಲಾಗಿದೆ. ಜೊತೆಗೆ ನಿರ್ವಹಣೆ, ಮದ್ದುಗುಂಡುಗಳು, ಇಂಧನ, ದುರಸ್ತಿ ಇತ್ಯಾದಿಗಳಂತಹ ಪುನರಾವರ್ತಿತ ವೆಚ್ಚಗಳು ಮತ್ತು ಸಹಾಯಕ ಸಿಬ್ಬಂದಿಯ ವೇತನಗಳು ಸೇರಿದಂತೆ ದೈನಂದಿನ ಕಾರ್ಯಾಚರಣೆಗಳಿಗೆ ಮೀಸಲಿಟ್ಟ ರಕ್ಷಣಾ ಬಜೆಟ್‌ನ ಭಾಗವನ್ನು ಶೇ.17.24ರಷ್ಟು, ಪಿಂಚಣಿಗಳ ಹಂಚಿಕೆಯನ್ನು ಶೇ.6.53ರಷ್ಟು ಹೆಚ್ಚಿಸಲಾಗಿದೆ. ಒಟ್ಟಾರೆಯಾಗಿ ವರ್ಷದ ರಕ್ಷಣಾ ಬಜೆಟ್ ಅನ್ನು 7.85 ಲಕ್ಷ ಕೋಟಿ ರೂ.ಗಳಿಗೆ ಹೆಚ್ಚಿಸಲಾಗಿದೆ.

ದಿವ್ಯಾಂಗರ ಘನತೆ ಜೀವನಕ್ಕೆ ಹೊಸ ಯೋಜನೆ

ನವದೆಹಲಿ: ಕೇಂದ್ರ ಬಜೆಟ್‌ನಲ್ಲಿ ತಂತ್ರಜ್ಞಾನ ಮತ್ತು ಸುಲಭ ಲಭ್ಯತೆಯ ಮೂಲಕ ದಿವ್ಯಾಂಗರ ಜೀವನಮಟ್ಟವನ್ನು ಸುಧಾರಿಸುವ ಗುರಿ ಹಾಗೂ ವಿಶೇಷ ಚೇತನರಿಗೆ ಘನತೆಯ ಜೀವನ ಮತ್ತು ಆಧುನಿಕ ಸೌಲಭ್ಯಗಳನ್ನು ಒದಗಿಸುವ ಉದ್ದೇಶದೊಂದಿಗೆ ಈ ಯೋಜನೆಯನ್ನು ಪರಿಚಯಿಸಲಾಗಿದೆ. ಕೃತಕ ಅಂಗಾಂಗಗಳನ್ನು ನೀಡುವುದಷ್ಟೇ ಅಲ್ಲದೆ, ಅವುಗಳನ್ನು ಅತ್ಯಾಧುನಿಕ ತಂತ್ರಜ್ಞಾನದೊಂದಿಗೆ ದಿವ್ಯಾಂಗರಿಗೆ ತಲುಪಿಸು ವುದು, ಈ ಸಾಧನಗಳಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಸಲು ಸಂಶೋಧನೆ ಮತ್ತು ಅಭಿವೃದ್ಧಿಗೆ ಒತ್ತು ನೀಡುವುದು, ದಿವ್ಯಾಂಗರು ಮತ್ತು ಹಿರಿಯ ನಾಗರಿಕರಿಗಾಗಿ ದೇಶಾದ್ಯಂತ ಆಧುನಿಕ ರೀಟೇಲ್ ಶೈಲಿಯ ಮಾರ್ಟ್ ಸ್ಥಾಪಿಸುವುದು, ತಮಗೆ ಬೇಕಾದ ಸಾಧನಗಳನ್ನು ಪ್ರಾಯೋಗಿಕವಾಗಿ ಬಳಸಿದ ನಂತರ ತಮಗೆ ಸೂಕ್ತವಾದುದನ್ನು ಆಯ್ದುಕೊಳ್ಳುವ ಅವಕಾಶ ಕಲ್ಪಿಸುವುದು, ಮಧ್ಯವರ್ತಿಗಳ ಕಾಟವಿಲ್ಲದೆ ನೇರವಾಗಿ ಗುಣಮಟ್ಟದ ಸಾಧನಗಳನ್ನು ಖರೀದಿಸಲು ಅನುವು ಮಾಡಿಕೊಡುವುದು ಈ ಯೋಜನೆಯಿಂದ ಸಾಧ್ಯವಾಗಲಿದೆ. ಈಗಾಗಲೇ ಇರುವ ದಿವ್ಯಾಶಾ ಕೇಂದ್ರಗಳನ್ನು ಮೇಲ್ದರ್ಜೆಗೇರಿಸುವುದಕ್ಕೂ ಗಮನಹರಿಸಲಾಗಿದೆ.

ವಿಬಿ-ಜಿ ರಾಮ್ ಜಿಗೆ 95 ಸಾವಿರ ಕೋಟಿ ಮೀಸಲು



ನವದೆಹಲಿ: ವಿಬಿ-ಜಿ ರಾಮ್ ಜಿ ಯೋಜನೆ ಜಾರಿಗೆ ಸಜ್ಜಾಗುತ್ತಿರುವಂತೆಯೇ ಕೇಂದ್ರ ಸರ್ಕಾರ ಇದಕ್ಕೆ 95,692.31 ಕೋಟಿ ಮೀಸಲಿಟ್ಟಿದೆ. ವಿಕಸಿತ ಭಾರತ್-ಗ್ಯಾರಂಟಿ ಫಾರ್ ರೋಜ್ಗಾರ್ ಆಜೀವಿಕಾ ಮಿಷನ್ (ಗ್ರಾಮೀಣ)(ವಿಬಿ-ಜಿ ರಾಮ್ ಜಿ) ಯೋಜನೆ ವರ್ಷದಲ್ಲಿ 125 ದಿನಗಳ ಕೆಲಸದ ಭರವಸೆ ನೀಡಲಿದ್ದು, ಮನ್ರೇಗಾ ಬದಲಿಗೆ ಈ ಯೋಜನೆಯನ್ನು ಜಾರಿಗೆ ತರಲಾಗುತ್ತಿದೆ. ಹೊಸ ಯೋಜನೆ ಜಾರಿಯಾಗುವವರೆಗೆ ಮನ್ರೇಗಾ ಯೋಜನೆ ಮುಂದುವರಿಯುವುದರಿಂದ ಇದಕ್ಕಾಗಿ 30 ಸಾವಿರ ಕೋಟಿ ಮೀಸಲಿಡಲಾಗಿದೆ. ಒಟ್ಟಾರೆ ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ಒಟ್ಟು 1,94,368.81 ಕೋಟಿ ಹಂಚಿಕೆ ಮಾಡಲಾಗಿದೆ ಎಂದು ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರ ಸ್ಥಾಪನೆ; 17 ಕ್ಯಾನ್ಸರ್ ಔಷಧಿಗಳಿಗೆ ವಿನಾಯ್ತಿ



ನವದೆಹಲಿ: ದೇಶದಲ್ಲಿ ಮೂರು ಹೊಸ ಆಯುರ್ವೇದ ಏಮ್ಸ್‌ಗಳು ಮತ್ತು ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಕೋವಿಡ್ ಸಾಂಕ್ರಾಮಿಕ ರೋಗದ ನಂತರ ಆಯುರ್ವೇದವು ಜಾಗತಿಕ ಸ್ವೀಕಾರ ಮತ್ತು ಮನ್ನಣೆಯನ್ನು ಗಳಿಸಿದ್ದು, ಗಿಡಮೂಲಿಕೆಗಳನ್ನು ಬೆಳೆಯುವ ರೈತರು ಮತ್ತು ಉತ್ಪನ್ನಗಳನ್ನು ಸಂಸ್ಕರಿಸುವವರಿಗೆ ನೆರವು ದೊರಕಲಿದೆ. ಉತ್ತಮ ಆರೋಗ್ಯ ಸೇವೆ ಒದಗಿಸಲು ಜಿಲ್ಲಾ ಆಸ್ಪತ್ರೆಗಳನ್ನು ಮೇಲ್ದರ್ಜೆಗೇರಿಸಲಾಗುವುದು ಮತ್ತು ವೈದ್ಯಕೀಯ ಪ್ರವಾಸೋದ್ಯಮವನ್ನು ಉತ್ತೇಜಿಸಲು ಐದು ಪ್ರಾದೇಶಿಕ ವೈದ್ಯಕೀಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು ಎಂದು ಸಚಿವರು ತಿಳಿಸಿದ್ದಾರೆ.

ಮೂರು ಹೊಸ ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು, ಆಯುಷ್ ಔಷಧಾಲಯಗಳು ಮತ್ತು ಔಷಧ ಪರೀಕ್ಷಾ ಪ್ರಯೋಗಾಲಯಗಳ ಪ್ರಮಾಣೀಕರಣ ಪರಿಸರ ವ್ಯವಸ್ಥೆಯ ಗುಣಮಟ್ಟ, ಅಭಿವೃದ್ಧಿ ಹಾಗೂ ನುರಿತ ಸಿಬ್ಬಂದಿ ನೇಮಕ ಮಾಡಲಾಗುವುದು. ಕ್ಯಾನ್ಸರ್ ಸಂಬಂಧಿತ 17 ಔಷಧಿಗಳಿಗೆ ವಿನಾಯಿತಿ ನೀಡಲಾಗುವುದು. ಇತರ 7 ಅಪರೂಪದ ಕಾಯಿಲೆಗಳ ಔಷಧಿಗಳನ್ನು ನಿರ್ದಿಷ್ಟ ವೈದ್ಯಕೀಯ ಉದ್ದೇಶಗಳಿಗಾಗಿ ಆಮದು ಮಾಡಿಕೊಳ್ಳುವಲ್ಲೂ ವಿನಾಯಿತಿ ನೀಡಲಾಗುವುದು ಎಂದು ಹೇಳಿದ್ದಾರೆ.

ಆರ್ಥಿಕ ಬೆಳವಣಿಗೆ, ಹೂಡಿಕೆ ಹೆಚ್ಚಳ, ವಿತ್ತೀಯ ಶಿಸ್ತಿಗೆ ಆದ್ಯತೆ

ನವದೆಹಲಿ: ಆರ್ಥಿಕ ಬೆಳವಣಿಗೆ, ಹೂಡಿಕೆ ಹೆಚ್ಚಳ, ವಿತ್ತೀಯ ಶಿಸ್ತು ಕಾಯ್ದುಕೊಳ್ಳುವುದರ ಜೊತೆಗೆ ಉದ್ಯೋಗ ಸೃಷ್ಟಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ.

ಬಜೆಟ್ ಮಂಡನೆ ವೇಳೆ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಕರ್ತವ್ಯ ಭವನದಲ್ಲಿ ಸಿದ್ಧಪಡಿಸಲಾದ ಮೊದಲ ಬಜೆಟ್ ಇದಾಗಿರುವುದರಿಂದ, ನಾವು ಮೂರು ಕರ್ತವ್ಯಗಳಿಂದ ಪ್ರೇರಿತರಾಗಿದ್ದೇವೆ ಎಂದರು.

ಖಾಸಗಿ ಹೂಡಿಕೆಯಲ್ಲಿ ಜನಸಂದಣಿ ಮತ್ತು ದೀರ್ಘಕಾಲೀನ ಉತ್ಪಾದಕತೆ ಬಲಪಡಿಸುವ ಗುರಿಯೊಂದಿಗೆ ಮೂಲ ಸೌಕರ್ಯ, ಸಾರಿಗೆ, ಲಾಜಿಸ್ಟಿಕ್ಸ್ ಮತ್ತು ಇಂಧನಕ್ಕಾಗಿ ಸಾರ್ವಜನಿಕ ಹೂಡಿಕೆಯನ್ನು 12.2 ಲಕ್ಷ ಕೋಟಿಗೆ ಹೆಚ್ಚಿಸಲಾಗಿದೆ. ಸೆಮಿಕಂಡಕ್ಟರ್ ಮಿಷನ್ 2.0 ಅನ್ನು ಘೋಷಿಸಿ, ಎಲೆಕ್ಟ್ರಾನಿಕ್ಸ್ ಉತ್ಪಾದನೆಗೆ ವಿಸ್ತೃತ ಬೆಂಬಲ ನೀಡಲಾಗಿದೆ. ಎಲೆಕ್ಟ್ರಾನಿಕ್ಸ್ ಉತ್ಪಾದನೆಯ ಮೇಲಿನ ವೆಚ್ಚವನ್ನು 40,000 ಕೋಟಿ ರೂ.ಗೆ ಹೆಚ್ಚಿಸುವ ಪ್ರಸ್ತಾಪ ಮಾಡಲಾಗಿದೆ.

ಮೂರು ಕರ್ತವ್ಯಗಳ ಪಟ್ಟಿ



ಮೊದಲ ಕರ್ತವ್ಯವೆಂದರೆ ಉತ್ಪಾದಕತೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಮತ್ತು ಅಸ್ಥಿರ ಜಾಗತಿಕ ಚಲನಶೀಲತೆಗೆ ಸ್ಥಿತಿಸ್ಥಾಪಕತ್ವವನ್ನು ನಿರ್ಮಿಸುವ ಮೂಲಕ ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವುದು, ಉಳಿಸಿಕೊಳ್ಳುವುದು. ಎರಡನೆ ಕರ್ತವ್ಯವೆಂದರೆ ಜನರ ಆಕಾಂಕ್ಷೆಗಳನ್ನು ಈಡೇರಿಸುವುದು ಮತ್ತು ಅವರ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಭಾರತದ ಸಮೃದ್ಧಿಯ ಹಾದಿಯಲ್ಲಿ ಅವರನ್ನು ಬಲವಾದ ಪಾಲುದಾರರನ್ನಾಗಿ ಮಾಡುವುದು. ಮೂರನೇ ಕರ್ತವ್ಯವೆಂದರೆ ಸಬ್ ಕಾ ಸಾಥ್, ಸಬ್ ಕಾ ವಿಕಾಸ್ ಎಂಬಂತೆ ಪ್ರತಿಯೊಂದು ಕುಟುಂಬ, ಸಮುದಾಯ, ಪ್ರದೇಶವು ಸಂಪನ್ಮೂಲಗಳು, ಸೌಲಭ್ಯಗಳು ಮತ್ತು ಅರ್ಥಪೂರ್ಣ ಭಾಗವಹಿಸುವಿಕೆಗೆ ಅವಕಾಶಗಳನ್ನು ಖಚಿತಪಡಿಸಿಕೊಳ್ಳುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದರು.

ಜವಳಿ, ರಾಸಾಯನಿಕಗಳು ಮತ್ತು ರಫ್ತು-ಆಧಾರಿತ ಕೈಗಾರಿಕೆಗಳಂತಹ ಕಾರ್ಮಿಕ-ತೀವ್ರ ವಲಯಗಳಿಗೆ ಉದ್ದೇಶಿತ ಪ್ರೋತ್ಸಾಹದ ಜೊತೆಗೆ, ಸಣ್ಣ ಮತ್ತು ಮಧ್ಯಮ ಉದ್ಯಮಗಳಿಗೆ ಬೆಂಬಲ ನೀಡಲು ಪ್ರಸ್ತಾವಿತ ರೂ.10,000 ಕೋಟಿ ಎಸ್‌ಎಂಇ ಬೆಳವಣಿಗೆಯ ನಿಧಿಯೊಂದಿಗೆ ಉದ್ಯೋಗ ಸೃಷ್ಟಿಗೆ ಪ್ರಮುಖ ಆದ್ಯತೆ ನೀಡಲಾಗಿದೆ. ಸ್ವಾವಲಂಬನೆ ಭಾರತ ನಿಧಿಗೆ 4,000 ಕೋಟಿ ನೀಡುವುದಾಗಿ ಪ್ರಸ್ತಾಪಿಸಿದ್ದಾರೆ. ಒಟ್ಟಾರೆ ಈ ಬಾರಿ ಬಜೆಟ್‌ನಲ್ಲಿ ಉದ್ಯೋಗ, ಉತ್ಪಾದನಾ ಶಕ್ತಿ ಮತ್ತು ಮೂಲಸೌಕರ್ಯ ಅಭಿವೃದ್ಧಿಯ ಮೇಲೆ ಗಮನ ಹರಿಸಲಾಗಿದೆ ಎಂದರು.

ಮತ್ಸ್ಯೋದ್ಯಮಕ್ಕೆ ಪೂರಕವಾಗಿ 500 ಜಲಾಶಯ, ಅಮೃತ ಸರೋವರ ಅಭಿವೃದ್ಧಿ



ನವದೆಹಲಿ: ರೈತರ ಆದಾಯ ಹೆಚ್ಚಳಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಬಜೆಟ್ ಮಂಡಿಸಿದ ನಿರ್ಮಲಾ ಸೀತಾರಾಮನ್, ಮತ್ಸ್ಯೋದ್ಯಮ ಬಲಪಡಿಸಲು 500 ಜಲಾಶಯಗಳು ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿಗಾಗಿ ಉಪ ಕ್ರಮಗಳನ್ನು ಕೈಗೊಳ್ಳಲಾಗಿದೆ. ಗುಣಮಟ್ಟದ ಉದ್ಯೋಗಾವಕಾಶಗಳನ್ನು ಒದಗಿಸಲು ಪಶುಸಂಗೋಪನಾ ಕ್ಷೇತ್ರದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ. 10 ಮಿಲಿಯನ್ ರೈತರು ಸೇರಿದಂತೆ ಒಟ್ಟು 30 ಮಿಲಿಯನ್ ಜನರಿಗೆ ಬೆಂಬಲ ನೀಡಲು, ತೆಂಗು ಉತ್ಪಾದನೆ ಹೆಚ್ಚಿಸಲು ಮತ್ತು ಉತ್ಪಾದಕತೆ ವೃದ್ಧಿಸಲು ತೆಂಗು ಉತ್ತೇಜನ ಯೋಜನೆ ಜಾರಿಗೆ ತರಲಾಗುತ್ತಿದೆ. ಭಾರತೀಯ ಗೋಡಂಬಿ ಮತ್ತು ಕೋಕೋವನ್ನು 2030ರ ವೇಳೆಗೆ ಪ್ರೀಮಿಯಂ ಜಾಗತಿಕ ಬ್ರ್ಯಾಂಡ್ ಆಗಿ ಪರಿವರ್ತಿಸಲು, ಭಾರತೀಯ ಶ್ರೀಗಂಧದ ಪರಿಸರ ವ್ಯವಸ್ಥೆಯ ವೈಭವವನ್ನು ಮರು ಸ್ಥಾಪಿಸಲು ರಾಜ್ಯ ಸರ್ಕಾರಗಳೊಂದಿಗೆ ಪಾಲುದಾರಿಕೆ ಹೊಂದಲಾಗುವುದು ಎಂದರು.

ಪ್ರವಾಸಿ ಪೈಲಟ್ ಯೋಜನೆ



ನವದೆಹಲಿ: ಪ್ರವಾಸೋದ್ಯಮ ಹಾಗೂ ಆತಿಥ್ಯ ವಲಯ ಬಲಪಡಿಸುವ ಮೂಲಕ ಆರ್ಥಿಕತೆ ವಿಸ್ತರಿಸುವ ಗುರಿಯನ್ನು ಹೊಂದಿರುವ ಸರಣಿ ಉಪಕ್ರಮಗಳನ್ನು ಇಂದಿನ ಬಜೆಟ್‌ನಲ್ಲಿ ಮಂಡಿಸಲಾಗಿದೆ. ಭಾರತೀಯ ನಿರ್ವಹಣಾ ಸಂಸ್ಥೆ ಸಹಯೋಗದೊಂದಿಗೆ ನಡೆಸಲಾಗುವ ಪ್ರಮಾಣೀಕೃತ 12 ವಾರಗಳ ಹೈಬ್ರಿಡ್ ತರಬೇತಿ ಕಾರ್ಯಕ್ರಮದ ಮೂಲಕ 20 ಪ್ರತಿಷ್ಠಿತ ತಾಣಗಳಲ್ಲಿ 10,000 ಪ್ರವಾಸಿ ಮಾರ್ಗದರ್ಶಕರ ಕೌಶಲ ಹೆಚ್ಚಿಸುವ ಪೈಲಟ್ ಯೋಜನೆಯನ್ನು ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಪ್ರತಿ ಬಜೆಟ್‌ನಲ್ಲಿ ಧರಿಸುವ ಸೀರೆ ಮೂಲಕವೂ ದೇಶೀಯ ಪ್ರಗತಿ ಸಂಕೇತ!



ನವದೆಹಲಿ: ಈ ಬಾರಿ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್, ಸಾಂಪ್ರದಾಯಿಕ ಕೈಮಗ್ಗದ ಸೀರೆ ಧರಿಸಿ, ತಮ್ಮ ದಾಖಲೆಯ 9ನೇ ಬಾರಿಯ ಬಜೆಟ್ ಮಂಡಿಸಿದರು. ಚಿನ್ನ ಹಾಗೂ ಕಂದು ಬಣ್ಣದ ಅಂಚು ಹೊಂದಿರುವ ಗಾಢ ಕೆನ್ನೇರಳೆ ಬಣ್ಣದ ಸೀರೆ ಉಟ್ಟು, 85 ನಿಮಿಷಗಳ ಕಾಗದ ರಹಿತ ಕೇಂದ್ರ ಬಜೆಟ್ ಮಂಡಿಸಿದರು.

ನಿರ್ಮಲಾ ಸೀತಾರಾಮನ್ ಅವರು ಧರಿಸಿದ್ದ ಕಾಂಜೀವರಂ ರೇಷ್ಮೆ ಸೀರೆಯನ್ನು ತಮಿಳಿನಲ್ಲಿ 'ಕಟ್ಟುಂ' ಎಂದು ಕರೆಯಲಾಗುತ್ತದೆ. ಭಾರತದ ಸಾಂಪ್ರದಾಯಿಕ ಕೈಮಗ್ಗ ನೇಕಾರಿಕೆಯನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ಹಲವು ವರ್ಷಗಳಿಂದ ಕೈಮಗ್ಗದ ಸೀರೆಗಳನ್ನು ಧರಿಸಿ, ದೇಶದ ಪ್ರಗತಿಯ ಮುನ್ನುಡಿ ಮಂಡಿಸುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ.

ಕೆನ್ನೇರಳೆ ಬಣ್ಣವು ಶಕ್ತಿ ಮತ್ತು ಆತ್ಮವಿಶ್ವಾಸವನ್ನು ಪ್ರತಿನಿಧಿಸುತ್ತದೆ. ಇದು ಭಾರತದ ಆರ್ಥಿಕತೆಯ ಬಲವಾದ ಬೆಳವಣಿಗೆಯನ್ನು ಬಿಂಬಿಸುವ ಉದ್ದೇಶವನ್ನು ಹೊಂದಿದೆ ಎಂದು ವಿಶ್ಲೇಷಿಸಲಾಗಿದ್ದು, ನಿರ್ಮಲಾ ಸೀತಾರಾಮನ್ ತಾವು ಧರಿಸುವ ಸೀರೆ ಮೂಲಕವೂ ದೇಶದ ಜನತೆಯ ಗಮನ ಸೆಳೆಯುತ್ತಾರೆ.

2019ರ ಬಜೆಟ್ ಮಂಡನೆ ವೇಳೆ ಗೋಲ್ಡನ್ ಬಾರ್ಡರ್ ಹೊಂದಿರುವ ಗುಲಾಬಿ ಬಣ್ಣದ ಮಂಗಳಗಿರಿ ಸೀರೆ, 2020ರಲ್ಲಿ ಹಳದಿ ಹಾಗೂ ನೀಲಿ ಮಿಶ್ರಿತ ರೇಷ್ಮೆ ಸೀರೆ, 2021ರಲ್ಲಿ ಕೆಂಪು ಮತ್ತು ಬಿಳಿ ಬಣ್ಣದ ಪೋಚಂಪಲ್ಲಿ ಸೀರೆ, 2022ರಲ್ಲಿ ಕಂದು ಬಣ್ಣದ ಕೈಮಗ್ಗ ಸೀರೆ, 2023ರಲ್ಲಿ ಕರ್ನಾಟಕದ ಕಸೂತಿ ಕಲೆಯ ಕಪ್ಪು ಬಣ್ಣದ ಬಾರ್ಡರ್ ಇರುವ ಕೆಂಪು ಬಣ್ಣದ ಇಳಕಲ್ ಸೀರೆ, 2024ರ ಮಧ್ಯಂತರ ಬಜೆಟ್‌ನಲ್ಲಿ ಪಶ್ಚಿಮ ಬಂಗಾಳದ ಕಾಂತಾ ಎಂಬ್ರಾಯ್ಡರಿ ನೀಲಿ ಬಣ್ಣದ ತುಸ್ಸಾರ್ ಸಿಲ್ಕ್ ಸೀರೆ, 2024ರ ಪೂರ್ಣ ಬಜೆಟ್‌ನಲ್ಲಿ ಆಂಧ್ರ ಪ್ರದೇಶದ ಆಫ್-ವೈಟ್ ಬಣ್ಣದ ಮಂಗಳಗಿರಿ ಸೀರೆ ಹಾಗೂ 2025ರಲ್ಲಿ ಬಿಹಾರ ಕಲೆಯ ಬಿಳಿಯ ಬಣ್ಣದ ಮಧುಬನಿ ಸಿಲ್ಕ್ ಸೀರೆ ಧರಿಸಿ, ಮಿಂಚಿದ್ದರು.

ನಿರ್ಮಲಾ ಸೀತಾರಾಮನ್‌ಗೆ 'ದಹಿ ಚೀನಿ' ತಿನ್ನಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು!



ನವದೆಹಲಿ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಾಷ್ಟ್ರಪತಿ ಭವನದಲ್ಲಿ ಸಚಿವೆ ನಿರ್ಮಲಾ ಸೀತಾರಾಮನ್ ಅವರಿಗೆ ದಹಿ-ಚೀನಿ (ಮೊಸರು ಮತ್ತು ಸಕ್ಕರೆ) ತಿನ್ನಿಸಿದರು. ಇದಕ್ಕೂ ಮೊದಲು, ನಿರ್ಮಲಾ ಸೀತಾರಾಮನ್ ತಮ್ಮ ಟ್ರೇಡ್ ಮಾರ್ಕ್ 'ಡಿಜಿಟಲ್ ಬಹಿ-ಖಾತಾ', ಚಿನ್ನದ ಬಣ್ಣದ ರಾಷ್ಟ್ರೀಯ ಲಾಂಛನವನ್ನು ಹೊಂದಿರುವ ಕೆಂಪು ಬಣ್ಣದ ಬಟ್ಟೆಯಲ್ಲಿ ಸುತ್ತಿದ ಟ್ಯಾಬ್ಲೆಟ್‌ನ್ನು ಹಿಡಿದುಕೊಂಡು ಕ್ಯಾಮರಾಗಳಿಗೆ ಸಂಸತ್ತಿನ ಹಣಕಾಸು ಭವನದ ಹೊರಗೆ ಪೋಸ್ ನೀಡಿದರು.

ಮಹಾತ್ಮ ಗಾಂಧಿ ಸ್ವರಾಜ್ ಯೋಜನೆ ಘೋಷಣೆ

ನವದೆಹಲಿ: ಮನ್ರೇಗಾ ಹೆಸರು ಬದಲಾವಣೆ ವಿಚಾರದಲ್ಲಿ ರಾಜಕೀಯ ಜಟಾಪಟಿ ನಡೆದಿರುವುದರ ನಡುವೆ ಬಜೆಟ್‌ನಲ್ಲಿ ಮಹಾತ್ಮ ಗಾಂಧಿ ಸ್ವರಾಜ್ ಯೋಜನೆ ಮತ್ತು ಮೆಗಾ ಜವಳಿ ಪಾರ್ಕ್‌ಗಳ ಸ್ಥಾಪನೆಯನ್ನು ಘೋಷಿಸಲಾಗಿದೆ. ಭಾರತದ ಜವಳಿ ವಲಯವನ್ನು ಜಾಗತಿಕ ಮಟ್ಟದಲ್ಲಿ ಮುಂಚೂಣಿಗೆ ತರುವ ಈ ಮಹತ್ವಾಕಾಂಕ್ಷಿ ಯೋಜನೆಯಲ್ಲಿ 5 ಪ್ರಮುಖ ಅಂಶಗಳನ್ನು ಜೋಡಿಸಲಾಗಿದೆ. ರಾಷ್ಟ್ರೀಯ ನಾರು ಯೋಜನೆ ಮೂಲಕ ಹತ್ತಿ, ರೇಷ್ಮೆ ಮತ್ತು ಇತರ ನೈಸರ್ಗಿಕ ನಾರುಗಳ ಗುಣಮಟ್ಟವನ್ನು ಹೆಚ್ಚಿಸುವುದು, ರೈತರಿಂದ ನೇರವಾಗಿ ಮಗ್ಗದವರಿಗೆ ಗುಣಮಟ್ಟದ ಕಚ್ಚಾ ವಸ್ತುಗಳ ಪೂರೈಕೆಗೆ ಸರಪಳಿ ಬಲಪಡಿಸುವ ಗುರಿ ಹೊಂದಲಾಗಿದೆ. ತಾಂತ್ರಿಕ ಜವಳಿ, ಹೊಸ ಯುಗದ ನಾರುಗಳ ಉತ್ಪಾದನೆಯಲ್ಲಿ ವಿಶ್ವದ ಮುಂಚೂಣಿಗೆ ತರುವುದು, ಜವಳಿ ವಿಸ್ತರಣೆ ಮತ್ತು ಉದ್ಯೋಗ ಯೋಜನೆ ಮೂಲಕ ಗ್ರಾಮೀಣ ಭಾಗದ ಯುವಕರಿಗೆ, ವಿಶೇಷವಾಗಿ ಮಹಿಳೆಯರಿಗೆ ಲಕ್ಷಾಂತರ ಹೊಸ ಉದ್ಯೋಗಗಳನ್ನು ಸೃಷ್ಟಿಸುವುದು ಇದರ ಉದ್ದೇಶವಾಗಿದೆ.



ಕೇಂದ್ರ ಬಜೆಟ್ ಜನಹಿತ ಬಜೆಟ್

ಬೆಂಗಳೂರು: ಇಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ 2026–27ನೇ ಸಾಲಿನ ಆರ್ಥಿಕ ಬಜೆಟ್ ಮಂಡಿಸಿದರು. ಇದಕ್ಕೆ ರಾಜ್ಯ ಬಿಜೆಪಿ ನಾಯಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ಇದು ಜನಹಿತದ ಬಜೆಟ್ ಎಂದು ಶ್ಲಾಘಿಸಿದ್ದಾರೆ.


ಯಡಿಯೂರಪ್ಪ


ಆರ್.ಅಶೋಕ್

ಬಿಜೆಪಿ ಕಚೇರಿಯಲ್ಲಿಂದು ಮಾಧ್ಯಮ ಗೋಷ್ಠಿ ನಡೆಸಿದ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ನಿರ್ಮಲಾ ಸೀತಾರಾಮನ್ ಒಂಭತ್ತನೇ ಬಾರಿಗೆ ಐತಿಹಾಸಿಕ ಬಜೆಟ್ ಮಂಡಿಸಿದ್ದಾರೆ. ದೇಶದ ಸರ್ವಾಂಗೀಣ ಅಭಿವೃದ್ಧಿಯ ಬಜೆಟ್ ಇದು. ರಾಷ್ಟ್ರದ ಸಾರ್ವಭೌಮತೆ ಎತ್ತಿ ಹಿಡಿದ ಬಜೆಟ್. 25 ಕೋಟಿ ಜನ ಕಳೆದ ಹತ್ತು ವರ್ಷಗಳಲ್ಲಿ ಬಡತನ ರೇಖೆಯಿಂದ ಹೊರಗೆ ಬಂದಿದ್ದಾರೆ. ಬಜೆಟ್‌ನಲ್ಲಿ ಮೀನುಗಾರಿಕಾ ವಲಯಕ್ಕೆ ಉತ್ತೇಜನ ಕೊಡಲಾಗಿದೆ. ಶ್ರೀಗಂಧ ಬೆಳೆಗೆ ವಿಶೇಷ ಯೋಜನೆ ಮಾಡಲಾಗಿದೆ. ಬಂಡವಾಳ ವೆಚ್ಚವನ್ನು ಬಜೆಟ್‌ನಲ್ಲಿ ಹೆಚ್ಚಿಸಲಾಗಿದೆ. ರಸಗೊಬ್ಬರ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳ ಮೇಲಿನ ಆಮದು ಸುಂಕ ಕಡಿಮೆ ಆಗಿದೆ ಎಂದರು.

ಇದೇ ವೇಳೆ ಮಾತನಾಡಿದ ವಿಪಕ್ಷ ನಾಯಕ ಆರ್. ಅಶೋಕ್, ಜನಪ್ರಿಯ ಬಜೆಟ್ ಬದಲು ಜನ ಹಿತದ ಕಡೆ ಬಜೆಟ್ ಗಮನ ಕೊಟ್ಟಿದೆ. ಹೆಣ್ಣುಮಕ್ಕಳ ಶಿಕ್ಷಣಕ್ಕೆ ಕೇಂದ್ರವೇ ಹಾಸ್ಟೆಲ್ ಸ್ಥಾಪಿಸಲು ಮುಂದೆ ಬಂದಿದೆ. ಶ್ರೀಗಂಧ ಬೆಳೆಗೆ ಉತ್ತೇಜನ ಕೊಡಲು ಕೇಂದ್ರ ಮುಂದಾಗಿದೆ. ತೆಂಗು ಅಭಿವೃದ್ಧಿಗೂ ಉತ್ತೇಜನ ನೀಡಲಾಗಿದೆ. ಟೂರಿಸ್ಟ್ ಗೈಡ್‌ಗಳಿಗೆ ತರಬೇತಿ ನೀಡಲು ಶಾಲೆ, ಕ್ಯಾನ್ಸರ್ ಔಷಧಿಗೆ ತೆರಿಗೆ ವಿನಾಯಿತಿ ಕೊಡಲಾಗಿದೆ. ಇದು ಜನಹಿತದ ಬಜೆಟ್, ತೆರಿಗೆ ಹೊರೆ ಹಾಕದ ಬಜೆಟ್ ಎಂದು ತಿಳಿಸಿದರು.

ರಾಜ್ಯ ಬಜೆಟ್‌ನಲ್ಲಿ ಕಳೆದ ಸಲ ಸಿದ್ದರಾಮಯ್ಯ ಎಲ್ಲ ತೆರಿಗೆ ಹಾಕಿದ್ರು. ಕೇಂದ್ರ ಯಾವ ಪದಾರ್ಥಗಳಿಗೆ ತೆರಿಗೆ ಕಡಿಮೆ ಮಾಡಿತ್ತೋ ಅವಕ್ಕೆಲ್ಲ ರಾಜ್ಯ ಸರ್ಕಾರ ಕಳೆದ ಬಜೆಟ್‌ನಲ್ಲಿ ತೆರಿಗೆ ಹಾಕಿತ್ತು. ಮುಂಬರುವ ರಾಜ್ಯ ಬಜೆಟ್‌ನಲ್ಲಿ ಗ್ಯಾರಂಟಿ ಮಾರಿ ಹಬ್ಬ ಕಾದಿದೆ. ರಾಜ್ಯ ಸರ್ಕಾರದಲ್ಲಿ ಖಜಾನೆ ಖಾಲಿ ಆಗಿದೆ. ಮುಂದಿನ ಕರ್ನಾಟಕದ ಬಜೆಟ್‌ನಲ್ಲಿ ತೆರಿಗೆ ಏರಿಸಲಾಗುತ್ತದೆ. ಈ ಹಿಂದೆ ರಾಜ್ಯ ಸರ್ಕಾರ ಆರ್ಥಿಕ ಶಿಸ್ತು ಕಾಪಾಡಿಕೊಂಡಿತ್ತು. ಸಿದ್ದರಾಮಯ್ಯ ಬಂದ ಮೇಲೆ ಆರ್ಥಿಕ ಶಿಸ್ತು ಬಾರ್ಡರ್‌ಗೆ ಬಂದಿದೆ. ಕೇಂದ್ರದ ಬಜೆಟ್ ಸ್ವಾಗತಾರ್ಹ ಬಜೆಟ್ ಎಂದು ಅವರು ಟೀಕಿಸಿದರು.

ಕರ್ನಾಟಕಕ್ಕೆ ಚೊಂಬು ಕೊಟ್ಟಿದ್ದಾರೆ

ಕಲಬುರಗಿ, ಫೆ.1– ಕರ್ನಾಟಕ ಸೇರಿದಂತೆ ದಕ್ಷಿಣ ಭಾರತಕ್ಕೆ ಬಜೆಟ್‌ನಲ್ಲಿ ಏನೂ ಕೊಟ್ಟಿಲ್ಲ. ಕರ್ನಾಟಕಕ್ಕೆ ಒಂದು ಚೊಂಬು ಕೊಟ್ಟಿದ್ದಾರೆ ಎಂದು ಕೇಂದ್ರ ಬಜೆಟ್ ವಿರುದ್ಧ ಸಿಎಂ ಸಿದ್ದರಾಮಯ್ಯ ಗುಡುಗಿದರು.



ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಬೆಂಗಳೂರು–ಹೈದರಾಬಾದ್ ಹಾಗೂ ಬೆಂಗಳೂರು–ಚೆನ್ನೈ ಹೈಸ್ಪೀಡ್ ರೈಲು ಕೊಟ್ಟಿದ್ದಾರೆ. ಅದು ಸಹ 5 ವರ್ಷ ಸಮಯ ತೆಗೆದುಕೊಂಡಿದ್ದಾರೆ. ನಮಗೆ ಬೆಂಗಳೂರು–ಮುಂಬೈ, ಬೆಂಗಳೂರು–ಮಂಗಳೂರು, ಬೆಂಗಳೂರು–ಪುಣೆ ರೈಲು ಬೇಕಾಗಿತ್ತು. ನೀರಾವರಿ ಯೋಜನೆಗೆ ಹಣ ಕೇಳಿದ್ದೇವೆ. ಆದರೆ, ನೀರಾವರಿ ಯೋಜನೆಗೆ ಒಂದೇ ಒಂದು ಶಬ್ದ ಇಲ್ಲ. ಆಫರ್ ಕೃಷ್ಣಾ ಹಾಗೂ ಆಫರ್ ಭದ್ರಾ ಯೋಜನೆಗೆ ಸಹಾಯ ಕೇಳಿದ್ದರೂ ಏನು ಕೊಟ್ಟಿಲ್ಲ. ಈ ಹಿಂದೆ ಬಜೆಟ್‌ನಲ್ಲಿ ಯೋಜನೆಗೆ 5,200 ಕೋಟಿ ಹಣ ಕೊಡುತ್ತೇವೆ ಎಂದಿದ್ದರು. ಆದರೆ, ಒಂದು ರೂಪಾಯಿ ಸಹ ಕೊಟ್ಟಿಲ್ಲ. ಮೇಕೆದಾಟು ಯೋಜನೆ ಪ್ರಕರಣ ಸಂಬಂಧ ತಮಿಳುನಾಡು ಅರ್ಜಿ ವಜಾ ಆಗಿದೆ. ಆದರೂ ಆ ಯೋಜನೆಗೆ ಬಜೆಟ್‌ನಲ್ಲಿ ಹಣ ಕೊಟ್ಟಿಲ್ಲ ಎಂದು ಅಸಮಾಧಾನ ಹೊರಹಾಕಿದರು.

ಮಹದಾಯಿ ಯೋಜನೆಗೆ ಕೇಂದ್ರ ಸರ್ಕಾರ ಪರಿಸರ ಇಲಾಖೆ ಅನುಮತಿ ಕೊಟ್ಟಿಲ್ಲ. ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ನಾವು ಕ್ಲಿಯರ್ ಮಾಡುವುದಾಗಿ ಯಡಿಯೂರಪ್ಪ ರಕ್ತದಲ್ಲಿ ಬರೆದು ಕೊಡುವುದಾಗಿ ಹೇಳಿದ್ದರು. ಆದರೆ, ಕೇಂದ್ರ ಪರಿಸರ ಇಲಾಖೆ ಬಜೆಟ್‌ನಲ್ಲಿ ಈ ಬಾರಿ ಸಹ ಅನುಮತಿ ಕೊಟ್ಟಿಲ್ಲ. ಈ ಮೂಲಕ ಕರ್ನಾಟಕದ ಜನತೆಗೆ ಕೇಂದ್ರ ಅನ್ಯಾಯ ಮಾಡಿದೆ ಎಂದು ವಾಗ್ದಾಳಿ ನಡೆಸಿದರು.

ಬೇಳೆಕಾಳುಗಳಿಗೆ ಸಹಾಯ ಮಾಡಿ ಅಂತ ಕೇಳಿದೂ ಅದು ಸಹ ಮಾಡಿಲ್ಲ. 15ನೇ ಹಣಕಾಸು ಆಯೋಗ ಆರಂಭವಾಗಿದೆ ನಾವು ಕನಿಷ್ಠ 50% ಕೊಡಿ ಅಂತಾ ಕೇಳಿದ್ವಿ. ಆದರೆ, 41% ಮಾತ್ರ ಕೊಟ್ಟಿದ್ದಾರೆ. 14ನೇ ಹಣಕಾಸು ಆಯೋಗದಲ್ಲಿ ಕರ್ನಾಟಕಕ್ಕೆ 4.71% ಮಾತ್ರ 14ನೇ ಹಣಕಾಸಿಗಿಂತ ಜಾಸ್ತಿ ಮಾಡಿ ಕೊಡಿ ಅಂದ್ರೆ 4.131 ಮಾತ್ರ ಕೊಟ್ಟಿದ್ದಾರೆ. ಈ ಮೂಲಕ ಕರ್ನಾಟಕಕ್ಕೆ 14ನೇ ಹಣಕಾಸಿನಷ್ಟು ಸಹ ಹಣ ನೀಡಿಲ್ಲ ಉತ್ತರ ಪ್ರದೇಶಕ್ಕೆ ಹಾಗೂ ಕರ್ನಾಟಕಕ್ಕೆ ಹಣಕಾಸಿನ ಹಂಚಿಕೆಯಲ್ಲಿ ಭಾರಿ ತಾರತಮ್ಯವಾಗಿ ನಮಗೆ ಅನ್ಯಾಯವಾಗಿದೆ ಎಂದು ತಿಳಿಸಿದರು.

ಯಾವುದೇ ಹೊಸ ಯೋಜನೆಯಿಲ್ಲದ ಬಜೆಟ್

ನವದೆಹಲಿ: ಈ ಬಾರಿಯ ಬಜೆಟ್ ನಲ್ಲಿ ಯಾವುದೇ ಹೊಸ ಯೋಜನೆ ಯಿಲ್ಲ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಅಸಮಾಧಾನ ಹೊರಹಾಕಿದ್ದಾರೆ. ಬಡವರಿಗೆ, ಯುವಕರ ಉದ್ಯೋಗಕ್ಕೆ, ಹಣ ದುಬ್ಬರದ ಬಗ್ಗೆ ವಿಶೇಷವಾಗಿ ಏನೂ ಇಲ್ಲ.



ಶಿಕ್ಷಣದಲ್ಲಿ 13 ಸಾವಿರ ಕೋಟಿ ಖರ್ಚಾಗಿಲ್ಲ. ಬಡವರ ಕಾರ್ಯಕ್ರಮ ಕ್ಕಿಟ್ಟಿದ್ದ ಹಣ ಖರ್ಚು ಮಾಡಿಲ್ಲ. ವಿಕಸಿತ ಭಾರತ ಎನ್ನುವ ಪದವನ್ನೆಲ್ಲ ಉಪಯೋಗಿಸುತ್ತಾರೆ. ಇವರ ಬಜೆಟ್ ನೋಡಿದರೆ ಇವರಿಗೆ ಬಡವರ ಮೇಲೆ ಕಾಳಜಿ ಇಲ್ಲದೇ ಇರೋದು ಗೊತ್ತಾಗುತ್ತೆ ಎಂದರು.

ಕರ್ನಾಟಕಕ್ಕೆ ಯಾವುದೇ ಪ್ರಯೋಜನವಿಲ್ಲ

ಬೆಂಗಳೂರು: ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಸಂಸತ್ತಿನಲ್ಲಿ ಮಂಡಿಸಿದ ಕೇಂದ್ರ ಬಜೆಟ್‌ನಿಂದ ರಾಜ್ಯಕ್ಕೆ ಯಾವುದೇ ಪ್ರಯೋಜನವಿಲ್ಲ ಎಂದು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಾನಿನ್ನೂ ಈ ಬಜೆಟ್ ಅನ್ನು ವಿವರವಾಗಿ ಪರಿಶೀಲಿಸಬೇಕಾಗಿದೆ. ಕೇಂದ್ರ ಬಜೆಟ್‌ನಿಂದ ನಮ್ಮ ರಾಜ್ಯಕ್ಕೆ ಯಾವುದೇ ಪ್ರಯೋಜನವಿಲ್ಲ. ನಾನು ಅದನ್ನು ಗಮನಿಸುತ್ತಿದ್ದೆ. ಮನ್ರೇಗಾ ಕಾಯ್ದೆಯನ್ನು ರದ್ದುಗೊಳಿಸಿದ ನಂತರ ಅವರು ಈಗ ಮಹಾತ್ಮ ಗಾಂಧಿಯವರ ಹೆಸರನ್ನು ಒಂದು ಕಾರ್ಯಕ್ರಮಕ್ಕೆ ಇಟ್ಟಿದ್ದಾರೆ



ಈ ಬಜೆಟ್‌ನಿಂದ ನಮ್ಮ ರಾಜ್ಯಕ್ಕೆ ಯಾವುದೇ ಪ್ರಮುಖ ಪಾಲು ಸಿಗುವುದಿಲ್ಲ. ಕೇಂದ್ರ ಬಜೆಟ್‌ನಿಂದ ಬೆಂಗಳೂರಿಗೆ ನಿರೀಕ್ಷೆಗಳಿದ್ದವು. ಪ್ರಧಾನಿ ಮೋದಿ ಇದನ್ನು 'ಜಾಗತಿಕ ನಗರ' ಎಂದು ಕರೆದಿದ್ದಾರೆ. ಆದರೆ, ಕೇಂದ್ರ ಸರ್ಕಾರ ಅದಕ್ಕಾಗಿ ಏನು ಮಾಡಿದೆ ಎಂದರು. ಕೇಂದ್ರ ಸರ್ಕಾರವು ನಿರ್ಧಾರಗಳು ಅಥವಾ ಕ್ರಮಗಳ ಕೊರತೆಯಿಂದಾಗಿ ಸಕ್ಕರೆ ಕಾರ್ಖಾನೆಗಳು, ವಿಶೇಷವಾಗಿ ಸಹಕಾರಿ ವಲಯದ ಕಾರ್ಖಾನೆಗಳು ತೊಂದರೆ ಎದುರಿಸುತ್ತಿವೆ. ರೈತರ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಪಡಿಸುವ ಹಕ್ಕು ಕೇಂದ್ರಕ್ಕೆ ಇದೆ. ರೈತರಿಗೆ ಸಹಾಯ ಮಾಡಲು ಅವರು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದರು.

ನೈಜ ಬಿಕ್ಕಟ್ಟುಗಳು ಮೂಲೆಗುಂಪಾಗಿವೆ

ನವದೆಹಲಿ: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ 2026–27ರ ಕೇಂದ್ರ ಬಜೆಟ್ ಅನ್ನು ಟೀಕಿಸಿದ್ದು, ಇದು ಭಾರತದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಲು ವಿಫಲವಾಗಿದೆ ಎಂದು ಹೇಳಿದರು.



ಯುವಕರಿಗೆ ಉದ್ಯೋಗವಿಲ್ಲದಂತಾಗಿದೆ, ಉತ್ಪಾದನೆ ಕುಸಿಯುತ್ತಿದೆ, ಹೂಡಿಕೆದಾರರು ಬಂಡವಾಳವನ್ನು ಹಿಂತೆಗೆದುಕೊಳ್ಳುತ್ತಿದ್ದಾರೆ, ಮನೆಯ ಉಳಿತಾಯ ಕುಸಿಯುತ್ತಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಜಾಗತಿಕ ಆಘಾತಗಳು ಸನ್ನಿಹಿತವಾಗುತ್ತಿವೆ. ಆದರೆ ಎಲ್ಲವನ್ನೂ ನಿರ್ಲಕ್ಷಿಸಲಾಗಿದೆ ಎಂದು ಕಾಂಗ್ರೆಸ್ ನಾಯಕ ಹೇಳಿದರು.

ಭಾರತದ ನೈಜ ಸಮಸ್ಯೆಗಳನ್ನು ನಿರ್ಲಕ್ಷಿಸಿ, ಅಗತ್ಯ ಬದಲಾವಣೆಗಳನ್ನು ಮಾಡುವಲ್ಲಿ ಬಜೆಟ್ ವಿಫಲವಾಗಿದೆ. 2027ನೇ ಹಣಕಾಸು ವರ್ಷದಲ್ಲಿ ಸರ್ಕಾರ ತನ್ನ ಬಂಡವಾಳ ವೆಚ್ಚವನ್ನು (ಕಾಪೆಕ್ಸ್) 12.2 ಲಕ್ಷ ಕೋಟಿಗೆ ಹೆಚ್ಚಿಸಲು ಯೋಜಿಸಿದೆ. ಇದು ಸದ್ಯದ ವರ್ಷಕ್ಕೆ ನಿಗದಿಪಡಿಸಲಾದ 11.2 ಲಕ್ಷ ಕೋಟಿಗಿಂತ ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. ದೇಶದಲ್ಲಿ ಮೂಲಸೌಕರ್ಯವನ್ನು ಹೆಚ್ಚಿಸಲು, ಅದರಲ್ಲೂ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿ ಹಲವಾರು ಕ್ರಮಗಳನ್ನು ಘೋಷಿಸಿದರು. ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರವು ತನ್ನ ಮೂರನೇ ಅಧಿಕಾರಾವಧಿಯಲ್ಲಿ ಮಂಡಿಸಿದ ಮೂರನೇ ಬಜೆಟ್ ಇದಾಗಿದೆ.

ಅಭಿವೃದ್ಧಿ, ಜನಪರ ಬಜೆಟ್



ಯುವ ಸಮುದಾಯಕ್ಕೆ ಹಾಗೂ ತಾಂತ್ರಿಕ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಹೆಚ್ಚು ಒತ್ತು ನೀಡುವ ಮೂಲಕ ವಿಕಸಿತ ಭಾರತ ಆಶಯಕ್ಕೆ ಪೂರಕ ಕಾರ್ಯಕ್ರಮಗಳನ್ನು ನೀಡಲಾಗಿದೆ. ಅಭಿವೃದ್ಧಿ ಹಾಗೂ ಜನಪರ ಬಜೆಟ್ ಇದಾಗಿದೆ. ಹಣಕಾಸಿನ ಶಿಸ್ತು, ಆರ್ಥಿಕ ಸಮತೋಲನ ಮೂಲ ಸೌಕರ್ಯದಲ್ಲಿ ದಾಖಲೆಯ ಸಾರ್ವಜನಿಕ ಹೂಡಿಕೆ, ಅರೆವಾಹಕಗಳು, ಬಯೋಫಾರ್ಮಾ ಮತ್ತು ಎಲೆಕ್ಟ್ರಾನಿಕ್ಸ್ ಉತ್ಪಾದನೆಯನ್ನು ವೇಗಗೊಳಿಸಲು 2ನೇ ಹಾಗೂ 3ನೇ ಸ್ತರದ ನಗರಗಳಿಗೂ ಯೋಜನೆಗಳನ್ನು ವಿಸ್ತರಿಸಲಾಗುತ್ತಿರುವುದು ಗಮನಾರ್ಹ. ಎಂಎಸ್‌ಎಂಇಗಳು ಭಾರತದ ಆರ್ಥಿಕತೆಯ ಬೆನ್ನೆಲುಬಾಗಿದೆ. ಸಾಲ, ತಂತ್ರಜ್ಞಾನ ಅಳವಡಿಕೆ, ಮಾರುಕಟ್ಟೆ ಸಂಪರ್ಕಗಳು ಮತ್ತು ಸುಲಭ ವ್ಯವಹಾರ ಯೋಜನೆಗಳಿಗೆ ಸಾಕಷ್ಟು ಅನುದಾನ ಒದಗಿಸಿರುವುದು ನಮ್ಮ ಸರ್ಕಾರದ ಹೆಗ್ಗಳಿಕೆ. ಸರಕು ಸಾಗಣೆ ಕಾರಿಡಾರ್‌ಗಳು, ಒಳನಾಡಿನ ಜಲಮಾರ್ಗಗಳು ಮತ್ತು ಹೈ–ಸ್ಪೀಡ್ ರೈಲು ಸಂಪರ್ಕದ ಮೇಲೆ ಕೇಂದ್ರೀಕರಿಸುವುದರಿಂದ ಲಾಜಿಸ್ಟಿಕ್ಸ್ ಅನ್ನು ಬಲಪಡಿಸಲು ಬಜೆಟ್‌ನಲ್ಲಿ ಪ್ರಸ್ತಾವಿಸಲಾಗಿದೆ. ಇದು ಪ್ರಾದೇಶಿಕ ಸಂಪರ್ಕವನ್ನು ಸುಧಾರಿಸುತ್ತದೆ ಮತ್ತು ಸುಸ್ಥಿರ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುತ್ತದೆ.

-**ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್**, ಸಂಸದರು



ನಿರ್ಮಲಾ ಸೀತಾರಾಮನ್ ಅವರು ಈ ಬಾರಿಯ ಬಜೆಟ್‌ನಲ್ಲಿ ಕರ್ನಾಟಕ್ಕೆ ಎರಡು ಹೈಸ್ಪೀಡ್ ರೈಲು ನೀಡಿದ್ದು, ಶ್ರೀಗಂಧ ಮತ್ತು ಗೋಡಂಬಿ ಬೆಳೆಯಲು ಉತ್ತೇಜನ ನೀಡಿದ್ದಾರೆ. ಪ್ರತಿ ಜಿಲ್ಲೆಯಲ್ಲಿ ಹೆಣ್ಣು ಮಕ್ಕಳಿಗೆ ಹಾಸ್ಟೆಲ್ ಒದಗಿಸುವ ಯೋಜನೆ, ಮಹಿಳೆಯರು ಸ್ವಾವಲಂಬಿಗಳಾಗಲು ಶಿ ಮಾರ್ಟ್ ಮಳಿಗೆ ಯೋಜನೆ ಸೇರಿದಂತೆ ಹಲವು ಯೋಜನೆ ಘೋಷಣೆ ದೇಶದ ಆರ್ಥಿಕ ಬೆಳವಣಿಗೆಯನ್ನು ಇಮ್ಮಡಿಗೊಳಿಸುತ್ತದೆ.

- **ಟಿ.ಎಸ್.ಶ್ರೀವತ್ಸ**, ಶಾಸಕ, ಕೆ.ಆರ್.ಕ್ಷೇತ್ರ, ಮೈಸೂರು.



ನಿರ್ಮಲಾ ಸೀತಾರಾಮನ್ ಅವರು ದೇಶದ ವರ್ತಮಾನದ ಕನಸುಗಳನ್ನು ಬಜೆಟ್ ಮೂಲಕ ಸಾಕಾರಗೊಳಿಸುವ ಆಶಾಭಾವನೆ ಮೂಡಿಸಿದ್ದಾರೆ. ಬಜೆಟ್‌ನಲ್ಲಿ ಘೋಷಣೆ ಮಾಡಿರುವ ಹಲವು ಯೋಜನೆ ಹಾಗೂ ಅಂಶಗಳಿಂದ ದೇಶದ ಸರ್ವತೋಮುಖ ಅಭಿವೃದ್ಧಿ ಮತ್ತಷ್ಟು ವೇಗ ಪಡೆಯಲಿದೆ. ಸಣ್ಣ ಸಣ್ಣ ನಗರಗಳ ಅಭಿವೃದ್ಧಿಗೆ ವೇಗ ದೊರೆಯಲಿದ್ದು, ಸೆಮಿ ಕಂಡಕ್ಟರ್ ಕ್ಷೇತ್ರದ ಉತ್ತೇಜನಕ್ಕೆ 40 ಸಾವಿರ ಕೋಟಿ ನೀಡಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಜನಪ್ರಿಯತೆಗಿಂತ ಜನಹಿತ ಬಜೆಟ್ ಇದಾಗಿದೆ. ಸಕ್ಕರೆ ಖಾಯಿಲೆ ಹಾಗೂ ಕ್ಯಾನ್ಸರ್ ರೋಗಿಗಳ ಔಷಧಿಗಳ ದರ ಕಡಿಮೆ ಮಾಡಲಾಗಿದ್ದು, ಅಪಘಾತ ವಿಮೆಗೆ ಯಾವುದೇ ತೆರಿಗೆ ವಿಧಿಸಿಲ್ಲ.

- **ಸಿ.ಎನ್.ಮಂಜೇಗೌಡ**, ವಿಧಾನ ಪರಿಷತ್ ಸದಸ್ಯರು, ಮೈಸೂರು.



ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಹೇಳಿಕೊಳ್ಳುವಂತಹ ಕೊಡುಗೆ ನೀಡಿಲ್ಲ. ಆದರೆ ತಮಿಳುನಾಡು, ಕೇರಳ, ಪಶ್ಚಿಮ ಬಂಗಾಳ ಸೇರಿದಂತೆ ಇತರೆ ರಾಜ್ಯಗಳಿಗೆ ಆದ್ಯತೆ ನೀಡಿದ್ದಾರೆ. ಹೋಟೆಲ್ ಉದ್ಯಮಕ್ಕೆ ಅನುಕೂಲವಾಗುವ, ನಾವು ನಿರೀಕ್ಷೆ ಮಾಡಿದಂತಹ ಯಾವುದೇ ಸುಧಾರಣೆ ಆಗಿಲ್ಲ.

- **ಸಿ.ನಾರಾಯಣ ಗೌಡ**, ಅಧ್ಯಕ್ಷರು, ಹೋಟೆಲ್ ಮಾಲೀಕರ ಸಂಘ, ಮೈಸೂರು.




ನಿರ್ಮಲಾ ಸೀತಾರಾಮನ್ ಅವರು ದೇಶದ ಯುವಜನರು ಹಾಗೂ ಮಹಿಳೆಯರ ಕೇಂದ್ರೀಕೃತವಾದ ಆಯವ್ಯಯ ಮಂಡಿಸಿದ್ದಾರೆ. ಮೊನ್ನೆ ಮಂಡಿಸಿದ ಆರ್ಥಿಕ ಸಮೀಕ್ಷೆಯಲ್ಲಿ ಶೇಕಡ 7.4 ರಷ್ಟು ಪ್ರಗತಿ ಹೊಂದುವ ಗುರಿ ಇದ್ದರೂ, ಈಗ ಮಂಡಿಸಿರುವ ಬಜೆಟ್ ಪರಿಣಾಮವನ್ನು ಅವಲೋಕಿಸಿದಾಗ ದೇಶದ ಆರ್ಥಿಕ ಬೆಳವಣಿಗೆ ಎರಡಂಕಿ ವೇಗದಲ್ಲಿ ಬೆಳೆಯುವುದರಲ್ಲಿ ಸಂದೇಹವಿಲ್ಲ. ಖಾದಿ ಉದ್ಯಮದ ಪುನಶ್ಚೇತನಗೊಳಿಸಲು ಗಾಂಧಿ ಗ್ರಾಮೋದ್ಯೋಗ ಯೋಜನೆ ಗಮನಾರ್ಹವಾಗಿದ್ದು, ಕ್ರೀಡಾ ಸಲಕರಣೆಗಳನ್ನು ವಿದೇಶಗಳಿಗೆ ರಫ್ತು ಮಾಡುವ ಕ್ರೀಡಾ ಹಬ್ ಸ್ಥಾಪಿಸಲು ಉದ್ದೇಶಿಸಿರುವುದು ಅತ್ಯಂತ ಸಮಂಜಸವಾಗಿದೆ.

– **ಎಂ.ಎ.ಮೋಹನ್**, ನಗರ ಬಿಜೆಪಿ ವಕ್ತಾರ, ಮೈಸೂರು.




ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿರಾಶದಾಯಕ ಬಜೆಟ್ ಮಂಡಿಸಿದ್ದಾರೆ. ಆಯವ್ಯಯದ ಬಹುಪಾಲು ಅಂಶ ಉತ್ತರ ಪ್ರದೇಶ, ಪಶ್ಚಿಮ ಬಂಗಾಳ ಚುನಾವಣೆ ಮೇಲೆ ಗಮನ ಹರಿಸಲಾಗಿದೆ. ಕರ್ನಾಟಕಕ್ಕೆ ಹೈಸ್ಪೀಡ್ ರೈಲು ನೀಡಿರುವುದನ್ನು ಬಿಟ್ಟರೆ ಅಕ್ಷರಶಃ ಇದು ರೈಲು ಬಿಟ್ಟ ಬಜೆಟ್ ಆಗಿದೆ. ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿದ್ದರೂ ಕೃಷಿ, ಕೈಗಾರಿಕಾ ವಲಯವನ್ನು ನಿರ್ಲಕ್ಷಿಸಲಾಗಿದೆ.

- **ಕೆ.ವಿ.ಮಲ್ಲೇಶ್**, ಮಾಜಿ ಕಾರ್ಪೋರೇಟರ್



ಯಾವುದೇ ಪರಿಣಾಮಕಾರಿ ಯೋಜನೆಗಳಿಲ್ಲದೆ ಕೇವಲ ಒಣ ಘೋಷಣೆಗಳಿಂದ ಕೂಡಿರುವ ಆಯವ್ಯಯವನ್ನು ನಿರ್ಮಲಾ ಸೀತಾರಾಮನ್ ಮಂಡನೆ ಮಾಡಿದ್ದಾರೆ. ರಾಜ್ಯಗಳ ತೆರಿಗೆ ಪಾಲಿನ ಆದಾಯ ಕಬಳಿಸುವ ಒಳ ಯೋಜನೆ ಹೊಂದಿರುವ ಈ ಬಜೆಟ್‌ನಿಂದ ಜನ ಸಾಮಾನ್ಯರಿಗೆ ಯಾವುದೇ ಪ್ರಯೋಜನವಾಗಿಲ್ಲ. ಕರ್ನಾಟಕಕ್ಕೆ ಯಾವುದೇ ನಿರ್ದಿಷ್ಟ ಯೋಜನೆ ಪ್ರಕಟಿಸದೆ ಘೋರ ಅನ್ಯಾಯ ಎಸಗಿದ್ದಾರೆ. ರಾಜ್ಯಕ್ಕೆ ಒಂದಾದರೂ ಐಐಟಿ, ಐಐಎಂ ಮಂಜೂರು ಮಾಡದೆ ಶಿಕ್ಷಣ ಕ್ಷೇತಕ್ಕೂ ಯಾವುದೇ ಕೊಡುಗೆ ನೀಡಿಲ್ಲ.

– **ಹೆಚ್.ಎ.ವೆಂಕಟೇಶ್**, ರಾಜ್ಯ ವಕ್ತಾರ, ಕೆಪಿಸಿಸಿ



ಕರ್ನಾಟಕದಿಂದ 17 ಬಿಜೆಪಿ ಸಂಸದರು ಆಯ್ಕೆಯಾಗಿದ್ದರೂ, ರಾಜ್ಯದ ಅಭಿವೃದ್ಧಿಗೆ ಪೂರಕವಾದ ಯೋಜನೆಯನ್ನು ತರುವುದರಲ್ಲಿ ವಿಫಲರಾಗಿದ್ದಾರೆ. ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಬಜೆಟ್‌ನಲ್ಲಿ ರಾಜ್ಯಕ್ಕೆ ಅನುಕೂಲವಾಗುವ ಬದಲು ಅನ್ಯಾಯವಾಗಿದೆ ಆಧುನಿಕ ತಂತ್ರಜ್ಞಾನ ಎಐ ಬಳಸಿ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಲು ಒತ್ತು ನೀಡಿಲ್ಲ.

- **ಬಿ.ಸುಬ್ರಹ್ಮಣ್ಯ**, ಮಾಜಿ ಅಧ್ಯಕ್ಷ, ಕರ್ನಾಟಕ ಪ್ರದೇಶ ಕುರುಬರ ಸಂಘ.



ವಿಕಸಿತ ಭಾರತದ ಕನಸು ನನಸು ಮಾಡುವ ಬಜೆಟ್ ಅನ್ನು ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ್ದಾರೆ. ಈ ಮೂಲಕ ಸರ್ಕಾರದ ಆದಾಯ, ಖರ್ಚು, ಯೋಜನೆ, ಆರ್ಥಿಕ ಬೆಳವಣಿಗೆ, ಉದ್ಯೋಗ ಸೃಷ್ಟಿ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಬಲಪಡಿಸಬಹುದಾಗಿದೆ. ಸಾಲದ ಪ್ರಮಾಣ ನಿರ್ವಹಣೆ, ಮಧ್ಯಮ ಅವಧಿಯ ಹಣಕಾಸು ಭದ್ರತೆ ಗುರಿ ಇಟ್ಟುಕೊಂಡು ಆಯವ್ಯಯ ಮಂಡನೆ ಮಾಡಿದ್ದಾರೆ.

- **ಡಾ.ಈ.ಸಿ.ನಿಂಗರಾಜ್ ಗೌಡ**, ಮಾಜಿ ಸಿಂಡಿಕೇಟ್ ಸದಸ್ಯ



ಕೇಂದ್ರ ಬಜೆಟ್‌ನಲ್ಲಿ ಕೃಷಿ ಕ್ಷೇತ್ರದ ಅಭಿವೃದ್ಧಿಗೆ ಯಾವುದೇ ಪೂರಕ ಯೋಜನೆಗಳನ್ನು ಪ್ರಕಟಿಸಿಲ್ಲ. ಇದು ರೈತರ ಪಾಲಿಗೆ ನಿರಾಶಾದಾಯಕ ಬಜೆಟ್. ಗ್ರಾಮೀಣ ಭಾಗದಲ್ಲಿ ಹೈನುಗಾರಿಕೆಗೆ ಸಬ್ಸಿಡಿ ಮೂಲಕ ಒತ್ತು ನೀಡಿರುವುದು ಸ್ವಲ್ಪ ಮಟ್ಟಿಗೆ ಸಹಕಾರಿ. ಆದರೂ ಕೇಂದ್ರ ಸರ್ಕಾರ ರೈತರ ಸಮಸ್ಯೆಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಯೋಜನೆಗಳನ್ನು ಜಾರಿಗೊಳಿಸದೆ ಅನ್ಯಾಯ ಮಾಡಿದೆ

- **ಕುರುಬೂರು ಶಾಂತಕುಮಾರ್**, ರೈತ ಮುಖಂಡ



"2026–27ನೇ ಸಾಲಿನ ಕೇಂದ್ರ ಮುಂಗಡ ಪತ್ರ ಒಟ್ಟು ವೆಚ್ಚದ ಪರಿಷ್ಕೃತ ಅಂದಾಜು 49.6 ಲಕ್ಷ ಕೋಟಿ, 26–27ನೇ ಸಾಲಿನ ಸ್ವೀಕೃತಿಗಳು ಮತ್ತು ವೆಚ್ಚಗಳು 36.5 ಲಕ್ಷ ಕೋಟಿ ಮತ್ತು 53.5 ಲಕ್ಷ ಕೋಟಿ ಅಂದಾಜಿಸಲಾಗಿದೆ. ದಾಖಲೆಯ 9ನೇ ಬಾರಿ ವಿತ್ತ ಸಚಿವೆ ನಿರ್ಮಲ ಸೀತಾರಾಮನ್ ಬಜೆಟ್ ಮಂಡಿಸಿದ್ದಾರೆ. 11 ಲಕ್ಷ ಕೋಟಿ ಬಂಡವಾಳ ವೆಚ್ಚ ಮಾಡಿದ್ದು, 28 ಲಕ್ಷ ಕೋಟಿ ಆದಾಯ ನಿರೀಕ್ಷೆ ಮಾಡಲಾಗಿದೆ.

ಜಿಎಸ್‌ಟಿ ಸರಳೀಕರಣ ಮಾಡಿದ್ದು, ವಿತ್ತೀಯ ಕೊರತೆ ಶೇ.4.4ರಷ್ಟು ಇಳಿಕೆ ಮಾಡಲಾಗಿದೆ. ಜನಸಾಮಾನ್ಯರ ಮೇಲೆ ತೆರಿಗೆ ಭಾರ ಇಲ್ಲದ, ಸಬ್ ಕಾ ಸಾತ್– ಸಬ್ ಕಾ ವಿಕಾಸ್, ವಿಕಸಿತ ಭಾರತ ಗುರಿಯನ್ನು ಇಟ್ಟುಕೊಳ್ಳಲಾಗಿದೆ. ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಕರ್ನಾಟಕದ ಪಾಲಿಗೆ ಎರಡು ಹೈ ಸ್ಪೀಡ್ ರೈಲು ಹಾಗೂ ಒಂದು ಟ್ರಕ್ಕಿಂಗ್‌ಗೆ ಅವಕಾಶ ನೀಡಲಾಗಿದೆ. ಬಜೆಟ್ ಕೇವಲ ಘೋಷಣೆಗಳಿಗೆ ಮಾತ್ರ ಸೀಮಿತವಾಗಿದೆ

- **ಡಾ.ಎಂ.ಎಸ್.ಮಂಜುನಾಥ್**, ಆರ್ಥಿಕ ವಿಶ್ಲೇಷಕ




ದೇಶದ ಆರ್ಥಿಕತೆಯನ್ನು ಹೆಚ್ಚಿಸುವ ಅಂಶಗಳು ಬಜೆಟ್‌ನಲ್ಲಿ ಇಲ್ಲ. ಜನರ ಖರೀದಿಸುವ ಶಕ್ತಿ ಕುಗ್ಗಿದ್ದು, ಅವರಿಗೆ ಆರ್ಥಿಕವಾಗಿ ಬಲ ತುಂಬುವ ಯಾವ ಯೋಜನೆಗಳು ಇಲ್ಲ. ಖಾಸಗಿ ಹೂಡಿಕೆ ಉತ್ತೇಜಿಸುವ ಮೂಲಕ ಶ್ರೀಮಂತರ ಸಂಪತ್ತು ಹೆಚ್ಚಿಸುವ ಅಂಶಗಳು ಆಯವ್ಯಯದಲ್ಲಿ ಅಡಕವಾಗಿದೆ.

- **ಜಗದೀಶ್ ಸೂರ್ಯ**, ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್ ವಾದಿ)



ಕೇಂದ್ರ ಸರ್ಕಾರದ ಬಜೆಟ್ ರೈತರ ಪಾಲಿಗೆ ನಿರಾಶಾದಾಯಕ. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಖಾತರಿ ಕಾನೂನು ಜಾರಿಯಾಗಬೇಕಿತ್ತು. ರೈತರ ಕೃಷಿ ಸಾಲ ಸಂಪೂರ್ಣ ಮನ್ನಾ ಮಾಡಬೇಕಿತ್ತು. ಕೆರೆ–ಕಟ್ಟೆಗಳ ಒತ್ತುವರಿ ತೆರವುಗೊಳಿಸಿ, ಹೂಳು ತೆಗೆದು ಆ ಮಣ್ಣನ್ನು ರೈತರ ಜಮೀನುಗಳಿಗೆ ನೀಡಿ ಭೂಮಿಯ ಫಲವತ್ತತೆ ಹೆಚ್ಚಿಸುವ ನಿಟ್ಟಿನಲ್ಲಿ ಕಾರ್ಯ ಯೋಜನೆ ಜಾರಿಗೆ ತರಬೇಕಿತ್ತು. ಕಬ್ಬಿನ ಎಫ್‌ಆರ್‌ಪಿ ದರ ರೈತರ ಹೊಲದಲ್ಲಿನ ದರ ಎಂದು ನಿಗದಿಪಡಿಸುವ ಮಾನದಂಡ ಜಾರಿಗೆ ತರಬೇಕಿತ್ತು.

-**ಅತ್ತಹಳ್ಳಿ ದೇವರಾಜ್**, ರೈತ ಮುಖಂಡ



ಕೇಂದ್ರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಹಿಳೆಯಾಗಿ 9ನೇ ಬಾರೀ ಬಜೆಟ್ ಮಂಡಿಸಿರುವ ಸಂತೋಷ ಬಿಟ್ಟರೆ ಬೇರೇನೂ ಇದರಲ್ಲಿ ಇಲ್ಲ. ಒಂದು ಅಭಿವೃದ್ಧಿ ಬಜೆಟ್ ಎಂದರೆ ಶಿಕ್ಷಣ, ಆರೋಗ್ಯ ಕ್ಷೇತ್ರಗಳಿಗೆ ಹೆಚ್ಚು ಒತ್ತು ನೀಡಬೇಕು. ಆದರೆ ಇಲ್ಲಿ ಅದು ಕಾಣುತ್ತಿಲ್ಲ. ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸುವ ಬಗ್ಗೆ ಹೆಚ್ಚಿನ ಗಮನ ನೀಡಿಲ್ಲ. ದೇಶದ ಅನ್ನದಾತನ ಬೇಡಿಕೆಗೆ ಅನುಗುಣವಾಗಿ ರೈತ ಸಮುದಾಯದ ಶ್ರೇಯೋಭಿವೃದ್ಧಿಗೆ ಹೆಚ್ಚು ಅನುದಾನ ಮೀಸಲಿಟ್ಟಿಲ್ಲ. ಬಡ ಮೀನುಗಾರರಿಗೆ ಉತ್ತಮ ಬೋಟು, ಸಲಕರಣೆ, ಡಿಸೆಲ್ ಸಬ್ಸಿಡಿ, ವಿಮೆ ಸೌಲಭ್ಯಗಳಿಗೆ ಹೆಚ್ಚು ಒತ್ತು ನೀಡಬೇಕಿತ್ತು.

-**ಎಲ್.ಶಂಭುಲಿಂಗಸ್ವಾಮಿ**, ರಾಜ್ಯ ಜಂಟಿ ಕಾರ್ಯದರ್ಶಿ, ಕೆಪಿಸಿಸಿ ಮೀನುಗಾರರ ವಿಭಾಗ, ಮೈಸೂರು.

ಎಂಎಸ್‌ಎಂಇಗಳಿಗೆ ಬಂಪರ್ ಕೊಡುಗೆ


ಪಿ.ವಿಶ್ವನಾಥ್


ಸುರೇಶ್ ಕುಮಾರ್

ಮೈಸೂರು: ಕೇಂದ್ರ ಬಜೆಟ್‌ನಲ್ಲಿ ಎಂಎಸ್‌ಎಂಇಗಳಿಗೆ ಬಂಪರ್ ಕೊಡುಗೆ ನೀಡಿದ್ದು, ಅಭಿವೃದ್ಧಿ ಪೂರಕ ಬಜೆಟ್ ಎಂದು ಮೈಸೂರು ಕೈಗಾರಿಕೆಗಳ ಸಂಘದ ಅಧ್ಯಕ್ಷ ಪಿ.ವಿಶ್ವನಾಥ್ ಹಾಗೂ ಪ್ರಧಾನ ಕಾರ್ಯದರ್ಶಿ ಸುರೇಶ್ ಕುಮಾರ್ ಜೈನ್ ಸ್ವಾಗತಿಸಿದ್ದಾರೆ.

ಕಂಟೈನರ್ ತಯಾರಿಕಾ ನೀತಿ, ರಾಷ್ಟ್ರೀಯ ಜವಳಿ ನೀತಿ, ಮೆಗಾ ಜವಳಿ ಪಾರ್ಕ್ ಅಭಿವೃದ್ಧಿಗೆ ನಿರ್ಮಲಾ ಸೀತಾರಾಮನ್ ಉತ್ತೇಜನ ನೀಡಿದ್ದಾರೆ. ಭಾರೀ ಮೊತ್ತದ ನಿರ್ಮಾಣ ಮತ್ತು ಮೂಲಭೂತ ಸೌಕರ್ಯ ಅಭಿವೃದ್ಧಿ ಉಪಕರಣಗಳ ತಯಾರಿಕಾ ವಲಯ ಉನ್ನತೀಕರಣ ನೀತಿ, 200 ಕೈಗಾರಿಕಾ ಹಬ್‌ಗಳ ಮೂಲಭೂತ ಸೌಕರ್ಯ ಮತ್ತು ತಂತ್ರಜ್ಞಾನ ಉನ್ನತೀಕರಣದ ಮೂಲಕ ಎಸ್‌ಎಂಇ ಚಾಂಪಿಯನ್ ಘೋಷಣೆ ಮಾಡಿದ್ದಾರೆ. ಇದರಿಂದ 6,500 ಎಕರೆ ಪ್ರದೇಶದ ಮೈಸೂರು ಹೆಬ್ಬಾಳು ವಿಶೇಷ ಹೂಡಿಕೆ ವಲಯವಾಗಿ ಈ ಯೋಜನೆಯಲ್ಲಿ ಸೇರಬಹುದಾಗಿದೆ.



9ನೇ ಬಾರಿಗೆ ದೇಶದ ಬಜೆಟ್ ಅನ್ನು ಮಂಡಿಸಿರುವ ನಿರ್ಮಲಾ ಸೀತಾರಾಮನ್ ಮತ್ತೊಂದು ಠುಸ್ ಪಟಾಕಿ ಹಾರಿಸಿದ್ದಾರೆ. 2026–27ನೇ ಸಾಲಿನ ಬಜೆಟ್ ದೇಶದ ಅಭಿವೃದ್ಧಿಗೆ ಪೂರಕವಾಗಿಲ್ಲ. ಈ ಸಾಲಿನ ಬಜೆಟ್‌ನಲ್ಲೂ ಕೃಷಿಯನ್ನು ಸಂಪೂರ್ಣವಾಗಿ ಕಡೆಗಣಿಸಲಾಗಿದೆ. ಕಳೆದ ಬಜೆಟ್‌ನಲ್ಲಿ ಕೃಷಿಗೆ 1.70 ಲಕ್ಷ ಕೋಟಿ ನೀಡಲಾಗಿತ್ತು. ಆದರೆ ಈ ಬಾರಿ ಕೇವಲ 162 ಲಕ್ಷಕ್ಕೆ ಇಳಿಸಿ ಕೃಷಿ ಕ್ಷೇತ್ರಕ್ಕೆ ಅನ್ಯಾಯ ಮಾಡಲಾಗಿದೆ. ಕಬ್ಬು ಬೆಳಗಾರರ ನಿರೀಕ್ಷೆ ಹುಸಿಯಾಗಿದೆ. ಗ್ರಾಮೀಣ ಮೂಲ ಸೌಕರ್ಯ ಮತ್ತು ಅಭಿವೃದ್ಧಿಗೆ ಕಾರ್ಯಕ್ರಮಗಳೇ ಬಜೆಟ್‌ನಲ್ಲಿಲ್ಲ. ಎನ್‌ಡಿಎ ಅಂಗ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳಿಗೆ ಹೆಚ್ಚು ಅನುದಾನ ನೀಡಿದ್ದು, ರಾಜ್ಯವನ್ನು ಕಡೆಗಣಿಸಿ, ದಕ್ಷಿಣ ಭಾರತವನ್ನು ಮರೆತಿದೆ.

-**ಬಡಗಲಪುರ ನಾಗೇಂದ್ರ**, ರೈತ ಮುಖಂಡ

ಕಾಂಗ್ರೆಸ್ ಟೀಕೆಗಳಿಗೆ ಬಜೆಟ್ ಉತ್ತರ

ಮೈಸೂರು,ಫೆ.1–ಕೇಂದ್ರದ ಹಣಕಾಸು ಖಾತೆ ಸಚಿವೆ ನಿರ್ಮಲಾ ಸೀತಾರಾಮನ್ ಅವರು 2026–27ನೇ ಸಾಲಿನ ಆಯವ್ಯಯದ ಮೂಲಕ ರಾಜ್ಯ ಕಾಂಗ್ರೆಸ್ ಸರ್ಕಾರ ಮಾಡುತ್ತಿರುವ ಟೀಕೆಗಳಿಗೆ ತಕ್ಕ ಉತ್ತರ ನೀಡಿದ್ದಾರೆ ಎಂದು ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದ್ದಾರೆ.



ಆಯವ್ಯಯ ಕುರಿತು ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಅವರು, ತೆರಿಗೆ ಪಾಲಿನಲ್ಲಿ ಅನ್ಯಾಯ ಆಗಿದೆ ಎಂದು ರಾಜ್ಯ ಸರ್ಕಾರ ಸಾಮಾನ್ಯವಾಗಿ ದೂರುತ್ತಿತ್ತು. 16ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ಶೇ 4.13ರಷ್ಟು ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಿದೆ. 15ನೇ ಹಣಕಾಸು ಆಯೋಗವು ಶೇ 3.64 ಹಂಚಿಕೆ ಮಾಡಿತ್ತು. ಈ ಮೂಲಕ ರಾಜ್ಯಕ್ಕೆ 2026–27ನೇ ಸಾಲಿನಲ್ಲಿ 63,049 ಕೋಟಿ ತೆರಿಗೆ ಪಾಲು ದೊರೆಯಲಿದೆ. ಇನ್ನು ಮುಂದೆ ರಾಜ್ಯ ಕಾಂಗ್ರೆಸ್ ಸರಕಾರಕ್ಕೆ ರಾಜಕೀಯವಾಗಿ ಕೇಂದ್ರವನ್ನು ಟೀಕೆ ಮಾಡುವುದನ್ನು ಬಿಡಬೇಕು ಎಂದು ಹೇಳಿದ್ದಾರೆ.

ಈ ಬಜೆಟ್‌ನಲ್ಲಿ ಕರ್ನಾಟಕ್ಕೆ ನಿರಾಶೆಯೇನೂ ಆಗಿಲ್ಲ. ತೆಂಗು ಪ್ರೋತ್ಸಾಹ ಯೋಜನೆಯಡಿ ತೆಂಗಿನ ಉತ್ಪಾದನೆ ಹೆಚ್ಚಳಕ್ಕೆ ಉತ್ತೇಜನ ಕೊಡಲಾಗಿದೆ. ಹಾಗೆಯೇ ಗೋಡಂಬಿ ಮತ್ತು ಕೋಕೋವನ್ನು 2030ರ ವೇಳೆಗೆ ಪ್ರೀಮಿಯಂ ಗ್ಲೋಬಲ್ ಬ್ರಾಂಡ್ ಆಗಿ ರೂಪಿಸುವ ಅಂಶವು ಮುಂಗಡ ಪತ್ರದಲ್ಲಿ ಸೇರಿದೆ. ಶ್ರೀಗಂಧ, ತೆಂಗು ಬೆಳೆ, ಕೋಕೋ ಬೆಳೆಗೆ ವಿಶೇಷ ಯೋಜನೆ ಮೂಲಕ ರಾಜ್ಯದ ಹಲವಾರು ಜಿಲ್ಲೆಗಳಿಗೆ ಉಪಯೋಗ ಆಗುತ್ತದೆ ಎಂದಿದ್ದಾರೆ.



ಕೇಂದ್ರ ಬಜೆಟ್ ಅಭಿವೃದ್ಧಿಗೆ ಪೂರಕವಾಗಿದೆ. ನಾರಿಯರಿಗೆ ಹಾಗೂ ಯುವ ಉದ್ಯಮಗಳಿಗೆ ಉತ್ತೇಜನಕ್ಕೆ ಕಾರ್ಯಕ್ರಮ ನೀಡಿದೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಆದ್ಯತೆ ಕೊಟ್ಟಿದ್ದು, ದೇಶದಲ್ಲಿ ಬಡತನ ನೀಗಿಸುವ ಹಾಗೂ ಪ್ರವಾಸೋದ್ಯಮಕ್ಕೆ ಉತ್ತೇಜನ ನೀಡಲು ಕಾರ್ಯಕ್ರಮಗಳನ್ನು ನೀಡಲಾಗಿದೆ. ಹಾಗಾಗಿ ಇದು ಉತ್ತಮ ಬಜೆಟ್.

-**ವಿ.ಶೈಲೇಂದ್ರ**, ಮಾಜಿ ಉಪಮೇಯರ್



ವಿಶೇಷವಾಗಿ ಗ್ರಾಮೀಣ ಮಹಿಳೆಯರನ್ನು ದೃಷ್ಟಿಯಲ್ಲಿಟ್ಟುಕೊಂಡು ಸ್ವ–ಸಹಾಯ ಉದ್ಯಮಿಗಳಾಗಬೇಕೆಂಬ ಬಗ್ಗೆ ಗಮನ ನೀಡಲಾಗಿದೆ. ಇದು ಸ್ವಾಗತಾರ್ಹ. ಉದ್ಯಮ ಮಾದರಿಯಲ್ಲಿ ಹೊರಹೊಮ್ಮಲು ಸಾಲ–ಸೌಲಭ್ಯ ಕೊಡುವುದಾಗಿ ಘೋಷಿಸಲಾಗಿದೆ. ಇದಕ್ಕಾಗಿ ಹಣ ಹೂಡಿಕೆ ಮಾಡುವ ಘೋಷಣೆ ಮಾಡಿದೆ. 2026 ಅನ್ನು 'ಅಂತಾರಾಷ್ಟ್ರೀಯ ಕೃಷಿ ಮಹಿಳಾ ಕಾರ್ಮಿಕರ ವರ್ಷ' ಎಂದು ವಿಶ್ವಸಂಸ್ಥೆ ಘೋಷಿಸಿದ್ದು, ಇದಕ್ಕೆ ಪೂರಕವಾಗಿ ಈ ರೀತಿಯಲ್ಲಿ ಒತ್ತು ನೀಡಲಾಗಿದೆ. ಭಾರತ ಮತ್ತು ಯೂರೋಪಿಯನ್ ಒಕ್ಕೂಟದ ವ್ಯಾಪಾರ ಒಪ್ಪಂದಕ್ಕೆ ಪೂರಕವಾಗಿ ದೇಶದ ಎಂಎಸ್‌ಎಂಇಗಳಿಗೆ ಆದ್ಯತೆ ನೀಡಲಾಗಿದೆ. ಜವಳಿ ವಲಯದ ಕೌಶಲ್ಯ ಅಭಿವೃದ್ಧಿ ವ್ಯವಸ್ಥೆಯನ್ನು ಆಧುನೀಕರಿಸಲು ಮತ್ತು ಮೇಲ್ದರ್ಜೆಗೇರಿಸಲು ಸಮರ್ಥ್ 2.0 ಕಾರ್ಯಕ್ರಮ ಘೋಷಿಸಲಾಗಿದೆ. ಒಟ್ಟಾರೆ ದೇಶದ ಅಭಿವೃದ್ಧಿಗೆ ಇದು ಪೂರಕ ಬಜೆಟ್.

-**ಡಾ.ಆರ್.ಹೆಚ್.ಪವಿತ್ರ**, ಅರ್ಥಶಾಸ್ತ್ರ ಪ್ರಾಧ್ಯಾಪಕರು



ಕೇಂದ್ರ ಬಜೆಟ್‌ನಲ್ಲಿ 'ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಯೋಜನೆ' ಸೇರಿಸಿರುವುದು ಸ್ವಾಗತಾರ್ಹ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಹೆಸರು ಬದಲಾವಣೆಗೆ ಕಾಂಗ್ರೆಸ್‌ನಿಂದ ವ್ಯಾಪಕ ವಿರೋಧ ವ್ಯಕ್ತವಾಗುತ್ತಿದೆ. ಇದರಿಂದ ಕೇಂದ್ರ ಸರ್ಕಾರದ ಆತ್ಮ ಸಾಕ್ಷಿಯೂ ಕಲಕಿರಬಹುದು. ಗ್ರಾಮೀಣ ಪ್ರದೇಶದಲ್ಲಿ ವ್ಯವಸಾಯವೊಂದೇ ರೈತರಿಗೆ ಅನುಕೂಲ ಮಾಡಿಕೊಡುವುದಿಲ್ಲ. ಹಾಗಾಗಿ ವ್ಯವಸಾಯದ ಕೆಲಸವಿಲ್ಲದಾಗ ಖಾದಿ ಉದ್ಯಮ, ಕರಕುಶಲಯಲ್ಲಿ ತೊಡಗಿಸಿಕೊಳ್ಳಲು ಈ ಯೋಜನೆಯಲ್ಲಿ ಅವಕಾಶ ಕಲ್ಪಿಸುವುದಾಗಿ ಸರ್ಕಾರ ಹೇಳಿಕೊಂಡಿದೆ. ಸದರಿ ಯೋಜನೆಯಡಿ ಹಣಕಾಸು ನೆರವು, ತರಬೇತಿ, ಸಾಂಸ್ಥಿಕ ಸೌಲಭ್ಯ ಮತ್ತು ಉತ್ತೇಜನ, ಮಾರುಕಟ್ಟೆ ನೆರವು ನೀಡುವ ಉದ್ದೇಶವು ಸೂಕ್ತವಾಗಿದೆ.

-**ಡಾ.ಎಂ.ಜಿ.ಬಸವರಾಜ**, ನಿವೃತ್ತ ಅರ್ಥಶಾಸ್ತ್ರ ಪ್ರಾಧ್ಯಾಪಕರು

ರಾಜ್ಯಕ್ಕೆ ಬಯಸಿದ್ದು ಸಿಗದಿದ್ದರೂ ಸಿಕ್ಕ ಭಾಗ್ಯವೇ ಸಮಾಧಾನ

ಶ್ರೀಗಂಧಕ್ಕೆ ಒತ್ತಾಸೆ; ಮೈಸೂರು ನಗರಕ್ಕೆ ಅನುದಾನ; ಮೀನುಗಾರಿಕೆಗೆ ನೆರವು; ಬೆಂಗಳೂರಿಗೆ ಎರಡು ಹೈಸ್ಪೀಡ್ ರೈಲು; ಸೆಮಿಕಂಡಕ್ಟರ್‌ಗೆ ಅನುದಾನ ವಿಶ್ವಾಸ

ನವದೆಹಲಿ: ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಮಹತ್ತರ ಯೋಜನೆಗಳು ಘೋಷಣೆಯಾಗದಿದ್ದರೂ, ರಾಜ್ಯದ ಆರ್ಥಿಕತೆಯ ಬೆನ್ನೆಲುಬಾಗಿರುವ ತೋಟಗಾರಿಕೆ, ಮಾಹಿತಿ ತಂತ್ರಜ್ಞಾನ ಹಾಗೂ ನಗರಾಭಿವೃದ್ಧಿಗೆ ಪೂರಕವಾದ ಒಂದಷ್ಟು ಅಂಶಗಳಿವೆ. ಜೊತೆಗೆ ರೈಲ್ವೆ ಯೋಜನೆ ಒಂದಷ್ಟು ಸಮಾಧಾನ ತಂದಿವೆ.

ಶ್ರೀಗಂಧಕ್ಕೆ ಬೆಂಬಲ: ಕರ್ನಾಟಕದ ಅಸ್ಮಿತೆಯಾಗಿರುವ ಶ್ರೀಗಂಧದ ಕೃಷಿಗೆ ಬಜೆಟ್‌ನಲ್ಲಿ ವಿಶೇಷ ಆದ್ಯತೆ ನೀಡಲಾಗಿದೆ. ಶ್ರೀಗಂಧದ ವ್ಯವಸ್ಥಿತ ಕೃಷಿ ಮತ್ತು ಸಂಸ್ಕರಣೆಗಾಗಿ ರಾಜ್ಯ ಸರ್ಕಾರ ದೊಂದಿಗೆ ಕೇಂದ್ರವು ಪಾಲುದಾರಿಕೆ ವಹಿಸಲಿದ್ದು, ಇದರಿಂದ ರಾಜ್ಯದ ಶ್ರೀಗಂಧ ಬೆಳೆಗಾರರಿಗೆ ಸಂಶೋಧನೆ ಜೊತೆಗೆ ಮಾರುಕಟ್ಟೆಯ ದೊಡ್ಡ ಬೆಂಬಲ ಸಿಗಬಹುದು.

ಮೈಸೂರಿಗೂ ಅನುಕೂಲ: ಬಜೆಟ್‌ನಲ್ಲಿ 5 ಲಕ್ಷಕ್ಕಿಂತ ಹೆಚ್ಚು ಜನಸಂಖ್ಯೆ ಹೊಂದಿರುವ ನಗರಗಳ ಮೂಲ ಸೌಕರ್ಯಕ್ಕೆ ಒತ್ತು ನೀಡಲಾಗಿರುವುದರಿಂದ ಮೈಸೂರು, ಹುಬ್ಬಳ್ಳಿ–ಧಾರವಾಡ, ಬೆಳಗಾವಿ, ಮಂಗಳೂರು ಮತ್ತು ಕಲಬುರಗಿ ಇನ್ನಿತರ ನಗರಗಳಿಗೆ ಕೇಂದ್ರದ 12.2 ಲಕ್ಷ ಕೋಟಿ ಬಂಡವಾಳ ವೆಚ್ಚದ ನಿಧಿಯಿಂದ ಹೆಚ್ಚಿನ ಪಾಲು ಸಿಗಲಿದ್ದು, ಈ ನಗರಗಳಲ್ಲಿ ಮೆಟ್ರೋ, ಸುಸಜ್ಜಿತ ರಸ್ತೆ ಮತ್ತು ಐಟಿ ಪಾರ್ಕ್‌ಗಳ ನಿರ್ಮಾಣಕ್ಕೆ ವೇಗ ಸಿಗುವ ಸಾಧ್ಯತೆ ಇದೆ.

ಮೀನುಗಾರಿಕೆಗೆ ಬಲ: ಒಳನಾಡು ಮೀನುಗಾರಿಕೆ ಮತ್ತು ಜಲಾಶಯಗಳ ಅಭಿವೃದ್ಧಿಗಾಗಿ ಘೋಷಿಸಲಾದ 500 ಜಲಾಶಯಗಳ ಯೋಜನೆಯಡಿ ಕರ್ನಾಟಕದ ಪ್ರಮುಖ ಅಣೆಕಟ್ಟುಗಳು ಮತ್ತು ಕರಾವಳಿಯ ಮೀನುಗಾರಿಕಾ ಕೇಂದ್ರಗಳಿಗೆ ಆಧುನಿಕ ಸ್ಪರ್ಶ ಸಿಗಲಿದೆ. ಗೇರು ಮತ್ತು ಕೋಕೋ ಉತ್ಪಾದನೆಯಲ್ಲಿ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳು ಜಾಗತಿಕ ಬ್ರ್ಯಾಂಡ್ ಆಗಿ ಹೊರಹೊಮ್ಮಲು ಕೇಂದ್ರದ ಹೊಸ 'ಡೆಡಿಕೇಟೆಡ್ ಪ್ರೋಗ್ರಾಂ' ಸಹಕಾರಿಯಾಗಲಿದೆ.

ಬೆಂಗಳೂರು ಸೆಮಿಕಂಡಕ್ಟರ್ ಹಬ್: ಸೆಮಿಕಂಡಕ್ಟರ್ ವಲಯಕ್ಕೆ ಘೋಷಿಸಲಾದ 40,000 ಕೋಟಿ ಹೂಡಿಕೆಯ ಸಿಂಹಪಾಲು ಬೆಂಗಳೂರಿಗೆ ಬರುವ ಸಾಧ್ಯತೆಯಿದೆ. ಈಗಾಗಲೇ ಚಿಪ್ ಡಿಸೈನಿಂಗ್‌ನಲ್ಲಿ ಮುಂಚೂಣಿಯಲ್ಲಿರುವ ಬೆಂಗಳೂರು, ಈ ಹೂಡಿಕೆಯಿಂದ ಜಾಗತಿಕ ಮಟ್ಟದ ಉತ್ಪಾದನಾ ಕೇಂದ್ರವಾಗಿ ಹೊರಹೊಮ್ಮಲಿದೆ.

ರೈಲು ಕಾರಿಡಾರ್ ಕೊಡುಗೆ: ದೇಶಾದ್ಯಂತ ಘೋಷಿಸಲಾದ 7 ಹೊಸ ಹೈಸ್ಪೀಡ್ ರೈಲು ಕಾರಿಡಾರ್‌ಗಳಲ್ಲಿ ಬೆಂಗಳೂರಿಗೆ ಎರಡು ಪ್ರಮುಖ ಮಾರ್ಗಗಳು ದಕ್ಕಿವೆ. ಬೆಂಗಳೂರು– ಚೆನ್ನೈ ಹೈಸ್ಪೀಡ್ ಕಾರಿಡಾರ್‌ನಿಂದ ಉಭಯ ಐಟಿ ಹಬ್‌ಗಳ ನಡುವಿನ ಪ್ರಯಾಣದ ಸಮಯ ಗಣನೀಯವಾಗಿ ಕಡಿಮೆಯಾಗಲಿದೆ. ಹಾಗೆಯೇ ಬೆಂಗಳೂರು–ಹೈದರಾಬಾದ್ ಹೈಸ್ಪೀಡ್ ಕಾರಿಡಾರ್‌ನಿಂದ ದಕ್ಷಿಣ ಭಾರತದ ಪ್ರಮುಖ ಆರ್ಥಿಕ ಕೇಂದ್ರಗಳ ಸಂಪರ್ಕ ಸಾಕಾರಗೊಳ್ಳಲಿದೆ.

ಬೆಂಗಳೂರು ಉಪನಗರ ರೈಲು ಯೋಜನೆಗೆ ಈ ಬಾರಿಯೂ ಕೇಂದ್ರ ಸರ್ಕಾರವು ತನ್ನ ಪಾಲಿನ ಅನುದಾನ ಮುಂದುವರಿಸಿದ್ದು, ಈ ಯೋಜನೆಯ 148 ಕಿ.ಮೀ ಉದ್ದದ ಮಾರ್ಗದ ಕಾಮಗಾರಿಯನ್ನು ವೇಗಗೊಳಿಸಲು ಮತ್ತು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಲು ಹಣ ಮೀಸಲಿಡಲಾಗಿದೆ. ಬೆಂಗಳೂರು ಮೆಟ್ರೋ ಹಂತ–3ರ ಯೋಜನೆಗಳಿಗಾಗಿ ವಿಶೇಷ ಅನುದಾನದ ನಿರೀಕ್ಷೆಯಿದ್ದು, ಸುಮಾರು 41 ಕಿ.ಮೀ ಹೊಸ ಮಾರ್ಗವನ್ನು 2026ರ ಅಂತ್ಯದೊಳಗೆ ಕಾರ್ಯಾಚರಣೆಗೆ ತರುವ ಗುರಿ ಹೊಂದಲಾಗಿದೆ.

ಬೆಂಗಳೂರು ಜೊತೆಗೆ ಧಾರವಾಡ–ಬೆಳಗಾವಿ, ಗಿಣಿಗೇರಾ–ರಾಯಚೂರು ಸೇರಿದಂತೆ ರಾಜ್ಯದ ಇತರ 9 ಪ್ರಮುಖ ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಅನುದಾನ ನೀಡುವ ಮೂಲಕ ಬಾಕಿ ಇರುವ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕೇಂದ್ರ ಮುಂದಾಗಿದ್ದು, ಕರ್ನಾಟಕಕ್ಕೆ ರೈಲ್ವೆ ವಲಯದಲ್ಲೇ ಸುಮಾರು 7,500 ಕೋಟಿಗೂ ಅಧಿಕ ಅನುದಾನ ಸಿಗಬಹುದೆಂದು ಅಂದಾಜಿಸಲಾಗಿದೆ.

ಮಣವಟ್ಟಿರ ಸಿ.ವಿಶ್ವನಾಥ್ ನಿಧನ



ಕುಶಾಲನಗರ, ಫೆ.1– ಕುಶಾಲನಗರ ನಿವಾಸಿ ಹಾಗೂ ನಿವೃತ್ತ ಕೆಇಬಿ ಅಧಿಕಾರಿ ಮಣವಟ್ಟಿರ ಸಿ.ವಿಶ್ವನಾಥ್ ಅವರು ಇಂದು ರಾತ್ರಿ 9.15ಕ್ಕೆ ಹೃದಯಾಘಾತದಿಂದ ಇಲ್ಲಿನ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರಿಗೆ 78 ವರ್ಷ ವಯಸ್ಸಾಗಿತ್ತು.

ಮೃತರು ಪತ್ನಿ ರತಿ ವಿಶ್ವನಾಥ್, ಪುತ್ರ ರವಿ ಪೊನ್ನಪ್ಪ, ಪುತ್ರಿ ರಶ್ಮಿ ಕಾವೇರಪ್ಪ ಸೇರಿದಂತೆ ಅಪಾರ ಬಂಧು–ಮಿತ್ರರ ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ (ಫೆ.2) ಮಧ್ಯಾಹ್ನ 3 ಗಂಟೆ ಬಳಿಕ ಕೊಡವ ಸಮುದಾಯದ ಸ್ಥಳೀಯ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಮಾಹಿತಿಗಾಗಿ ಮೊ: 98801-61932).



ಪೊನ್ನಮ್ಮ

ನಾಪೋಕ್ಲು: ಸ್ಥಳೀಯ ಪಟ್ಟಣ ನಿವಾಸಿ ದಿವಂಗತ ಅಪ್ಪಚೆಟ್ಟೋಳಂಡ ಗಪ್ಪು ಕಾವೇರಪ್ಪ ಅವರ ಧರ್ಮಪತ್ನಿ ಪೊನ್ನಮ್ಮ (ಪೊನ್ನಕ್ಕಿ 74) ಭಾನುವಾರ ನಿಧನರಾದರು. ಮೃತರು ಪುತ್ರ, ಮೂವರು ಪುತ್ರಿಯರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಮಧ್ಯಾಹ್ನದ ನಂತರ ಜರುಗಿತು.

ಸುಂಟಿಕೊಪ್ಪ, ವಿ.ಪೇಟೆಯಲ್ಲಿ ಭವ್ಯ ಹಿಂದೂ ಸಂಗಮ



ಸುಂಟಿಕೊಪ್ಪ ಹಾಗೂ ವಿರಾಜಪೇಟೆಯಲ್ಲಿ ನಡೆದ ಹಿಂದೂ ಸಂಗಮ ಕಾರ್ಯಕ್ರಮ, ಬೃಹತ್ ಶೋಭಾಯಾತ್ರೆ.

ಸುಂಟಿಕೊಪ್ಪ, ಫೆ.1–ಕುಟುಂಬ ಮತ್ತು ಸಮಾಜದಲ್ಲಿ ಸಾಮರಸ್ಯ, ನಾಗರಿಕ ಶಿಷ್ಟಾಚಾರ, ಸ್ವದೇಶಿ ಬಳಕೆ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಸಾಮರಸ್ಯದೊಂದಿಗೆ ಭಾರತವನ್ನು ವಿಶ್ವ ಗುರುವಾಗಿಸುವ ಉದ್ದೇಶ ಮತ್ತು ಗುರಿಯನ್ನು ಹಿಂದು ಸಂಗಮ ಕಾರ್ಯಕ್ರಮ ಹೊಂದಿದೆ ಎಂದು ರಾಷ್ಟ್ರೀಯ ಸ್ವಯಂಸೇವಕ ಸಂಘದ ಪ್ರಾಂತ ಸೇವಾ ಪ್ರಮುಖ್ ಗುರುರಾಜ್ ಕುಲಕರ್ಣಿ ಹೇಳಿದ್ದಾರೆ.

ಕುಶಾಲನಗರ ತಾಲೂಕು ಮತ್ತು ಸುಂಟಿಕೊಪ್ಪ ಮಂಡಲದ ಹಿಂದು ಸಂಗಮ ಸಮಿತಿ ಸುಂಟಿಕೊಪ್ಪದಲ್ಲಿ ಆಯೋಜಿಸಲಾಗಿದ್ದ ಸಭಾಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿ, ಪ್ರತಿಯೊಬ್ಬ ಮನುಷ್ಯನಲ್ಲಿರುವ ದೋಷಗಳನ್ನು ಅಳಿಸಿ ಅವರನ್ನು ಗುಣ ಸಂಪನ್ನರನ್ನಾಗಿಸಿ ಕುಟುಂಬ ಸಮಾಜ ಮತ್ತು ದೇಶದ ಆಸ್ತಿಯನ್ನಾಗಿಸುವ ಸಂಸ್ಕೃತಿ ನಮ್ಮದಾಗಿದೆ ಎಂದರು.

ಹಿಂದು ಸಂಘಟನೆ ಪ್ರಮುಖರಾದ ಅಜಿತ್ ಅಪ್ಪಚ್ಚು ಮಾತನಾಡಿದರು. ಅಧ್ಯಕ್ಷತೆ ವಹಿಸಿದ್ದ ಸುಂಟಿಕೊಪ್ಪ ಮಂಡಲ ಹಿಂದು ಸಂಗಮ ಅಧ್ಯಕ್ಷ ಎಚ್.ಟಿ.ಬಸವರಾಜ್ ಮಾತನಾಡಿ, ಮಕ್ಕಳಿಗೆ ಮೊಬೈಲ್ ಬಳಕೆ ಕಡಿಮೆ ಮಾಡಿ ಸಂಸ್ಕಾರ ಕಲಿಸುವಂತೆ ಕಿವಿಮಾತು ಹೇಳಿದರು. ಮಾತೆಯರು ಮತ್ತು ಮಹಿಳೆಯರು ಭಜನೆ ಮತ್ತು ಧರ್ಮ ಸಂಬಂಧವಾದ ಕಾರ್ಯಕ್ರಮಗಳಲ್ಲಿ ತೊಡಗಿಸಿಕೊಳ್ಳಬೇಕೆಂದರು. ಸುಂಟಿಕೊಪ್ಪದ ವಿವಿಧ ದೇವಾಲಯಗಳಲ್ಲಿ ದಶಕಗಳ ಕಾಲ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಸೇವೆ ಸಲ್ಲಿಸಿದ ಹಿರಿಯರಾದ ಮಂಡುವಂಡ ಬೋಜಮ್ಮ, ಜವರಮ್ಮ ಮತ್ತು ಲಕ್ಷ್ಮಿಯಮ್ಮರನ್ನು ಸನ್ಮಾನಿಸಿತು

ಇಲ್ಲಿನ ಶ್ರೀಕೋದಂಡ ರಾಮಚಂದ್ರ ದೇವಾಲಯದಲ್ಲಿ ಪೂಜೆ ಸಲ್ಲಿಸಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಸಾಂಪ್ರದಾಯಿಕ ಉಡುಗೆಯೊಂದಿಗೆ ಭವ್ಯವಾದ ಶೋಭಾಯಾತ್ರೆ ನಡೆಸಲಾಯಿತು. ನಗರದ ಪ್ರಮುಖ ಬೀದಿಗಳಲ್ಲಿ ಮಹಿಳೆಯರು ಪೂರ್ಣ ಕುಂಭ ಕಳಶದೊಂದಿಗೆ ಭಗವಾಧ್ವಜ ಸಹಿತ ಭಜನಾ ತಂಡದ ನೃತ್ಯ, ಕೇರಳದ ಚಂಡೆ, ಭಾರತಾಂಬೆಯ ಭಾವಚಿತ್ರ ಅಲಂಕೃತ ತೆರೆದ ಜೀಪಿನಲ್ಲಿ ಇರಿಸಿದ ಮೆರವಣಿಗೆ ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀಮುತ್ತಪ್ಪ ದೇವಸ್ಥಾನದ ಆವರಣದವರೆಗೆ ಸಾಗಿ ಬಂದಿತು.

ಮಾಜಿ ಸಚಿವ ಎಂ.ಪಿ.ಅಪ್ಪಚ್ಚು ರಂಜನ್, ಕಾಫಿ ಬೆಳೆಗಾರರಾದ ಬೋಸ್ ಮಂದಣ್ಣ, ಅಜಿತ್ ಅಪ್ಪಚ್ಚು, ಜಿಪಂ ಮಾಜಿ ಸದಸ್ಯ ಬಿ.ಬಿ.ಭಾರತೀಶ್, ರಾಮಸೇವಾ ಸಮಿತಿ ಕಾರ್ಯದರ್ಶಿ ಅಶೋಕ್‌ಶೇಟ್, ಪಿ.ಕೆ. ಮುತ್ತಣ್ಣ, ಎಂ.ಎ. ವಸಂತ, ವೈ.ಎಂ.ಕರುಂಬಯ್ಯ, ಡಿ.ನರಸಿಂಹ, ಶಾಂತರಾಂ ಕಾಮತ್, ಎಸ್.ಜಿ. ಶ್ರೀನಿವಾಸ್, ಶ್ರೀ ಚಾಮುಂಡೇಶ್ವರಿ ಮತ್ತು ಶ್ರೀಮುತ್ತಪ್ಪ ದೇವಸ್ಥಾನ ಸಮಿತಿ ಅಧ್ಯಕ್ಷ ಪಟ್ಟೆಮನೆ ಉದಯ ಕುಮಾರ್, ಆರ್.ರಮೇಶ್‌ಪಿಳ್ಳೆ, ಗ್ರಾಮದೇವತೆ ಸಮಿತಿ ಅಧ್ಯಕ್ಷ ಎ.ಶ್ರೀಧರ, ಶ್ರೀಪುರಂ ಅಯ್ಯಪ್ಪ ಸ್ವಾಮಿ ಕ್ಷೇತ್ರದ ಸಮಿತಿ ಅಧ್ಯಕ್ಷ ಬಿ.ಎಂ.ಸುರೇಶ್, ಶ್ರೀಗೌರಿ ಗಣೇಶೋತ್ಸವ ಆಚರಣಾ ಸಮಿತಿ ಅಧ್ಯಕ್ಷ ವಿಘ್ನೇಶ್ ಮತ್ತಿತರರು ಉಪಸ್ಥಿತರಿದ್ದರು.

ವಿರಾಜಪೇಟೆ ವರದಿ: ಯುವ ಜನರಿಗೆ ಧಾರ್ಮಿಕ ಮೌಲ್ಯ ಪರಿಚಯಿಸುವುದೇ ಹಿಂದೂ ಸಂಗಮದ ಮಹದುದ್ದೇಶ ಎಂದು ಮಂಗಳೂರು ವಿಭಾಗದ ಕುಟುಂಬ ಪ್ರಬೋಧನ್ ವಿಭಾಗದ ಸಂಯೋಜಕ ಮಂಜೇಶ್ವರದ ಜಿತೇಂದ್ರ ತಿಳಿಸಿದ್ದಾರೆ.

ಆರ್ಜಿಯ ಬೇಟೋಳಿ ಮಂಡಲ ಹಿಂದೂ ಸಂಗಮ ಆಯೋಜನಾ ಸಮಿತಿ, ಪೆರುಂಬಾಡಿಯ ವಾಲ್ಮೀಕಿ ಭವನದಲ್ಲಿ ನಡೆದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ದಿಕ್ಸೂಚಿ ಭಾಷಣ ಮಾಡಿದ ಅವರು, ಹಿಂದುಗಳು ರಾಷ್ಟ್ರ ಧರ್ಮ, ಸಂಸ್ಕೃತಿ ಹಾಗೂ ಸಮಾಜದಲ್ಲಿ ತಮ್ಮ ಕರ್ತವ್ಯದ ಬಗ್ಗೆ ಚಿಂತನೆ ನಡೆಸಲು ಸೇರುತ್ತಿದ್ದಾರೆ. ಅನಾದಿ ಕಾಲದಿಂದಲೂ ಕೌಟುಂಬಿಕ ವ್ಯವಸ್ಥೆ ಯನ್ನು ದೇಶಗಳು ಹಾಡಿ ಹೊಗಳುತ್ತಿವೆ. ಕುಟುಂಬದಲ್ಲಿ ಯಾರೂ ಬೇರ್ಪಟ್ಟು ಹೋಗದೆ ಒಟ್ಟಾಗಿ ಬದುಕುವ ಸಂಸ್ಕಾರ ನಮ್ಮ ಧರ್ಮದ ಮೂಲ. ಕುಟುಂಬ ಮೌಲ್ಯಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ ಎಂದರು.

ಕಾರ್ಯಕ್ರಮದ ಸಂಚಾಲಕ ಅಚ್ಚಪಂಡ ಮಹೇಶ್ ಗಣಪತಿ ಮಾತನಾಡಿ, ಸನಾತನ ಧರ್ಮವನ್ನು ನಾಶ ಮಾಡಲು ಯಾರಿಂದಲೂ ಸಾಧ್ಯವಿಲ್ಲ, ಹಿಂದೆಯೂ ಆಗಿಲ್ಲ, ಮುಂದೆಯೂ ಆಗುವುದಿಲ್ಲ. ವೈವಿಧ್ಯ ಮಯವಾದ ದೇಶದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವ ಮಹತ್ತರವಾದ ಜವಾಬ್ದಾರಿ ಯುವಪೀಳಿಗೆಗೆ ಮೇಲಿದೆ ಆ ಮೂಲಕ ಸನಾತನ ಧರ್ಮದ ಉಳಿವು ನಿಶ್ಚಿತ ಎಂದರು.

ಮಾಜಿ ಸೈನಿಕ ಭವಾನಿ ಶಂಕರ್ ಮಾತನಾಡಿ, ಹಿಂದೂ ಸಂಗಮದಿಂದ ಹಿಂದೂಗಳ ಮಧ್ಯೆ ಹೃದಯಗಳ ಬಂಧನವಾಗಬೇಕು. ಕಳೆದುಹೋದ ಸಂಸ್ಕೃತಿಯನ್ನು ಮತ್ತೆ ಮುಂದಿನ ಪೀಳಿಗೆಗೆ ಹೇಳಿಕೊಡುವಂತಾಗಬೇಕು. ಇಂದಿನ ಪೀಳಿಗೆಗೆ ಧಾರ್ಮಿಕ ಶಿಕ್ಷಣದ ಅವಶ್ಯಕತೆ ಇದೆ. ಜೀವನ ಪದ್ಧತಿಯಲ್ಲಿ ಆಧುನಿಕತೆ ಅತಿಯಾಗಿ ಸಂಸ್ಕೃತಿಯನ್ನು ಮರೆಯುತ್ತಿರುವುದು ದುರಂತ ಎಂದರು. ರಾಜ್ಯ ಸಂಪನ್ಮೂಲ ವ್ಯಕ್ತಿ ರತ್ತು ಕಾವೇರಮ್ಮ, ನಿವೃತ್ತ ಪ್ರೊಫೆಸರ್ ಪಟ್ಟಡ ಪೂವಣ್ಣ ಅಧ್ಯಕ್ಷತೆ ವಹಿಸಿದ್ದರು.

ಆರ್ಜಿ ಬೇಟೋಳಿ ಜಂಕ್ಷನ್‌ನಿಂದ ನಡೆದ ಬೃಹತ್ ಶೋಭಾಯಾತ್ರೆ ಚಂಡೆ, ಕುಣಿತ ಭಜನೆ ಮೆರವಣಿಗೆಗೆ ಮೆರುಗು ನೀಡಿತು.

ವೇದಿಕೆಯಲ್ಲಿ ಹಿಂದೂ ಸಂಗಮ ಕಾರ್ಯಕ್ರಮದ ಸಂಚಾಲಕ ಜೀವನ್, ಸಂಘಟನೆಯ ಪ್ರಮುಖ ಬಿ.ಎಂ. ಗಣೇಶ್, ಪೆರುಂಬಾಡಿ ಎಂ. ಗಣೇಶ್ ಸೇರಿದಂತೆ ನೂರಾರು ಸಂಖ್ಯೆಯಲ್ಲಿ ಹಿಂದೂ ಬಾಂಧವರು ಪಾಲ್ಗೊಂಡಿದ್ದರು.

ಮಣ್ಣಿನ ಭರೆ ಕುಸಿದು ಟಿಪ್ಪರ್ ಚಾಲಕ ಸಾವು; ಮತ್ತೊಬ್ಬನಿಗೆ ತೀವ್ರ ಗಾಯ

ವಿರಾಜಪೇಟೆ: ಜಾಗ ಸಮತಟ್ಟು ಮಾಡಲು ಮಣ್ಣು ತೆಗೆಯುವ ಹೊತ್ತಿನಲ್ಲಿ ಭರೆ ಕುಸಿದು ಚಾಲಕ ಸ್ಥಳದಲ್ಲಿಯೇ ಅಸು ನೀಗಿರುವ ಘಟನೆಯೊಂದು ಭಾನುವಾರ ಸಮೀಪದ ಕದನೂರು ಗ್ರಾಮದಲ್ಲಿ ಸಂಭವಿಸಿದೆ.

ಮೂಲತಃ ಬಾಗಲಕೋಟೆ ಜಿಲ್ಲೆಯ ಭೀಮನ ಘಂಟಿ ನಿವಾಸಿ ಕದನೂರಲ್ಲಿ ಟಿಪ್ಪರ್ ಚಾಲಕನಾಗಿ ಕಾರ್ಯ ನಿರ್ವಹಿಸುತ್ತಿದ್ದ ಸಂಗಮೇಶ (27) ಎಂಬಾತನೇ ಮೃತಪಟ್ಟ ದುರ್ದೈವಿ. ಕದನೂರಿನ ನಾಣಯ್ಯ ಎಂಬುವರ ಜಾಗದಲ್ಲಿ ಬೆಳಿಗ್ಗೆ ಟಿಪ್ಪರ್ ವಾಹನವನ್ನು ಚಾಲಕ ಸಂಗಮೇಶ(27) ಮಣ್ಣು ಸಾಗಿಸಲು ಸ್ಥಳಕ್ಕೆ ಹೋಗಿದ್ದು, ಮಣ್ಣು ತೆಗೆಯುತ್ತಿದ್ದ ಸಂದರ್ಭದಲ್ಲಿಯೇ ಏಕಾಏಕಿ ಮಣ್ಣಿನ ಭರೆ ಕುಸಿಯಿತ್ತೆನ್ನಲಾಗಿದೆ ಟಿಪ್ಪರ್ ವಾಹನದಲ್ಲಿದ್ದ ಸಂಗಮೇಶ್ ಮೇಲೆ ಭರೆ ಕುಸಿದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿದ್ದರೆ, ಅದೇ ವಾಹನದಲ್ಲಿದ್ದ ಕಾರ್ಮಿಕ ಹರೀಶ್ ಎಂಬುವರಿಗೆ ಗಾಯಗಳಾಗಿದ್ದು, ಪಟ್ಟಣದ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ಹೆಚ್ಚಿನ ಚಿಕಿತ್ಸೆಗಾಗಿ ಜಿಲ್ಲಾ ಆಸ್ಪತ್ರೆಗೆ ರವಾನಿಸಲಾಗಿದೆ. ಮೃತರ ಶರೀರವನ್ನು ಸಾರ್ವಜನಿಕ ಆಸ್ಪತ್ರೆಯ ಶವಗಾರದಲ್ಲಿರಿಸಲಾಗಿದೆ. ನಾಳೆ ಮೃತರ ಕುಟುಂಬಸ್ಥರು ಬಂದ ನಂತರ ಶವ ಪರೀಕ್ಷೆ ನಡೆಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿರಾಜಪೇಟೆ ಗ್ರಾಮಾಂತರ ಠಾಣಾಧಿಕಾರಿ ಲತಾ ಸ್ಥಳಕ್ಕೆ ಭೇಟಿ ನೀಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಕೇಂದ್ರ ಬಜೆಟ್‌ಗೆ ಗಡಿ ಜಿಲ್ಲೆಯಲ್ಲಿ ಮಿಶ್ರ ಪ್ರತಿಕ್ರಿಯೆ

ಚಾಮರಾಜನಗರ, ಫೆ.1– ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಭಾನುವಾರ ಮಂಡಿಸಿರುವ 2026–27ನೇ ಸಾಲಿನ ಬಜೆಟ್‌ಗೆ ಗಡಿ ಜಿಲ್ಲೆ ಚಾಮರಾಜನಗರದಲ್ಲಿ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಮಧ್ಯಮ ವರ್ಗದವರು, ಯುವಕರು ಬಜೆಟ್‌ನಲ್ಲಿರುವ ಕೆಲ ಅಂಶಗಳನ್ನು ಮೆಚ್ಚಿಕೊಂಡಿದ್ದಾರೆ. ಆದರೆ ಜಿಲ್ಲೆಯ ರೈತ ಮುಖಂಡರು ಬಜೆಟ್ ಅನ್ನು ವಿರೋಧಿಸಿದ್ದಾರೆ. ರಾಜಕೀಯ ಪಕ್ಷಗಳ ಪೈಕಿ ಬಿಜೆಪಿಯರು ಎಂದಿನಂತೆ ಸ್ವಾಗತಿಸಿದ್ದರೆ, ಕಾಂಗ್ರೆಸ್‌ನವರು ವಿರೋಧಿಸಿದ್ದಾರೆ.



ಕೇಂದ್ರ ಬಜೆಟ್ ಅತ್ಯಂತ ನಿರಾಶದಾಯಕವಾಗಿದೆ. ರೈತರಿಗೆ, ಬಡವರಿಗೆ, ಯುವಕರಿಗೆ, ಮಹಿಳೆಯರಿಗೆ, ನಿರುದ್ಯೋಗಿಗಳಿಗೆ ನಿರಾಸೆ ಉಂಟು ಮಾಡಿದೆ. ರಾಜ್ಯದ ಅಭಿವೃದ್ಧಿ ಪರವಾದ ಬಜೆಟ್ ಅಲ್ಲ. ಉದ್ಯಮಿಗಳ ಪರ ಮಂಡಿಸಿದ ಬಜೆಟ್ ಆಗಿದೆ. ರಾಜ್ಯದ ನಿರೀಕ್ಷೆಗಳು ಹುಸಿಯಾಗಿದೆ. ಕರ್ನಾಟಕದಿಂದ ಹೆಚ್ಚು ಸಂಸದರು ಆಯ್ಕೆಯಾದರೂ, ರಾಜ್ಯದಿಂದ ಅಧಿಕ ತೆರಿಗೆ ನೀಡಿದರೂ ರಾಜ್ಯದ ಅಭಿವೃದ್ಧಿಗೆ ವಿರುದ್ಧವಾಗಿದೆ.

–ಎ.ಆರ್.ಕೃಷ್ಣಮೂರ್ತಿ, ಶಾಸಕರು



ಜಿಲ್ಲೆಯ ಅರಿಶಿನ ಬೆಳೆಗೆ ಸಂಸ್ಕರಣಾ ಘಟಕ ಹಾಗೂ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವಲ್ಲಿ ಕೇಂದ್ರ ವಿಫಲವಾಗಿದೆ. ಅರಿಶಿನ ಮಂಡಳಿ ವ್ಯಾಪ್ತಿಗೆ ಜಿಲ್ಲೆಯನ್ನು ಸೇರಿಸಬೇಕೆಂಬ ಬೇಡಿಕೆ ಕಡೆಗಣಿಸಲಾಗಿದೆ. ಚಾಮರಾಜನಗರ– ಹೆಜ್ಜಾಲ ರೈಲ್ವೆ ಯೋಜನೆಗೆ ಶೇ.100ರಷ್ಟು ಅನುದಾನ ಮಂಜೂರು ಮಾಡದಿರುವುದು ಹಾಗೂ ಚಾಮರಾಜನಗರ–ಗುಂಡ್ಲುಪೇಟೆ, ಮೈಸೂರು–ಹೆಚ್.ಡಿ.ಕೋಟೆ ಹೆದ್ದಾರಿ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ತಿರಸ್ಕರಿಸಿರುವುದು ಖಂಡನೀಯ.

–ಸುನೀಲ್ ಬೋಸ್, ಸಂಸದರು.



ಜಾಗತಿಕ ಏರಿಳಿತಗಳ ನಡುವೆ ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಸ್ಥಿರತೆ ಕಾಪಾಡಿಕೊಳ್ಳುವಲ್ಲಿ ಕೇಂದ್ರ ಬಜೆಟ್ ವಿಫಲವಾಗಿದೆ ಕೃಷಿಗೆ ಯಾವುದೇ ಹೆಚ್ಚಿನ ಮಹತ್ವ ನೀಡಿಲ್ಲ. ಮುಂಬರುವ ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಆ ರಾಜ್ಯಗಳಿಗೆ ಹೆಚ್ಚು ಅನುದಾನ ನೀಡಿದ್ದಾರೆ. ರಾಜ್ಯಕ್ಕೆ ಯಾವುದೇ ಹೊಸ ಯೋಜನೆ ಘೋಷಿಸದೆ ಮಲತಾಯಿ ಧೋರಣೆ ಅನುಸರಿಸಲಾಗಿದೆ.

–ರವಿಕುಮಾರ್, ಎಪಿಎಂಸಿ ಮಾಜಿ ಅಧ್ಯಕ್ಷರು.




ಕೇಂದ್ರದಿಂದ ಐತಿಹಾಸಿಕ ಬಜೆಟ್ ಮಂಡಿಸಲಾಗಿದೆ. ಬಡವರು, ರೈತರು, ಯುವಕರು ಮತ್ತು ಮಹಿಳೆಯರನ್ನು ಬಲಪಡಿಸುವ ಐತಿಹಾಸಿಕ ಬಜೆಟ್ ಆಗಿದೆ. ಮೋದಿ ನೇತೃತ್ವದ ಕೇಂದ್ರ ಸರ್ಕಾರ ಕೃಷಿ, ರಕ್ಷಣೆ, ರೈಲ್ವೆ, ಆರ್ಥಿಕತೆ ಸೇರಿದಂತೆ ಎಲ್ಲಾ ವಲಯಗಳಲ್ಲಿ ದೇಶವನ್ನು ಅಭಿವೃದ್ಧಿಗೊಳಿಸುವ ಸಂಕಲ್ಪದೊಂದಿಗೆ ಯೋಜನೆ ರೂಪಿಸಿದೆ.

–ಸಿ.ಎಸ್.ನಿರಂಜನ್‌ಕುಮಾರ್, ಅಧ್ಯಕ್ಷರು, ಬಿಜೆಪಿ ಜಿಲ್ಲಾ ಘಟಕ.




ಆರೋಗ್ಯ, ಶಿಕ್ಷಣ, ಮೂಲ ಸೌಕರ್ಯ, ಕೃಷಿ, ಉದ್ಯೋಗ ಸೃಷ್ಟಿ ಒಳಗೊಂಡಂತೆ ವಿಕಸಿತ ಭಾರತ ಹಾಗೂ ಆತ್ಮ ನಿರ್ಭರ ಭಾರತದ ಪ್ರತೀಕವಾಗಿ ತಳ ಹಾಗೂ ಮಧ್ಯಮ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ರೈಲು ಮಾರ್ಗ, ರಸ್ತೆ ನಿರ್ಮಾಣ ಹಾಗೂ ಕೈಗಾರಿಕೆಗಳನ್ನು ಒಳಗೊಂಡಂತೆ ಉತ್ತಮ ಬಜೆಟ್ ಮಂಡಿಸಲಾಗಿದೆ.

–ಜಿ.ನಿಜಗುಣರಾಜು, ಮಾಜಿ ಕಾಡಾಧ್ಯಕ್ಷರು.



ಕೇಂದ್ರದಿಂದ ಉತ್ತಮ ಬಜೆಟ್ ಮಂಡಿಸಲಾಗಿದೆ ಆರೋಗ್ಯ, ಶಿಕ್ಷಣ ಹಾಗೂ ಕೃಷಿ ಕ್ಷೇತ್ರಕ್ಕೆ ಹೆಚ್ಚಿನ ಆದ್ಯತೆ ನೀಡಲಾಗಿದೆ. 2047ಕ್ಕೆ ಭಾರತ ಅಭಿವೃದ್ಧಿಶೀಲ ರಾಷ್ಟ್ರವಾಗಲು ಪೂರಕವಾದ ಯೋಜನೆಯನ್ನು ರೂಪಿಸಿ ಬಜೆಟ್ ಅನ್ನು ಕೇಂದ್ರ ಸರ್ಕಾರ ಮಂಡಿಸಿದೆ.

–ಡಾ.ಬಾಬು, ಕಿವಿ & ಮೂಗು ತಜ್ಞರು.



ಕೇಂದ್ರ ಸರ್ಕಾರ ರೈತರ ಮೂಗಿಗೆ ತುಪ್ಪ ಸವರುವ ಬಜೆಟ್ ಮಂಡಿಸಿದೆ. ರೈತರ ಅಭಿವೃದ್ಧಿಗೆ ಪೂರಕವಲ್ಲದ ಬಜೆಟ್ ಆಗಿದೆ. ರೈತ ಬೆಳೆದ ಬೆಳೆಗಳಿಗೆ ಎಂಎಸ್‌ಪಿ ಖಾತ್ರಿ ಕಾಯ್ದೆ ಜಾರಿ ಬಗ್ಗೆ ಕ್ರಮ ಕೈಗೊಂಡಿಲ್ಲ. ಎಂ.ಎಸ್.ಸ್ವಾಮಿ ನಾಥನ್ ವರದಿ ಜಾರಿ ಬಗ್ಗೆ ಕ್ರಮ ಕೈಗೊಂಡಿಲ್ಲ. ರೈತರ ಸಾಲ ಮನ್ನಾ ಪ್ರಸ್ತಾಪವಿಲ್ಲ. ಕೃಷಿ ಸಾಲದ ನೀತಿ, ರೈತನ ಹೊಲದಲ್ಲಿನ ಕಬ್ಬಿನ ದರದ ಬಗ್ಗೆ ಪ್ರಸ್ತಾಪವಿಲ್ಲ. ರೈತರ ಬೆಳೆ ವಿಮೆ ನೀತಿಯು ವೈಯಕ್ತಿಕ ವಿಮೆ ರೀತಿ ಜಾರಿಗೆ ತರಬೇಕಾಗಿತ್ತು. ರೈತರ ಕೃಷಿ ಉತ್ಪನ್ನಗಳನ್ನು ವರ್ಷ ಪೂರ್ತಿ ಖರೀದಿಸಲು ಖರೀದಿ ಕೇಂದ್ರಗಳ ಆರಂಭಕ್ಕೆ ಕ್ರಮ ಕೈಗೊಂಡಿಲ್ಲ.

– ಭಾಗ್ಯರಾಜ್, ರಾಜ್ಯಾಧ್ಯಕ್ಷರು, ಕರ್ನಾಟಕ ರಾಜ್ಯ ಕಬ್ಬು ಬೆಳೆಗಾರರ ಸಂಘ.



ಕೇಂದ್ರ ಬಜೆಟ್ ಉಳ್ಳವರು, ಶ್ರೀಮಂತ ಉದ್ಯಮಿಗಳ ಪರವಾಗಿದೆಯೇ ವಿನಃ ಬಡತನ ಮತ್ತು ನಿರುದ್ಯೋಗ ಸಮಸ್ಯೆ ತೊಡೆದು ಹಾಕುವ ಬಜೆಟ್ ಆಗಿಲ್ಲದಿರುವುದು ವಿಷಾದನೀಯ. ವಿದೇಶಿ ಬಂಡವಾಳ ಹೂಡಿಕೆಗೆ ಸಂಪೂರ್ಣ ತೆರಿಗೆ ವಿನಾಯಿತಿ ನೀಡುವ ಮೂಲಕ ದೇಶೀಯ ಬಂಡವಾಳವು ವಿದೇಶಿ ಕಂಪನಿಗಳ ಮೂಲಕ ಹರಿದು ಬರುವ ವಾಮ ಮಾರ್ಗಕ್ಕೆ ಪರವಾನಿಗೆ ನೀಡುತ್ತಾ, ಉಳ್ಳವರು ಮತ್ತು ಶ್ರೀಮಂತ ಬಂಡವಾಳ ಶಾಹಿಗೆ ಮನ್ನಣೆ ನೀಡಲಾಗಿದೆ. **–ಎನ್. ನಾಗಯ್ಯ, ರಾಜ್ಯ ಕಾರ್ಯದರ್ಶಿ, ಬಿಎಸ್‌ಪಿ.**



ಕೇಂದ್ರ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಸಾಮಾನ್ಯ ಜನರು ಮತ್ತು ರೈತರಿಗೆ ಯಾವುದೇ ರಿಯಾಯಿತಿ ನೀಡಿಲ್ಲ. ರಾಜ್ಯಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಇದೊಂದು ನಿರಾಶಾದಾಯಕ ಬಜೆಟ್.

– ಎಸ್.ಶಿವನಾಗಪ್ಪ, ಮಾಜಿ ಕೆಪಿಸಿಸಿ ಕಾರ್ಯದರ್ಶಿ.

ವರನಿಗೆ ಚಾಕು ಇರಿತ ಪ್ರಕರಣ

ಪ್ರಿಯಕರನಿಗೆ ಸುಪಾರಿ ಕೊಟ್ಟಿದ್ದ ವಧು ಸೇರಿ ಮೂವರ ಬಂಧನ

ಕೊಳ್ಳೇಗಾಲ: ಮದುವೆಯಾಗಲು ಇಷ್ಟವಿಲ್ಲದಿದ್ದರೂ ಕುಟುಂಬದವರ ಒತ್ತಾಯಕ್ಕೆ ಮಣಿದು ಮದುವೆಗೆ ಒಪ್ಪಿ, ನಂತರ ಮದುವೆ ನಿಲ್ಲಿಸಲು ಪ್ರಿಯಕರನಿಗೆ ಸುಪಾರಿಕೊಟ್ಟು ಛತ್ರಕ್ಕೆ ಬರುತ್ತಿದ್ದ ತನ್ನ ಭಾವಿ ಪತಿಗೆ ಚಾಕುವಿನಿಂದ ಇರಿದ ಪ್ರಕರಣಕ್ಕೆ ಸಂಬಂಧಿಸಿದಂತೆ ವಧು, ಆಕೆಯ ಪ್ರಿಯಕರ ಸೇರಿದಂತೆ ಮೂವರನ್ನು ಕೊಳ್ಳೇಗಾಲ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕೊಳ್ಳೇಗಾಲ ನಗರಸಭಾ ವ್ಯಾಪ್ತಿಯ ಹೊಸ ಅಣಗಳ್ಳಿ ಬಡಾವಣೆ ನಿವಾಸಿ ನಯನ, ಆಕೆಯ ಪ್ರಿಯಕರ ಬೆಂಗಳೂರಿನ ನಿವಾಸಿ ದರ್ಶನ್ ಅವರನ್ನು ಪೊಲೀಸರು ಬಂಧಿಸಿ, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದ್ದು, ಮತ್ತೋರ್ವ ಆರೋಪಿ ಬೆಂಗಳೂರಿನ ಅಪ್ರಾಪ್ತ ಬಾಲಕನನ್ನು ಚಾಮರಾಜನಗರ ಬಾಲ ಮಂದಿರದಲ್ಲಿ ಇರಿಸಲಾಗಿದೆ. ಅಲ್ಲದೇ ಕೃತ್ಯಕ್ಕೆ ಬಳಸಿದ್ದ ಕಾರು (ಕೆಎ.03, ಎಂ.ಜೆಡ್.5192) ವಶಕ್ಕೆ ಪಡೆದು ಉಳಿದ ಇಬ್ಬರು ಆರೋಪಿಗಳ ಪತ್ತೆಗಾಗಿ ಪೊಲೀಸರು ಮುಂದಾಗಿದ್ದಾರೆ.

ವಿವರ: ತಾಲೂಕಿನ ಕುಣಗಳ್ಳಿ ಗ್ರಾಮದ ರವೀಶ್ ಹಾಗೂ ಹೊಸಅಣಗಳ್ಳಿ ಬಡಾವಣೆ ನಿವಾಸಿ ನಯನ ಅವರಿಗೆ ಕೊಳ್ಳೇಗಾಲದ ವೆಂಕಟೇಶ್ವರ ಕಲ್ಯಾಣ ಮಂಟಪದಲ್ಲಿ ಜ. 29 ಮತ್ತು 30ರಂದು ಮದುವೆ ನಿಶ್ಚಯವಾಗಿತ್ತು.

ಜ.29ರಂದು ರವೀಶ್ ಕಲ್ಯಾಣ ಮಂಟಪಕ್ಕೆ ಬರುತ್ತಿದ್ದಾಗ ಕೊಳ್ಳೇಗಾಲದ ಎಂಜಿಎಸ್‌ವಿ ಕಾಲೇಜು ರಸ್ತೆಯ ಬಳಿ ಕಾರನ್ನು ಹಿಂಬಾಲಿಸಿ ಬಂದ ನಾಲ್ಕೈದು ದುಷ್ಕರ್ಮಿಗಳು ಕಾರನ್ನು ಅಡ್ಡಗಟ್ಟಿ ನೀನು ಮದ್ವೆ ಮನೆಗಲ್ಲ ಸ್ಮಶಾನಕ್ಕೆ ತೆರಳಬೇಕೆಂದು ಏಕಾಏಕಿ ಎಲ್.ರವೀಶ್ ಮೇಲೆ ಚಾಕುವಿನಿಂದ ಇರಿದು ಪರಾರಿಯಾಗಿದ್ದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಕೊಲೆ ಯತ್ನ ಪ್ರಕರಣ ದಾಖಲಾಗಿತ್ತು.

ಯಶಸ್ವಿ ಕಾರ್ಯಾಚರಣೆ: ಎಸ್ಪಿ ಎಂ.ಮುತ್ತುರಾಜು, ಎಎಸ್ಪಿ ಶಶಿಧರ್ ಮಾರ್ಗದರ್ಶನದಲ್ಲಿ ಡಿವೈಎಸ್‌ಪಿ ಧರ್ಮೇಂದ್ರ, ಸಿಪಿಐ ಶಿವಮಾದಯ್ಯ ನೇತೃತ್ವದಲ್ಲಿ ಪಟ್ಟಣ ಪೊಲೀಸ್ ಠಾಣೆಯ ಎಸ್‌ಐ ವರ್ಷ ಮತ್ತು ಸಿಬ್ಬಂದಿ ಆರೋಪಿಗಳ ಪತ್ತೆ ಕಾರ್ಯದಲ್ಲಿ ತೊಡಗಿದ್ದಾಗ ಕೃತ್ಯಕ್ಕೆ ಬಳಸಿದ್ದ ಕಾರು ಮಳವಳ್ಳಿ ತಾಲೂಕಿನ ಹಲಗೂರಿನಲ್ಲಿ ಅಪಘಾತವಾಗಿತ್ತು. ಈ ವೇಳೆ ಕಾರು ನಿಲ್ಲಿಸದೇ ಆರೋಪಿಗಳು ಬೆಂಗಳೂರಿಗೆ ತೆರಳಿದ್ದರು. ಇದನ್ನು ದೃಢಪಡಿಸಿಕೊಂಡು ಮೊಬೈಲ್ ಲೋಕೇಶನ್ ಪತ್ತೆ ಮಾಡಿ ಬೆಂಗಳೂರಿನಲ್ಲಿ ಆರೋಪಿ ದರ್ಶನ್ ಮತ್ತು ಅಪ್ರಾಪ್ತ ಬಾಲಕನನ್ನು ಕೊಳ್ಳೇಗಾಲ ಪಟ್ಟಣ ಪೊಲೀಸ್ ಠಾಣೆಗೆ ಕರೆತಂದು ವಿಚಾರಣೆಗೆ ಒಳಪಡಿಸಿದ್ದರು.



ದರ್ಶನ್



ನಯನ

ವಧುವಿನಿಂದ ಸುಪಾರಿ: ಈ ವೇಳೆ ಪ್ರಿಯಕರ ದರ್ಶನ್, ನಯನ ಬೆಂಗಳೂರಿನ ಖಾಸಗಿ ನರ್ಸಿಂಗ್ ಹೋಂನಲ್ಲಿ ಕೆಲಸ ಮಾಡುತ್ತಿದ್ದಳು. ಅಲ್ಲಿ ಪರಿಚಯವಾದ ನಯನ ಹಾಗೂ ನಾನು ಕಳೆದ ಎರಡು ವರ್ಷಗಳಿಂದಲೂ ಪ್ರೀತಿಸುತ್ತಿದ್ದೆವು. ಮದುವೆಯಾಗಬೇಕೆಂದು ತೀರ್ಮಾನಿಸಿದ್ದೆವು. ಈ ಮಧ್ಯದಲ್ಲಿ ರವೀಶ್ ಎಂಬಾತನ ಜೊತೆ ನಯನಳ ಮದುವೆ ನಿಶ್ಚಯವಾಯಿತು.

ಮದುವೆ ಹತ್ತಿರ ಬರುತ್ತಿದ್ದಂತೆ ಮದುವೆ ನಿಲ್ಲಿಸುವಂತೆ ನಯನ ನನ್ನ ಬಳಿ ಕೇಳಿಕೊಂಡಾಗ ನೀನೇ ಮದುವೆ ಆಗುವುದಿಲ್ಲ ಎಂದು ನಿಮ್ಮ ತಾಯಿಗೆ ಮತ್ತು ಪೋಷಕರಿಗೆ ಹೇಳು ಎಂದಾಗ ಇಲ್ಲ. ನಾನು ಮದುವೆ ಬೇಡ ಎಂದರೆ ನಮ್ಮ ಕುಟುಂಬಕ್ಕೆ ಅವಮಾನವಾಗುತ್ತದೆ. ನೀನೆ ನನ್ನ ಮದುವೆಯಾಗುವ ರವೀಶ್‌ನನ್ನು ಹೆದರಿಸು ಅವನು ಮದುವೆ ಬೇಡ ಎಂದು ಹೇಳಿದಾಗ ನಾವಿಬ್ಬರು ಮದುವೆಯಾಗೋಣ ಎಂದು ರವೀಶನ ಮೊಬೈಲ್ ನಂಬರ್ ನನಗೆ ನೀಡಿದಳು ಎಂದು ದರ್ಶನ್ ಪೊಲೀಸ್ ತನಿಖೆಯಲ್ಲಿ ತಿಳಿಸಿದ್ದಾನೆ.

ಜ.29ರಂದು ಕಾರಿನಲ್ಲಿ ಬರುತ್ತಿದ್ದ ರವೀಶನಿಗೆ ಚಾಕುವಿನಿಂದ ಇರಿದು ಹೆದರಿಸಿ ನಾವು ಬೆಂಗಳೂರಿಗೆ ಹೊರಟು ಹೋದೆವು ಎಂದು ತಿಳಿಸಿದನು. ನಂತರ ನಯನ ಆಕೆಯ ಸಂಬಂಧಿಕರ ಯುವತಿಯ ಮೊಬೈಲ್‌ನಲ್ಲಿ ಪೊಲೀಸರು ಕಲ್ಯಾಣ ಮಂಟಪಕ್ಕೆ ಬಂದಿದ್ದಾರೆ. ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಇಲ್ಲಿಗೆ ಬಂದು ನನ್ನನ್ನು ಕರೆದುಕೊಂಡು ಹೋಗು ಬಾ ಎಂದು ಮೆಸೇಜ್ ಮಾಡಿದ್ದಳು ಎಂದು ತಿಳಿಸಿದ್ದಾನೆ.

ನಾಗಮಂಗಲ ಬಳಿ ಟಿಪ್ಪರ್‌ಗೆ ಕಾರು ಡಿಕ್ಕಿ: ಸ್ಥಳದಲ್ಲೇ ಅಕ್ಕ, ತಮ್ಮನ ಸಾವು

ನಾಗಮಂಗಲ, ಫೆ.1– ಚಲಿಸುತ್ತಿದ್ದ ಟಿಪ್ಪರ್‌ಗೆ ಹಿಂದಿನಿಂದ ಕಾರು ಡಿಕ್ಕಿ ಹೊಡೆದ ಪರಿಣಾಮ ಅಕ್ಕ, ತಮ್ಮ ಸ್ಥಳದಲ್ಲೇ ಸಾವನ್ನಪ್ಪಿ, ಮೂವರು ಗಾಯಗೊಂಡಿರುವ ಘಟನೆ ಚಾಮರಾಜನಗರ–ಜೇವರ್ಗಿ ರಾಷ್ಟ್ರೀಯ ಹೆದ್ದಾರಿ ತಾಲೂಕಿನ ಬೇಗಮಂಗಲ ಅಂಚೆಭೂವನಹಳ್ಳಿ ನಡುವೆ ಭಾನುವಾರ ಬೆಳಗ್ಗೆ ಸಂಭವಿಸಿದೆ.

ಬೆಂಗಳೂರಿನ ಕತ್ತರಗುಪ್ಪೆ ನಿವಾಸಿ ರವೀಂದ್ರರಾಜ್ ಕೃಷ್ಣ ಅವರ ಮಕ್ಕಳಾದ ಮೊಬೀನಾ(20) ಮತ್ತು ಶ್ಯಾಂ(18) ಘಟನೆಯಲ್ಲಿ ಮೃತ ದುರ್ದೈವಿಗಳು. ಹಿತಶ್ರೀ, ಕಲಾಶ್ರೀ ಹಾಗೂ ಕಾರು ಚಾಲಕ ಚೇತನ್ ಗಾಯಗೊಂಡವರು.

ಬೆಂಗಳೂರಿನಿಂದ ಸ್ವಿಫ್ಟ್ ಕಾರಿನಲ್ಲಿ ಒಂದೇ ಕುಟುಂಬದ ಐವರು ತಾಲೂಕಿನ ಕೋಟೆಬೆಟ್ಟದಲ್ಲಿ ನಡೆಯುತ್ತಿದ್ದ ಜಾತ್ರಾ ಮಹೋತ್ಸವಕ್ಕೆ ತೆರಳುತ್ತಿದ್ದರು. ಈ ವೇಳೆ ಚಾಲಕನ ನಿಯಂತ್ರಣ ತಪ್ಪಿದ ಕಾರು ರಾಷ್ಟ್ರೀಯ ಹೆದ್ದಾರಿಯಲ್ಲಿ ನಾಗಮಂಗಲ ಕಡೆಗೆ ಚಲಿಸುತ್ತಿದ್ದ ಟಿಪ್ಪರ್‌ಗೆ ಹಿಂದಿನಿಂದ ಡಿಕ್ಕಿ ಹೊಡೆದು ಈ ಅವಘಡ ಸಂಭವಿಸಿದೆ.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಬೆಳ್ಳೂರು ಪೊಲೀಸ್ ಠಾಣೆ ಪಿಎಸ್‌ಐ ವೈ.ಎನ್.ರವಿಕುಮಾರ್ ಮತ್ತು ಸಿಬ್ಬಂದಿ ಸ್ಥಳೀಯರ ನೆರವಿನೊಂದಿಗೆ ಗಾಯಾಳುಗಳನ್ನು ಆದಿಚುಂಚನಗಿರಿ ಆಸ್ಪತ್ರೆಗೆ ದಾಖಲಿಸಿ, ಶವಗಳನ್ನು ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿದರು. ಈ ಸಂಬಂಧ ಬೆಳ್ಳೂರು ಪೊಲೀಸರು ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.

ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ

ನಿಮಿಷಾಂಬ ಸನ್ನಿಧಿಯಲ್ಲಿ ಭಕ್ತ ಸಾಗರ

ಶ್ರೀರಂಗಪಟ್ಟಣ, ಫೆ.1– ಮಾಘ ಶುದ್ಧ ಹುಣ್ಣಿಮೆ ಮಹೋತ್ಸವ ಅಂಗವಾಗಿ ತಾಲೂಕಿನ ಗಂಜಾಂನ ಶ್ರೀನಿಮಿಷಾಂಬ ದೇವಾಲಯಕ್ಕೆ ಸಾವಿರಾರು ಭಕ್ತರು ಆಗಮಿಸಿ ದೇವಿಯ ದರ್ಶನ ಪಡೆದು ಪುನೀತರಾದರು.

ಮಾಘ ಶುದ್ಧ ಹುಣ್ಣಿಮೆ ಹಿನ್ನೆಲೆಯಲ್ಲಿ ಶನಿವಾರ ಮಧ್ಯರಾತ್ರಿಯಿಂದಲೇ ರಾಜ್ಯದ ವಿವಿಧೆಡೆಗಳಿಂದ ಆಗಮಿಸಿದ ಸುಮಾರು 70 ಸಾವಿರಕ್ಕೂ ಅಧಿಕ ಭಕ್ತರು ಕಾವೇರಿ ನದಿಯಲ್ಲಿ ಪವಿತ್ರ ಮಾಘ ಸ್ನಾನ ಮಾಡಿ ಶ್ರೀನಿಮಿಷಾಂಬ ದೇವಿ ಕೃಪೆಗೆ ಪಾತ್ರರಾದರು.

ಮೊದಲಿಗೆ ನದಿ ತೀರದಲ್ಲಿ ದೀಪಾರತಿ ಬೆಳಗಿ ಪ್ರಾರ್ಥನೆ ಸಲ್ಲಿಸಿದ ಭಕ್ತರು, ಬಳಿಕ ದೇವಸ್ಥಾನದ ಎದುರು ಸಾಲುಗಟ್ಟಿ ನಿಂತು ದೇವರ ದರ್ಶನ ಪಡೆದರು. ಇದಕ್ಕೂ ಮುನ್ನಾ ದೇವಾಲಯದ ಪ್ರಧಾನ ಅರ್ಚಕ ಸೂರ್ಯನಾರಾಯಣ ಭಟ್ ನೇತೃತ್ವದಲ್ಲಿ ದೇವಿಗೆ ಪಂಚಾಮೃತ ಅಭಿಷೇಕ, ಮಹಾಭಿಷೇಕ, ಗಣಹೋಮ, ನಕ್ಷತ್ರ ಹೋಮ, ದುರ್ಗಾ ಹೋಮ ನೆರವೇರಿಸಲಾಯಿತು.ಅಲ್ಲದೇ ಸತ್ಯನಾರಾಯಣ ಪೂಜೆ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳು ಶಾಸ್ತ್ರೋಕ್ತವಾಗಿ ನಡೆದವು.

ಇದೇ ವೇಳೆ ದೇವಾಲಯದ ಆವರಣದಲ್ಲಿ ಭಕ್ತಿಗೀತೆ, ಭಾವಗೀತೆ ಹಾಗೂ ಜನಪದ ಗೀತೆಗಳ 'ಸಂಗೀತ ರಸಸಂಜೆ' ಕಾರ್ಯಕ್ರಮ ಆಯೋಜಿಸಲಾಗಿತ್ತು. ಸಾವಿರಾರು ಭಕ್ತರಿಗೆ ಬೆಂಗಳೂರಿನ ಪೂರ್ಣೇಶ್ವರಿ ಟ್ರಸ್ಟ್ ವತಿಯಿಂದ ಶನಿವಾರ ಮಧ್ಯ ರಾತ್ರಿಯಿಂದ ಭಾನುವಾರ ಸಂಜೆವರೆಗೆ ನಿರಂತರವಾಗಿ ಉಪಾಹಾರ ಹಾಗೂ ಅನ್ನ ಪ್ರಸಾದದೊಂದಿಗೆ ಸಿಹಿ ವಿನಿಯೋಗ ಮಾಡಲಾಯಿತು.



ಶಾಸಕ ರಮೇಶ್‌ಬಾಬು, ಡಿಸಿ ಡಾ. ಕುಮಾರ್, ಎಸ್ಪಿ ಡಾ.ಶೋಭಾರಾಣಿ, ಎಡಿಸಿ ಬಿ.ಸಿ.ಶಿವಾನಂದ ಮೂರ್ತಿ, ತಹಸೀಲ್ದಾರ್ ಚೇತನ ಯಾದವ್, ದೇವಾಲಯದ ಇಓ ಮಹೇಶ್ ಹಾಗೂ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಎಸ್.ಎನ್. ದಯಾನಂದ್ ಪೂಜಾ ಕಾರ್ಯಗಳಲ್ಲಿ ಭಾಗವಹಿಸಿದ್ದರು.

ಅಗತ್ಯ ಮುನ್ನೆಚ್ಚರಿಕೆ ಕ್ರಮ: ಮಾಘ ಶುದ್ಧ ಹುಣ್ಣಿಮೆ ಹಿನ್ನೆಲೆಯಲ್ಲಿ ದೇವಾಲಯಕ್ಕೆ ಸಾವಿರಾರು ಭಕ್ತರು ಆಗಮಿಸುವ ನಿರೀಕ್ಷೆ ಇದ್ದಿದ್ದರಿಂದ ತಾಲೂಕು ಆಡಳಿತ ಹಾಗೂ ದೇವಾಲಯದ ಆಡಳಿತ ಮಂಡಳಿಯಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಳ್ಳಲಾಗಿತ್ತು. ಕಾವೇರಿ ನದಿ ತೀರದಲ್ಲಿ ಮಧ್ಯರಾತ್ರಿ ಯಿಂದಲೇ ಭಕ್ತರು ಸ್ನಾನ ಮಾಡಲು ಹಾಗೂ ಬಟ್ಟೆ ಬದಲಿಸಿಕೊಳ್ಳಲು ಬ್ಯಾರಿಕೇಡ್‌ಗಳನ್ನು ನಿರ್ಮಿಸಲಾಗಿತ್ತು. ಅಲ್ಲದೇ ಭಕ್ತರ ಸುರಕ್ಷತೆಗಾಗಿ ಮುಂಜಾಗ್ರತಾ ಕ್ರಮವಾಗಿ ಅಗ್ನಿ ಶಾಮಕ ದಳದ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ವಾಹನಗಳ ಸುಗಮ ಸಂಚಾರಕ್ಕಾಗಿ 8 ಕಡೆ ಪಾರ್ಕಿಂಗ್‌ಗೆ ವ್ಯವಸ್ಥೆ ಮಾಡಲಾಗಿತ್ತು. ಅಲ್ಲದೇ ಭಕ್ತರ ಭದ್ರತೆಯ ದೃಷ್ಟಿಯಿಂದ 50ಕ್ಕೂ ಹೆಚ್ಚು ಸಿಸಿ ಕ್ಯಾಮರಾಗಳನ್ನು ಅಳವಡಿಸಲಾಗಿತ್ತು. ಶ್ರೀರಂಗಪಟ್ಟಣ ನಗರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್ ನೇತೃತ್ವದಲ್ಲಿ ಹೆಚ್ಚಿನ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಬಿಗಿ ಬಂದೋಬಸ್ತ್ ಮಾಡಲಾಗಿತ್ತು.

ಭಕ್ತರಿಗೆ ಪ್ರಸಾದದ ಜೊತೆಗೆ ಕುಡಿಯುವ ನೀರು, ಸ್ವಚ್ಛತೆಗೆ ಆದ್ಯತೆ ನೀಡಿ ಹೆಚ್ಚಿನ ಸ್ಥಳಗಳಲ್ಲಿ ಪೌರ ಕಾರ್ಮಿಕರ ನೇಮಿಸಿ ಸ್ವಚ್ಛತೆ ಕೈಗೊಳ್ಳಲಾಗಿತ್ತು.

ಕೊಪ್ಪ ಹೋಬಳಿಗೆ ಜಲಜೀವನ್ ಮಿಷನ್ ಅಡಿ ನೀರು

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ಕಾರ್ಯಕ್ರಮವನ್ನು ಸಚಿವ ಎನ್.ಚಲುವರಾಯಸ್ವಾಮಿ ಉದ್ಘಾಟಿಸಿದರು.

ಮದ್ದೂರು, ಫೆ.1– ಕೊಪ್ಪ ಹೋಬಳಿಯ ಪ್ರತಿ ಮನೆಗಳಿಗೂ ವರ್ಷದೊಳಗೆ ಜಲ ಜೀವನ್ ಮಿಷನ್ ಯೋಜನೆಯಡಿ ಕಾವೇರಿ ನೀರನ್ನು ಪೂರೈಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕಿನ ಅರಗಿನಮೆಳೆ ಗ್ರಾಮದಲ್ಲಿ ಅರಗಿನಮೆಳೆ ಉತ್ಸವ, ಬೃಹತ್ ಉಚಿತ ಆರೋಗ್ಯ ತಪಾಸಣಾ ಶಿಬಿರ, ರಕ್ತದಾನ ಶಿಬಿರ, ಡೇರಿ ನೂತನ ಕಟ್ಟಡದ ಗುದ್ದಲಿ ಪೂಜೆ ಶಿಲಾನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕೊಪ್ಪ ಹೋಬಳಿಯ 8 ಗ್ರಾಪಂ ವ್ಯಾಪ್ತಿಯ ಗ್ರಾಮಗಳಲ್ಲಿ ಇನ್ನು ಮುಂದೆ ಕುಡಿಯುವ ನೀರಿನ ಸಮಸ್ಯೆ ತಲೆದೋರುವುದಿಲ್ಲ. 33 ಕೋಟಿ ರೂ. ವೆಚ್ಚದಲ್ಲಿ ಕಾವೇರಿ ನೀರನ್ನು ಪ್ರತಿ ಮನೆಗಳಿಗೂ ಪೂರೈಸುವ ಯೋಜನೆಗೆ ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದರು.

ಮುಂದೆ ಕುಡಿಯುವ ನೀರಿಗಾಗಿ ಯಾವುದೇ ಬೋರ್‌ವೆಲ್ ಕೊರೆಯುವುದಿಲ್ಲ. ಕೊಪ್ಪ ಹೋಬಳಿಯ ಕೊನೆ ಭಾಗಕ್ಕೆ ಕೆಆರ್‌ಎಸ್‌ನಿಂದ ನೀರು ಸರಾಗವಾಗಿ ಹರಿಯಲು 100 ಕೋಟಿ ರೂ. ವೆಚ್ಚದಲ್ಲಿ ನಾಲೆಗಳ ಆಧುನಿಕರಣ ಮಾಡಲಾಗುತ್ತಿದ್ದು, ಜೊತೆಗೆ ಈ ಭಾಗದ ಜನತೆ ಕಾವೇರಿ ನೀರನ್ನು ಕುಡಿಯಲು ಸಹ ಯೋಜನೆ ರೂಪಿಸಲಾಗಿದೆ ಎಂದರು.

ಕಳೆದ 2 ತಿಂಗಳ ಹಿಂದೆ 150 ಕೋಟಿ ರೂ. ವೆಚ್ಚದಲ್ಲಿ ಕೊಪ್ಪ ಹೋಬಳಿಯ ಅಭಿವೃದ್ಧಿಗೆ ಭೂಮಿ ಪೂಜೆ ನಡೆಸಿದ್ದೇನೆ. ನೀರಾವರಿ, ರಸ್ತೆ, ವಸತಿ ನಿಲಯಗಳು, ಕುಡಿಯುವ ನೀರು ಸೇರಿದಂತೆ ಹಲವು ಯೋಜನೆಗಳಿಗೆ ಚಾಲನೆ ನೀಡಿದ್ದು, ಮುಂದಿನ ಎರಡೂವರೆ ವರ್ಷಗಳಲ್ಲಿ ಮತ್ತಷ್ಟು ಅಭಿವೃದ್ಧಿಗೆ ಚಾಲನೆ ನೀಡಲಾಗುವುದು ಎಂದು ಭರವಸೆ ನೀಡಿದರು.

ಸರ್ಕಾರದಿಂದ ವಿಶೇಷ ಅನುದಾನಗಳ ಜೊತೆಗೆ 5 ಗ್ಯಾರಂಟಿ ಯೋಜನೆಗಳನ್ನು ಸಮರ್ಪಕವಾಗಿ ನೀಡಲಾಗುತ್ತಿದೆ. ಆದರೆ ಬೇರೆ ರಾಜ್ಯಗಳಲ್ಲಿ ಗ್ಯಾರಂಟಿ ಯೋಜನೆಗಳನ್ನು ನೀಡಲು ಸಹ ಸಾಧ್ಯವಾಗದೆ ವಿಫಲವಾಗಿದ್ದು, ನಮ್ಮ ಸರ್ಕಾರ ನುಡಿದಂತೆ ನಡೆಯುತ್ತಿದ್ದೇವೆ ಎಂದು ಹರ್ಷ ವ್ಯಕ್ತಪಡಿಸಿದರು.

ಕೊಪ್ಪ ಹೋಬಳಿಯನ್ನು ಮಾದರಿಯಾಗಿ ಮಾರ್ಪಡಿಸಲು ಕ್ರಮ ಕೈಗೊಳ್ಳಲಾಗಿದ್ದು, ನಾಡ ಕಚೇರಿ, ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮಾಡಲು ಪ್ರಸ್ತಾವನೆ ಸಲ್ಲಿಸಲಾಗಿದೆ ಎಂದರು.

ಗ್ರಾಪಂ ಅಧ್ಯಕ್ಷ ವಿಜಯ್ ಎಸ್.ಗೌಡ ಮಾತನಾಡಿದರು. ನೂರಾರು ಮಂದಿ ಆರೋಗ್ಯ ಶಿಬಿರದ ಪ್ರಯೋಜನ ಪಡೆದುಕೊಂಡರು. ಸಂಜೆ ಕಾಮಿಡಿ ಕಿಲಾಡಿಗಳು ತಂಡದಿಂದ ಹಾಸ್ಯೋತ್ಸವ, ಕನ್ನಡ ಗೀತೆಗಳ ಗಾಯನ ಹಾಗೂ ನೃತ್ಯ, ನೋಡುಗರ ಗಮನ ಸೆಳೆಯಿತು. ಮನ್‌ಮುಲ್ ನಿರ್ದೇಶಕ ಹರೀಶ್ ಬಾಬು, ಡಿಸಿಸಿ ಬ್ಯಾಂಕ್ ನಿರ್ದೇಶಕ ಕೆ.ಸಿ. ಜೋಗಿಗೌಡ, ಗ್ರಾಪಂ ಮಾಜಿ ಅಧ್ಯಕ್ಷ ಚಂದ್ರು, ಮಂಜು, ತಾಪಂ ಮಾಜಿ ಉಪಾಧ್ಯಕ್ಷ ರಘು ಮುಖಂಡರಾದ ಎ.ಸಿ. ಸೋಮಶೇಖರ್, ಬಿ.ಮಹೇಶ್, ಆನಂದ್, ಚಂದ್ರಶೇಖರ್, ಸ್ವಾಮಿ, ಶಂಕರ್, ಸುನೀಲ್, ಮಂಜು, ಶಿವರಾಂ, ಸಿದ್ದೇಗೌಡ, ಮಂಜೇಶ್, ಹೆಗ್ಗಡೆ, ರಾಜಶೇಖರ್ ಮತ್ತಿತರರಿದ್ದರು.

ಕೆ.ಕೆಂಚೇಗೌಡ ನಿಧನ



ಭಾರತೀನಗರ, ಫೆ.1– ಕಾವೇರಿ ನೀರಾವರಿ ನಿಗಮದ ನಿವೃತ್ತ ಕಾರ್ಯಪಾಲಕ ಅಭಿಯಂತರ ಹಾಗಲಹಳ್ಳಿ ಗ್ರಾಮದ ಕೆ.ಬಸವರಾಜೇಗೌಡರ ಹಿರಿಯ ಸಹೋದರ ಪಿಇಎಸ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಕೆ.ಕೆಂಚೇಗೌಡ(78) ಭಾನುವಾರ ನಿಧನರಾದರು. ಮೃತರು ಪತ್ನಿ ಎನ್.ಜಿ.ಸುವರ್ಣ, ಪುತ್ರ ಡಾ.ಶರತ್‌ಬಾಬು, ಸೊಸೆ ಡಾ.ತೇಜಸ್ವಿನಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದಲ್ಲಿ ಸೋಮವಾರ ಬೆಳಗ್ಗೆ 10 ಗಂಟೆಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕುಟುಂಬ ಸಂಸ್ಕೃತಿಯಿಂದಷ್ಟೇ ಭಾರತದ ಪರಂಪರೆ ಉಳಿವು

ಶಿಕ್ಷಣ ತಜ್ಞ ರಘು ಆರ್.ಕೌಟಿಲ್ಯ ಅಭಿಮತ



'ಅಜ್ಜ-ಅಜ್ಜಿಯರ ದಿನಾಚರಣೆ'ಯಲ್ಲಿ ಶಿಕ್ಷಣ ತಜ್ಞ ಆರ್.ರಘು ಕೌಟಿಲ್ಯ ಮಾತನಾಡಿದರು.

ಮೈಸೂರು, ಫೆ.1(ಎಂಕೆ)– ಆಧುನಿಕ ತಂತ್ರಜ್ಞಾನದಿಂದ ಪ್ರೀತಿ–ಬಾಂಧವ್ಯ ಗಳಿಸಲು ಸಾಧ್ಯವಿಲ್ಲ. ಕುಟುಂಬ ಸಂಸ್ಕೃತಿ ಉಳಿದರಷ್ಟೇ ಭಾರತದ ಪರಂಪರೆಯೂ ಉಳಿಯಲಿದೆ ಎಂದು ರಾಜ್ಯ ಬಿಜೆಪಿ ಓಬಿಸಿ ಮೋರ್ಚಾ ಅಧ್ಯಕ್ಷರೂ ಆದ ಶಿಕ್ಷಣ ತಜ್ಞ ರಘು ಆರ್. ಕೌಟಿಲ್ಯ ತಿಳಿಸಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ರೋಟರಿ ಪಶ್ಚಿಮ ಶಾಲೆಯಲ್ಲಿ ನಡೆದ 'ಅಜ್ಜ–ಅಜ್ಜಿಯರ ದಿನಾಚರಣೆ' ಉದ್ಘಾಟಿಸಿ ಮಾತನಾಡಿದ ಅವರು, ತಂತ್ರಜ್ಞಾನದ ಯಾಂತ್ರಿಕ ಬದುಕಿನಲ್ಲಿ ನಮ್ಮನ್ನು ನಾವು ಕಳೆದುಕೊಳ್ಳುತ್ತಿದ್ದೇವೆ. ತಂತ್ರಜ್ಞಾನಗಳು ಬದುಕಿನ ಮೌಲ್ಯ ಹಾಗೂ ಬಾಂಧವ್ಯದ ನಡುವೆ ಅಂತರ ಸೃಷ್ಟಿ ಮಾಡುತ್ತಿದ್ದು, ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ ಎಂದು ಬೇಸರ ವ್ಯಕ್ತಪಡಿಸಿದರು.

ಮಕ್ಕಳಿಗೆ ಅಜ್ಜ–ಅಜ್ಜಿ, ತಂದೆ–ತಾಯಿ ಪ್ರೀತಿ ಸಿಗಬೇಕು. ಆದ್ದರಿಂದ ಸಾಧ್ಯವಾದಷ್ಟು ಹಿರಿಯರನ್ನು ಚೆನ್ನಾಗಿ ನೋಡಿಕೊಳ್ಳಿ. ಹಿರಿಯರು ಮಾರ್ಗದರ್ಶಕರಾಗಿ ಕುಟುಂಬವನ್ನು ಕಾಪಾಡುತ್ತಾರೆ. ಅಲ್ಲದೆ ಮಕ್ಕಳ ಭವಿಷ್ಯಕ್ಕೂ ಬುನಾದಿಯಾಗಿ ನಿಲ್ಲುತ್ತಾರೆ. ಅವಿಭಕ್ತ ಕುಟುಂಬಗಳಿಂದ ಮಾತ್ರವೇ ದೇಶದ ಸಂಸ್ಕೃತಿ ಉಳಿಯಲು ಸಾಧ್ಯ ಎಂದರು.

ಕಳೆದ 40 ವರ್ಷಗಳಲ್ಲಾದ ತಾಂತ್ರಿಕ ಬದಲಾವಣೆಯಲ್ಲಿ ದೇಶದ ಸಾಂಸ್ಕೃತಿಕ ಪರಂಪರೆ ಕ್ಷೀಣಿಸುತ್ತಿದೆ. ಆದ್ದರಿಂದ ಪ್ರಾಥಮಿಕ ಶಾಲೆಗಳಲ್ಲಿಯೇ ಮಕ್ಕಳಿಗೆ ಪಠ್ಯದ ಜೊತೆಗೆ ಸಂಸ್ಕೃತಿ ಮತ್ತು ಪರಿಸರದ ಜಾಗೃತಿ ಮೂಡಿಸಬೇಕು. ಸಾಂಸ್ಕೃತಿಕ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಸಂಸ್ಕೃತಿಯ ಜಾಗೃತಿ ಮೂಡಿಸಬೇಕು ಎಂದು ಸಲಹೆ ನೀಡಿದರು.

ರೋಟರಿ ಪಶ್ಚಿಮ ಶಾಲೆ ಅಧ್ಯಕ್ಷ ಡಾ.ರಾಘವೇಂದ್ರ ಪ್ರಸಾದ್ ಮಾತನಾಡಿ, ರೋಟರಿ ಸಂಸ್ಥೆಯ ಶಾಲೆಗಳಲ್ಲಿ ಶಿಕ್ಷಕರು ಮತ್ತು ಪೋಷಕರ ಜೊತೆಗೆ ಮಕ್ಕಳಲ್ಲಿ ಕುಟುಂಬ, ತಂದೆ–ತಾಯಿ, ಅಜ್ಜ–ಅಜ್ಜಿಯ ಮಹತ್ವದ ಕುರಿತು ಅರಿವು ಮೂಡಿಸುವ ಪ್ರಯತ್ನ ಮಾಡಲಾಗುತ್ತಿದೆ. ಅಜ್ಜಿಯ ಕಥೆಗಳನ್ನು ತಿಳಿಸಿಕೊಡುವ ಮೂಲಕ ಸಾಂಸ್ಕೃತಿಕ ಪ್ರಜ್ಞೆ ಬೆಳೆಸಲಾಗುತ್ತಿದೆ ಎಂದು ತಿಳಿಸಿದರು. ಶಾಲಾ ಸಿಬ್ಬಂದಿ, ಪೋಷಕರು ಮತ್ತಿತರರಿದ್ದರು.

ಸಿ.ಜೆ.ರಾಯ್ ಇಷ್ಟದಂತೆಯೇ ಅಂತ್ಯಕ್ರಿಯೆ!

ಬೆಂಗಳೂರು, ಫೆ.1– ಐಟಿ ದಾಳಿಯ ಬೆನ್ನಲ್ಲೇ ಆತ್ಮಹತ್ಯೆ ಮಾಡಿಕೊಂಡ ಕಾನ್ಫಿಡೆಂಟ್ ಗ್ರೂಪ್ ಮಾಲೀಕ ಸಿ.ಜೆ. ರಾಯ್ ಅವರ ಸಾವು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಪ್ರಕರಣಕ್ಕೆ ಸಂಬಂಧಿಸಿದ ಸಾಕಷ್ಟು ಬೆಳವಣಿಗೆಗಳಾಗಿದ್ದು, ಭಾನುವಾರ ಅವರ ಅಂತ್ಯಸಂಸ್ಕಾರ ಕೂಡ ನೆರವೇರಿದೆ.



ಈ ಮಧ್ಯೆ ಸಿ.ಜೆ. ರಾಯ್ ಆತ್ಮಹತ್ಯೆಗೂ ಮುನ್ನ 9 ಪುಟಗಳ ಸುದೀರ್ಘ ಡೆತ್ ನೋಟ್ ಬರೆದಿಟ್ಟಿದ್ದಾರೆ ಎಂಬ ಮಾಹಿತಿಯನ್ನು ಅವರ ಕುಟುಂಬದವರೇ ನೀಡಿದ್ದಾರೆ. ಈ ಪತ್ರದಲ್ಲಿ ಅವರು ಐಟಿ ದಾಳಿ, ಮಾನಸಿಕ ಒತ್ತಡ ಅಥವಾ ಉದ್ಯಮದಲ್ಲಿನ ಬಿಕ್ಕಟ್ಟುಗಳ ಬಗ್ಗೆ ಉಲ್ಲೇಖಿಸಿರಬಹುದು ಎಂದು ಶಂಕಿಸಲಾಗಿದೆ. ಆತ್ಮಹತ್ಯೆಗೂ ಮುನ್ನವೇ ಅವರು ಈ ಬಗ್ಗೆ ಕುಟುಂಬದವರಿಗೆ ಸುಳಿವು ನೀಡಿದ್ದರು ಎನ್ನಲಾಗಿದೆ.

ರಾಯ್ ಅವರ ಇಚ್ಛೆಯಂತೆಯೇ ಅವರ ಅಂತ್ಯಸಂಸ್ಕಾರ ಮಾಡಲಾಗಿದೆ. ಅವರು ಇಷ್ಟಪಡುತ್ತಿದ್ದ ದುಬಾರಿ ಬ್ಲೇಜರ್, ಸನ್ ಗ್ಲಾಸ್ ಹಾಗೂ ಬ್ರ್ಯಾಂಡೆಡ್ ಶೂ ಧ'ರಿಸಿಯೇ ಅವರ ಅಂತಿಮ ವಿಧಿವಿಧಾನ ಭಾನುವಾರ ನೆರವೇರಿದೆ.

ಜೀವನ ಸಾಗಿಸುವುದು ಕಷ್ಟ ಎಂದ ರಾಯ್ ಸಹೋದರ: ನನ್ನ ಮತ್ತು ರಾಯ್ ನಡುವೆ ಜನವರಿ 30ರಂದು ಕೊನೆಯ ಮಾತುಕತೆಯಾಗಿತ್ತು. ನಾನು ಮದುವೆಗೆ ಹೋಗಿದ್ದಾಗ ಫೋನ್ ಮಾಡಿ 'ಯಾವಾಗ ಬರ್ತೀಯಾ, ನಿನ್ನ ಜೊತೆ ಮಾತನಾಡಬೇಕು ಅಂದಿದ್ದರು. ಈಗ ಅವರು ನಮ್ಮನ್ನು ಬಿಟ್ಟು ಹೋಗಿದ್ದಾರೆ, ಜೀವನ ಸಾಗಿಸುವುದು ಕಷ್ಟವಾಗಿದೆ. ಸರ್ಕಾರ ಎಸ್‌ಐಟಿ ರಚನೆ ಮಾಡಿದೆ, ತನಿಖೆಯಲ್ಲಿ ಸತ್ಯ ಹೊರಬರಲಿ ಎಂದು ಕಾಯುತ್ತಿದ್ದೇವೆ' ಎಂದು ಸಹೋದರ ಬಾಬು ಹೇಳಿದ್ದಾರೆ.

ಕಾಂಗ್ರೆಸ್ ನಾಯಕ ಮೊಹಮದ್ ನಲಪಾಡ್, 'ರಾಯ್ ಅವರ ಪುತ್ರ ರೋಹಿತ್ ಈಗ ತಂದೆಯನ್ನು ಕಳೆದುಕೊಂಡ ನೋವಿನಲ್ಲಿದ್ದಾರೆ. ಅವರು ಮಾತನಾಡಲು ಶಕ್ತಿ ಇಲ್ಲದಷ್ಟು ಸುಸ್ತಾಗಿದ್ದಾರೆ. ಸದ್ಯಕ್ಕೆ ಏನನ್ನೂ ಹೇಳುವ ಸ್ಥಿತಿಯಲ್ಲಿ ಅವರ ಕುಟುಂಬ ಇಲ್ಲ, ಮುಂದೊಂದು ದಿನ ಸುದ್ದಿಗೋಷ್ಠಿ ನಡೆಸಿ ಸತ್ಯವನ್ನು ತಿಳಿಸಲಿದ್ದಾರೆ' ಎಂದರು. ಕಷ್ಟದ ಸಮಯದಲ್ಲಿ ಸಹಕರಿಸಿದ ಮಾಧ್ಯಮಗಳಿಗೆ ಧನ್ಯವಾದಗಳು. ನಮ್ಮ ಕುಟುಂಬ ನಿಮ್ಮ ಸಹಕಾರಕ್ಕೆ ಆಭಾರಿಯಾಗಿದೆ ಎಂದು ಪುತ್ರ ರೋಹಿತ್ ಹೇಳಿದ್ದಾರೆ.

ಸರ್ಕಾರ ಈಗಾಗಲೇ ಈ ಹೈಪ್ರೊಫೈಲ್ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ ರಚನೆ ಮಾಡಿದೆ. ಸಿ.ಜೆ. ರಾಯ್ ಅವರ 9 ಪುಟಗಳ ಡೆತ್ ನೋಟ್‌ನಲ್ಲಿ ಇರುವ ವಿಷಯಗಳೇನು, ಐಟಿ ಅಧಿಕಾರಿಗಳ ವಿಚಾರಣೆಯ ವೇಳೆ ಏನಾಯಿತು ಎಂಬ ಪ್ರಶ್ನೆಗಳಿಗೆ ಎಸ್‌ಐಟಿ ಉತ್ತರ ಕಂಡುಕೊಳ್ಳಬೇಕಿದೆ.

400 ಕೋಟಿ ದರೋಡೆ ಪ್ರಕರಣದ ಪ್ರಮುಖ ಆರೋಪಿ ಪೊಲೀಸರಿಗೆ ಶರಣು

ಬೆಳಗಾವಿ, ಫೆ.1– ಕರ್ನಾಟಕ–ಮಹಾರಾಷ್ಟ್ರ ಗಡಿಯ ಚೋರ್ಲಾ ಘಾಟ್‌ನಲ್ಲಿ ನಡೆದ 400 ಕೋಟಿ ದರೋಡೆ ಪ್ರಕರಣದ ಪ್ರಮುಖ ಆರೋಪಿ ಕಿಶೋರ್ ಸಾಳ್ವೆ ನಾಸಿಕ್ ಜಿಲ್ಲೆಯ ಘೋಟಿ ಪೊಲೀಸ್ ಠಾಣೆಗೆ ತೆರಳಿ ಶರಣಾಗಿದ್ದಾನೆ.

ನಂತರ ಪೊಲೀಸರು ಬಂಧಿಸಿದ್ದಾರೆ. ಪ್ರಕರಣದಲ್ಲಿ ದೂರುದಾರರಾಗಿರುವ ಸಂದೀಪ್ ಪಾಟೀಲ್ ಕಿಡ್ನ್ಯಾಪ್ ಮತ್ತು 400 ಕೋಟಿ ರೂ. ದರೋಡೆ ಸಂಬಂಧಿತ ಅಂಶಗಳ ಬಗ್ಗೆ ಎಸ್‌ಐಟಿ ತನಿಖೆ ನಡೆಸುತ್ತಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಇತ್ತೀಚೆಗೆ ವೈರಲ್ ಆಗಿರುವ ಆಡಿಯೋ ಸಂಭಾಷಣೆಗಳನ್ನ ಎಸ್‌ಐಟಿ ಪರಿಶೀಲನೆಗೆ ತೆಗೆದುಕೊಂಡಿದೆ.

ಮತ್ತೊಂದೆಡೆ, ಇದೇ ಚೋರ್ಲಾ ಘಾಟ್ ಮಾರ್ಗದಲ್ಲೇ ತೆಲುಗಿನ 'ಪುಷ್ಪ' ಸಿನಿಮಾವನ್ನ ನೆನಪಿಸುವಂತೆ ಕಸದ ಮಧ್ಯೆ 25 ಲಕ್ಷ ಮೌಲ್ಯದ 800 ಮದ್ಯದ ಬಾಕ್ಸ್‌ಗಳನ್ನ ಸಾಗಿಸುವಾಗ ಬೆಳಗಾವಿಯ ಮಾಳಮಾರುತಿ ಪೊಲೀಸರು ಸೀಜ್ ಮಾಡಿದ್ದಾರೆ. ಗೋವಾದಿಂದ ಮಹಾರಾಷ್ಟ್ರಕ್ಕೆ ಈ ಮದ್ಯವನ್ನ ಸಾಗಿಸಲಾಗುತ್ತಿತ್ತು.

ನಿವೃತ್ತ ಪ್ರಾಧ್ಯಾಪಕಿ ಪ್ರೊ.ಆರ್.ಪೂರ್ಣಿಮಾ ನಿಧನ

ಮೈಸೂರು,ಫೆ.1– ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ನಿವೃತ್ತ ಇಂಗ್ಲಿಷ್ ಪ್ರಾಧ್ಯಾಪಕಿ ಹಾಗೂ ಚಿಲ್ಡ್ರನ್ಸ್ ಲಿಟರರಿ ಕ್ಲಬ್ ನಿರ್ದೇಶಕರಾದ ಪ್ರೊ.ಆರ್.ಪೂರ್ಣಿಮಾ (72) ಭಾನುವಾರ ಮುಂಜಾನೆ ತಮ್ಮ ಸ್ವಗೃಹದಲ್ಲಿ ನಿಧನರಾಗಿದ್ದಾರೆ.



ಮೈಸೂರಿನ ವಿವಿ ಮೊಹಲ್ಲಾದ ಮೂರನೇ ಹಂತದ ನಿವಾಸಿಯಾಗಿದ್ದ ಪ್ರೊ.ಆರ್. ಪೂರ್ಣಿಮಾ ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿ ನಿವೃತ್ತಿ ಹೊಂದಿದ್ದರು. ಲೇ. ಎಂ. ರಾಮರಾವ್, ಲೇ.ಜಯಲಕ್ಷ್ಮಿ ದಂಪತಿ ಪುತ್ರಿಯಾಗಿದ್ದ ಪೂರ್ಣಿಮಾ, ಸಹೋದರಿಯರಾದ ಪ್ರೊ.ಆರ್.ಪ್ರತಿಭಾ ಹಾಗೂ ಪ್ರೊ.ಆರ್.ಇಂದಿರಾ(ಸಮಾಜಶಾಸ್ತ್ರದ ನಿವೃತ್ತ ಪ್ರಾಧ್ಯಾಪಕ) ಹಾಗೂ ಸಂಬಂಧಿಕರು, ಹಿತೈಷಿಗಳು ಮತ್ತು ಬಂಧು ಮಿತ್ರರನ್ನು ಅಗಲಿದ್ದಾರೆ. ಮಧ್ಯಾಹ್ನ 2 ಗಂಟೆವರೆಗೆ ವಿವಿ ಮೊಹಲ್ಲಾದ ನಿವಾಸದಲ್ಲಿ ಅವರ ಅಂತಿಮ ದರ್ಶನಕ್ಕೆ ಅವಕಾಶ ನೀಡಲಾಗಿತ್ತು. ಬಳಿಕ ಮೈಸೂರು ವಿಜಯನಗರದ 4ನೇ ಹಂತದಲ್ಲಿರುವ ಮುಕ್ತಿಧಾಮದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು.

ಚಿಲ್ಡ್ರನ್ಸ್ ಲಿಟರರಿ ಕ್ಲಬ್: ಪ್ರೊ.ಆರ್. ಪೂರ್ಣಿಮಾ ಅವರು 1990ರಲ್ಲಿ ಚಿಲ್ಡ್ರನ್ಸ್ ಲಿಟರರಿ ಕ್ಲಬ್(ಸಿಎಲ್‌ಸಿ) ಸ್ವಯಂ ಸೇವಾ ಸಂಸ್ಥೆಯನ್ನು ಸ್ಥಾಪಿಸಿದರು. ಆ ಕ್ಲಬ್ ಮೂಲಕ ಸಾವಿರಾರು ಕಾರ್ಯಕ್ರಮ ನಡೆಸಿದ್ದರು ಅಲ್ಲದೆ, ಕಾರ್ಯಾಗಾರವನ್ನು ಆಯೋಜಿಸುವ ಮೂಲಕ ಸರ್ಕಾರಿ ಹಾಗೂ ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ಸಾಹಿತ್ಯದ ಬಗ್ಗೆ ಬೆಳಕು ಚೆಲ್ಲುವ ಕಾರ್ಯಕ್ರಮ ನಡೆಸಿ, ಗಮನ ಸೆಳೆದಿದ್ದರು.

ಜೆ.ಬಿ. ಸುದರ್ಶನ್



ಮೈಸೂರು, ಫೆ. 1– ಮೈಸೂರು ಬೃಂದಾವನ ಬಡಾವಣೆ ನಿವಾಸಿ ಜೆ.ಬಿ. ಸುದರ್ಶನ್ ಇಂದು ಬೆಳಗ್ಗೆ ನಿಧನರಾಗಿದ್ದಾರೆ.

ಮೃತರು ಪತ್ನಿ ಜೆ.ಎಸ್. ಚಂದ್ರಿಕಾ, ಪುತ್ರ ಜೆ.ಎಸ್. ಕಿರಣ್ ಹಾಗೂ ಅಪಾರ ಬಂಧು–ಬಳಗ ಮತ್ತು ಸ್ನೇಹಿತರನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಇಂದು ಸಂಜೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಿರಿಯೂರಲ್ಲಿ ಶ್ರೀ ವೀರ ಮಡಿವಾಳ ಮಾಚಿದೇವರ ಜಯಂತಿ ಆಚರಣೆ

ಮಡಿವಾಳ ಮಾಚಿದೇವರು ಮಹಾನ್ ಪುರುಷ



ಹಿರಿಯೂರಿನಲ್ಲಿ ಮಡಿವಾಳ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಲಾಯಿತು.

ತಿ.ನರಸೀಪುರ, ಫೆ.1– ಜಾತಿ ಎಲ್ಲೇ ಮೀರಿ ಸಮಾಜಕ್ಕೆ ಜಾತ್ಯಾತೀತ ಸಂದೇಶ ಸಾರಿದ ಶರಣರ ಚಿಂತನೆಗಳು ವಿಶ್ವ ಸಾಹಿತ್ಯಕ್ಕೆ ವಿಶೇಷ ಕೊಡುಗೆ ಎಂದು ಶ್ರೀ ವೀರ ಮಡಿವಾಳ ಮಾಚಿ ದೇವರ ಸಂಘದ ಅಧ್ಯಕ್ಷ ರೇಚಣ್ಣ ತಿಳಿಸಿದರು.

ತಾಲೂಕು ಹಿರಿಯೂರು ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿದ್ದ ಮಡಿವಾಳ ಮಾಚಿದೇವರ ಜಯಂತಿಯ ಕಾರ್ಯಕ್ರಮದಲ್ಲಿ ವೀರ ಮಡಿವಾಳರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಮಡಿವಾಳ ಮಾಚಿದೇವರು ಶರಣರಲ್ಲಿ ಅಗ್ರಗಣ್ಯರಾಗಿದ್ದು, ಅವರೊಬ್ಬ ಮಹಾನ್ ಪುರುಷ. 12ನೇ ಶತಮಾನದಲ್ಲಿ ತುಳಿತಕ್ಕೆ ಒಳಗಾದ ಸಮುದಾಯಗಳಿಗೆ ಸಮಾನ ಅವಕಾಶ ಕಲ್ಪಿಸುವ ಜೊತೆಗೆ ಸಮಾಜ ಸುಧಾರಣೆಗಾಗಿ ಶ್ರಮಿಸಿದ ಮಹಾನ್ ನಾಯಕ. ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಹಿಂದುಳಿದ ಹಾಗೂ ಶ್ರಮಿಕ ವರ್ಗದ ಸಮಾನತೆಗೆ ಸಾಮಾಜಿಕ ಕ್ರಾಂತಿ ಮಾಡಿದವರಲ್ಲಿ ಮಾಚಿದೇವರು ಪ್ರಮುಖರು. ಮೇಲು–ಕೀಳು, ಬಡವರು, ಸಾಮಾಜಿಕ ಬಹಿಷ್ಕಾರ ಹಾಗೂ ಶೋಷಣೆಗೆ ಒಳಗಾದವರ ಬಗ್ಗೆ ಚಿಂತಿಸಿ ವ್ಯಕ್ತಿ ವ್ಯಕ್ತಿಗಳ ನಡುವೆ ಇರುವ ಅಂತರ ಹೋಗಲಾಡಿಸಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು. ಆಧ್ಯಾತ್ಮಿಕ ಪ್ರವೃತ್ತಿ ಮೂಲಕ ಜನರಲ್ಲಿ ಭಕ್ತಿ ಪ್ರಧಾನ ಚಿಂತನೆಗಳನ್ನು ತುಂಬಿದ ಅವರು 3 ಲಕ್ಷಕ್ಕೂ ಹೆಚ್ಚು ವಚನಗಳನ್ನು ಬರೆದು, ಶರಣರ ಸಂಸ್ಕೃತಿಯನ್ನು ತಮ್ಮ ಜೀವನದಲ್ಲಿ ಮೈಗೂಡಿಸಿಕೊಂಡು ಸಮಾಜದ ತಳಮಟ್ಟದ ಜನರನ್ನು ಮೇಲೆತ್ತಲು ಅಹಿಂಸಾ ತತ್ವ ಅಳವಡಿಸಿಕೊಂಡ ಅವರ ವಿಶಾಲತೆ ಸರ್ವರಿಗೂ ಮಾದರಿ ಎಂದರು.

ಸಂಘದ ಗೌರವಾಧ್ಯಕ್ಷ ಸಿದ್ದರಾಜು (ತಮ್ಮಡಿ) ಮಾತನಾಡಿ, 12ನೇ ಶತಮಾನದ ಬಸವಣ್ಣನವರ ಸಮಕಾಲೀನ ಶರಣರಲ್ಲಿ ಮಡಿವಾಳ ಮಾಚಿದೇವರು ಒಬ್ಬರಾಗಿದ್ದು, ಕಾಯಕ ನಿಷ್ಠೆ, ದಾಸೋಹದಂತಹ ಮೌಲ್ಯಯುತ ಕಾಣಿಕೆ ನೀಡಿದ್ದು, ಇಂತಹ ಶರಣರು, ಮಹಾಪುರುಷರು ಹಾಕಿಕೊಟ್ಟ ಮಾರ್ಗದರ್ಶನ ಹಾಗೂ ಸಂದೇಶವನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.

ಈ ವೇಳೆ ತಾಲೂಕು ವೀರ ಮಡಿವಾಳ ಸಂಘದ ಉಪಾಧ್ಯಕ್ಷ ಶಿವಣ್ಣ, ಕಾರ್ಯದರ್ಶಿ ಸುಚಿನ್, ಖಜಾಂಚಿ ರಾಜೇಶ್, ನಿರ್ದೇಶಕರಾದ ಶಶಿಧರ, ರಾಜಶೇಖರ್, ಶರತ್ ಕುಮಾರ್, ದರ್ಶನ್, ಸಿದ್ದರಾಜು, (ಗ್ಲೋಹೋಸ್) ರಾಜೇಶ, ನವೀನ, ನಿಂಗರಾಜು, ಮಹೇಶ್, ಸಾಗರ್, ಉಮೇಶ್, ರವಿ, ಅಮಿತ್, ಮಹೇಶ್, ಯಜಮಾನ ನಾಗಶೆಟ್ಟಿ, ನಾಗೇಂದ್ರ, ಯಜಮಾನ್ ಗೋವಿಂದೇಗೌಡ, ರಾಜಣ್ಣ, ರಾಜಶೇಖರ್, ಯಜಮಾನರು ಗ್ರಾಮಸ್ಥರು ಹಾಜರಿದ್ದರು

ರಾಜ್ಯದ ಅಧಿಕಾರ ಕಟುಕರ ಕೈಯಲ್ಲಿ

ಇದು ಜನರು ಹೇಳುತ್ತಿರುವ ಮಾತು ಎಂದ ಮಾಜಿ ಸಚಿವ ಸಾ.ರಾ.ಮಹೇಶ್



ಜೆಡಿಎಸ್ ಕಚೇರಿಯಲ್ಲಿ ಪಕ್ಷದ ಸದಸ್ಯತ್ವ ಅಭಿಯಾನಕ್ಕೆ ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಸಾ.ರಾ.ಮಹೇಶ್ ಮಾತನಾಡಿದರು.

ಕೆ.ಆರ್.ನಗರ: ಮುಂಬರುವ ವಿಧಾನಸಭಾ ಚುನಾವಣೆಗೂ ಮೊದಲೇ ಕುರುಬ ಸಮಾಜದ ಮುಖಂಡರು ಸೇರಿದಂತೆ ಎಲ್ಲಾ ಸಮುದಾಯದವರು ಕಾಂಗ್ರೆಸ್ ತೊರೆದು ಜೆಡಿಎಸ್ ಪಕ್ಷ ಸೇರ್ಪಡೆಗೊಳ್ಳುತ್ತಿದ್ದು, ಅವರಿಗೆ ಸ್ವಾಗತ ಬಯಸುತ್ತೇನೆ ಎಂದು ಮಾಜಿ ಸಚಿವ ಸಾ.ರಾ.ಮಹೇಶ್ ತಿಳಿಸಿದರು.

ಪಟ್ಟಣದ ಬಸವೇಶ್ವರ ಬ್ಲಾಕ್‌ನಲ್ಲಿರುವ ಜೆಡಿಎಸ್ ಕಚೇರಿಯಲ್ಲಿ ಜೆಡಿಎಸ್ ಸದಸ್ಯತ್ವ ಅಭಿಯಾನಕ್ಕೆ ಫೆ.8ರಂದು ರಾಜ್ಯ ಜೆಡಿಎಸ್ ಯುವ ನಾಯಕ ನಿಖಿಲ್ ಕುಮಾರಸ್ವಾಮಿ ಆಗಮಿಸುತ್ತಿರುವ ಹಿನ್ನೆಲೆಯಲ್ಲಿ ಭಾನುವಾರ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು.

ಕ್ಷೇತ್ರದಲ್ಲಿ ಕಾಂಗ್ರೆಸ್ ಪಕ್ಷದ ಸರ್ಕಾರದ ದುರಾಡಳಿದಿಂದ ಬೇಸತ್ತಿರುವ ಜನತೆ ನಾನು ಹೋದ ಕಡೆ ಕಟುಕರ ಕೈಗೆ ರಾಜ್ಯ ಸರ್ಕಾರದ ಅಧಿಕಾರ ಸಿಕ್ಕಿದೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಮುಂಬರುವ ತಾ.ಪಂ, ಜಿ.ಪಂ.ಚುನಾವಣೆಯಲ್ಲಿ ನೂರಕ್ಕೆ ನೂರಷ್ಟು ಜೆಡಿಎಸ್ ಅಭ್ಯರ್ಥಿಗಳು ಗೆಲುವು ಸಾಧಿಸಲಿದ್ದಾರೆ ಎಂದು ಅವರು ಭವಿಷ್ಯ ನುಡಿದರು. ನನ್ನನ್ನು ರಾಜಕೀಯ ಕಾರಣಕ್ಕಾಗಿ ಕುರುಬ ಸಮಾಜ ವಿರೋಧಿ ಎಂದು ಕ್ಷೇತ್ರದ ಕೆಲ ಕುರುಬ ಸಮಾಜ ಮುಖಂಡರು ಬಿಂಬಿಸುವ ಕೆಲಸ ಮಾಡುತ್ತಿದ್ದಾರೆ ಎಂದ ಸಾ.ರಾ.ಮಹೇಶ್, ಕೊರೋನ ಸಂದರ್ಭದಲ್ಲಿ ಮೃತಪಟ್ಟವರಿಗೆ ತಲಾ 25 ಸಾವಿರ ನೆರವು, ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ವಿತರಣೆ ಸೇರಿದಂತೆ ಅನೇಕ ಜನಪರ ಕಾರ್ಯಕ್ರಮ ಮಾಡಿದಾಗ ಜಾತಿ ವ್ಯವಸ್ಥೆ ನೋಡಿ ಮಾಡಲಾಯಿತೇ ಎಂದು ಪ್ರಶ್ನೆ ಮಾಡಿದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ , ಜಿ.ಪಂ.ಮಾಜಿ ಉಪಾಧ್ಯಕ್ಷ ಎ.ಎಸ್.ಚನ್ನಬಸಪ್ಪ ,ಮಾಜಿ ಸದಸ್ಯರಾದ ಅಚ್ಚುತಾನಂದ, ಎಂ.ಟಿ.ಕುಮಾರ್, ಜೆಡಿಎಸ್ ರಾಜ್ಯ ಘಟಕದ ಪ್ರ.ಕಾರ್ಯದರ್ಶಿ ಚಂದ್ರಶೇಖರ್, ಪುರಸಭೆ ಸದಸ್ಯ ಉಮೇಶ್, ದಲಿತ ಮುಖಂಡ ಹನಸೋಗೆ ನಾಗರಾಜ್, ಜೆಡಿಎಸ್ ತಾಲೂಕು ಅಧ್ಯಕ್ಷರಾದ ಹಂಪಾಪುರ ಕುಮಾರ್, ಮೆಡಿಕಲ್ ರಾಜಣ್ಣ, ತಾ.ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ತಾ.ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಅಧ್ಯಕ್ಷ ಯೋಗೇಶ್ ಮಾತನಾಡಿದರು.

ಪಿಎಲ್‌ಡಿ ಬ್ಯಾಂಕ್ ನಿರ್ದೇಶಕರಾದ ಎಂ.ಎಸ್.ಹರಿಚಿದಂಬರ್, ವಡ್ಡರಕೊಪ್ಪಲು ಮಹೇಶ್, ಪುರಸಭೆ ಮಾಜಿ ಅಧ್ಯಕ್ಷೆ ಗೀತಾ ಮಹೇಶ್, ಡಿ.ಕಾಂತರಾಜ್, ಮಾಜಿ ಸದಸ್ಯರಾದ ಕೆ.ಆರ್.ಗಿರೀಶ್, ಬಾರ್ ಶಿವಕುಮಾರ್, ತಾ. ಜಾದಳ ಘಟಕದ ಅಧ್ಯಕ್ಷೆ ರಾಜಲಕ್ಷ್ಮಿ, ಕಾರ್ಯದರ್ಶಿ ಭಾಗ್ಯಲಕ್ಷ್ಮಿ, ಮೋಹನಕುಮಾರಿ, ಕಾರ್ಯದರ್ಶಿ ಪೂರ್ಣಿಮಾ, ಯುವ ಜೆಡಿಎಸ್ ಜಿಲ್ಲಾ ಗ್ರಾಮಾಂತರ ಉಪಾಧ್ಯಕ್ಷ ಕಗ್ಗೆರೆ ಕುಚೇಲ, ಜಾದಳ ಎಸ್.ಟಿ.ಘಟಕದ ಅಧ್ಯಕ್ಷ ಹಂಪಾಪುರ ಸೂರಿ, ತಾಪಂ ಮಾಜಿ ಅಧ್ಯಕ್ಷ ದೊಡ್ಡಕೊಪ್ಪಲು ನಾಗಣ್ಣ, ಕವಿತರವಿ, ಜೆಡಿಎಸ್ ಮುಖಂಡರಾದ ಗಂಧನಹಳ್ಳಿ ಜಲೇಂದ್ರ, ಬಾಲಾಜಿ ಗಣೇಶ್, ಅಂಗಡಿ ಶಿವಣ್ಣ, ಘನತೆ ಕುಮಾರ್, ಡೈರಿ ರವೀಶ್, ಹೊಸಹಳ್ಳಿ ಪುಟ್ಟರಾಜು, ಅನೀಪ್ ಗೌಡ, ಸಾ.ರಾ.ದೀಪು, ವಡ್ಡರಕೊಪ್ಪಲು ಶ್ರೀಧರ್, ಬಾಚಹಳ್ಳಿ ರಘು, ಮಂಚನಹಳ್ಳಿ ಗುರು, ದೇವೇಂದ್ರ, ಅನೀಲ್, ಚೌಕಹಳ್ಳಿ ಆನಂದ್ ಸೇರಿದಂತೆ ಸಾವಿರಾರು ಜನರು ಇದ್ದರು.

ಇಂದಿನಿಂದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಮಹೋತ್ಸವ



ಬೆಟ್ಟದಪುರ: ಪಿರಿಯಾಪಟ್ಟಣ ತಾಲೂಕಿನ ಇತಿಹಾಸ ಪ್ರಸಿದ್ಧ ಧಾರ್ಮಿಕ ಹಾಗೂ ಐತಿಹಾಸಿಕ ಕ್ಷೇತ್ರವಾದ ಬೆಟ್ಟದಪುರದ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಜಾತ್ರಾ ಮಹೋತ್ಸವ ಸೋಮವಾರ ಮತ್ತು ಮಂಗಳವಾರ ವಿಜೃಂಭಣೆಯಿಂದ ನಡೆಯಲಿದೆ. ಸೋಮವಾರ ರಾತ್ರಿ ಶ್ರೀ ಭ್ರಮರಾಂಬ ಮತ್ತು ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವರ ಕಲ್ಯಾಣೋತ್ಸವ ನಡೆಯಲಿದ್ದು ಅಂದು ದೇವರ ಮೂರ್ತಿಯನ್ನು ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಮಾಡಿ ನಂತರ ಗ್ರಾಮದ ಮಧ್ಯಭಾಗದಲ್ಲಿರುವ ದೇವಾಲಯದಲ್ಲಿ ಕಲ್ಯಾಣೋತ್ಸವವನ್ನು ಮೈಸೂರಿನ ಮಲ್ಲಣ್ಣ ಶೆಟ್ಟರ ಕುಟುಂಬಸ್ಥರು ನಡೆಸಿಕೊಡುತ್ತಾರೆ. ಗಿರಿಜಾ ಕಲ್ಯಾಣವನ್ನು ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ಆಗಮಿಸಿ ನೋಡಿದರೆ ಕಂಕಣ ಭಾಗ್ಯ ಲಭಿಸುತ್ತದೆ ಎಂಬ ನಂಬಿಕೆಯಿಂದ ಮದುವೆಯಾಗದ ಯುವಕ ಯುವತಿಯರು ಈ ಕಲ್ಯಾಣೋತ್ಸವದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುತ್ತಾರೆ.

ಮಂಗಳವಾರ ಬೆಳಿಗ್ಗೆ 11:30ಕ್ಕೆ ಭ್ರಮರಾಂಭ ಸಮೇತ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ಬೆಳ್ಳಿ ಬಸಪ್ಪ ಗಣಪತಿ ದೇವರುಗಳ ಮೂರು ರಥಗಳು ಇಲ್ಲಿ ಹರಿಯುವುದು ವಿಶೇಷ. ಅಂದು ರಥೋತ್ಸವಕ್ಕೆ ಉಪ ವಿಭಾಗಾಧಿಕಾರಿ ಕಾವ್ಯ, ತಾಲೂಕು ತಹಶೀಲ್ದಾರ್ ನಿಸರ್ಗ ಪ್ರಿಯ ಹಾಗೂ ಇತರ ಅಧಿಕಾರಿಗಳು ಭಾಗವಹಿಸಿ ವಿಶೇಷ ಪೂಜೆ ಸಲ್ಲಿಸುವರು ನಂತರ ದೇವರನ್ನು ದೇವಾಲಯದಿಂದ ಮೆರವಣಿಗೆ ಮೂಲಕ ರಥ ಬೀದಿಯಲ್ಲಿರುವ ರಥದ ಹತ್ತಿರ ತಂದು ಮೂರು ರಥಗಳಿಗೆ ದೇವರನ್ನು ಕೂರಿಸಿದ ಜಯ ಘೋಷಗಳೊಂದಿಗೆ ರಥೋತ್ಸವ ಪ್ರಾರಂಭವಾಗುವುದು.

ವಚನ ಸಾಹಿತ್ಯವನ್ನು ರಕ್ಷಿಸಿದವರು ಮಡಿವಾಳ ಮಾಚಿದೇವರು



ಮಡಿವಾಳ ಮಾಚಿದೇಮರ ಜಯಂತಿ ಕಾರ್ಯಕ್ರಮವನ್ನು ಶಾಸಕ ದರ್ಶನ್ ಉದ್ಘಾಟಿಸಿದರು.

ನಂಜನಗೂಡು : ವಚನ ಸಾಹಿತ್ಯವನ್ನು ರಕ್ಷಣೆ ಮಾಡಿದ ಕೀರ್ತಿಯು ಮಡಿವಾಳ ಮಾಚಿದೇವರಿಗೆ ಸಲ್ಲುತ್ತದೆ, ಮಡಿವಾಳ ಮಾಚಯ್ಯರಂತಹ ಶರಣರು, ಸಂತರ ಚಿಂತನೆಗಳನ್ನು ಮುಂದಿನ ಪೀಳಿಗೆಯವರಿಗೆ ತಿಳಿಸುವ ಜೊತೆಗೆ ಅವರು ತೋರಿದ ದಾರಿಯಲ್ಲಿ ನಡೆಯುವುದರಿಂದ ಸಮ ಸಮಾಜ ನಿರ್ಮಾಣ ಮಾಡಬಹುದು ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ಆವರಣದಲ್ಲಿ ಭಾನುವಾರ ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಮುಖ್ಯ ಭಾಷಣಕಾರರಾಗಿದ್ದ ಮುಖ್ಯೋಪಾಧ್ಯಾಯ ಎಸ್.ಎನ್.ಸಿದ್ದರಾಜಪ್ಪ ಮಾತನಾಡಿ, ವಿಶ್ವ ಸಾಹಿತ್ಯಕ್ಕೆ ಕರ್ನಾಟಕ ವಚನ ಸಾಹಿತ್ಯ ಅನುಪಮ ಕೊಡುಗೆ ನೀಡಿದೆ. ರಾಜ್ಯದ 21 ಸಾವಿರ ವಚನಕಾರರು, 247 ಮಂದಿ ವಚನ ಕಾರ್ತಿಯರು 33 ಸಾವಿರ ವಚನ ಸಾಹಿತ್ಯ ರಚಿಸಿದ್ದಾರೆ. ರಾಜ್ಯ ಸರ್ಕಾರ ಅವುಗಳನ್ನು ಪ್ರಕಟಿಸಿದೆ. ಮಡಿವಾಳ ಮಾಚಯ್ಯನವರು ಬಿಚ್ಚುಗತ್ತಿ ಹಿಡಿದು ವಚನ ಸಾಹಿತ್ಯವನ್ನು ರಕ್ಷಿಸದಿದ್ದಿದ್ದರೆ ನಮಗೆ ಬಸವಣ್ಣನವರ ಕಾಲದ ವಚನ ಸಾಹಿತ್ಯ ಲಭ್ಯವಾಗುತ್ತಿರಲಿಲ್ಲ. ವಿಶ್ವ ಸಾಹಿತ್ಯಕ್ಕೆ ವಚನ ಸಾಹಿತ್ಯವನ್ನು ಕೊಡುಗೆಯಾಗಿ ನೀಡುವಲ್ಲಿ ಮಡಿವಾಳ ಮಾಚಿದೇವರ ಪಾತ್ರ ಹಿರಿದಾಗಿದೆ. ಅಲ್ಲದೆ ಜನರ ಮೌಲ್ಯಯುತ ಬದುಕಿಗೆ ಬೇಕಾದ ವಚನಗಳನ್ನು ಮಡಿವಾಳ ಮಾಚಯ್ಯ ರಚಿಸಿದ್ದಾರೆ ಎಂದು ಹೇಳಿದರು.

ವಚನಗಳ ಕಂಠಪಾಠ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಲ್ಯಾಪ್ ಟಾಪ್ ಹಾಗೂ ನಗದು ಪುರಸ್ಕಾರ ನೀಡಿ ಗೌರವಿಸಲಾಯಿತು.

ಇದಕ್ಕೂ ಮುನ್ನ ನಗರದ ಜೂನಿಯರ್ ಕಾಲೇಜು ಮೈದಾನದಿಂದ ಶ್ರೀಕಂಠೇಶ್ವರ ದೇವಾಲಯದ ಆವರಣದವರೆಗೆ ಮಡಿವಾಳ ಮಾಚಿದೇವರ ಭಾವಚಿತ್ರವನ್ನು ಬೆಳ್ಳಿರಥದಲ್ಲಿರಿಸಿ, ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ತಹಶೀಲ್ದಾರ್ ಸ್ಮಿತಾರಾಮು, ತಾ.ಪಂ ಇಒ ಜೆರಾಲ್ಡ್ ರಾಜೇಶ್, ಡಿವೈಎಸ್ಪಿ ರಘು, ಕೆ.ಮಾರುತಿ, ನಗರ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ದೇಬೂರು ಅಶೋಕ್, ಶ್ರೀನಿವಾಸ ಮೂರ್ತಿ, ಮುರುಗೇಶ್, ಶಿವಪ್ಪ ದೇವರು, ಹೆಜ್ಜಿಗೆ ಪ್ರಸನ್ನಕುಮಾರ್, ಪ್ರಧಾನ ಕಾರ್ಯದರ್ಶಿ ಕೆ.ಎಂ.ಬಸವರಾಜು, ಗೌರವಾಧ್ಯಕ್ಷ ಶಿವಣ್ಣ, ರವಿ ಉಪಸ್ಥಿತರಿದ್ದರು.

ಗಿರಿಜಾ ಸುಂದರೇಶ್ ನಿಧನ



ನಂಜನಗೂಡು : ನಗರದ ಹೆಸರಾಂತ ವೈದ್ಯ ಡಾ. ಸುಂದರೇಶ್ ಅವರ ಪತ್ನಿ ಗಿರಿಜಾ ಸುಂದರೇಶ್(75) ಭಾನುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತಿ ಡಾ. ಸುಂದರೇಶ್, ಪುತ್ರ ಡಾ. ಶ್ರೀಕಾಂತ್, ಪುತ್ರಿ ಡಾ.ದೀಪಾ, ಸೊಸೆ ಡಾ. ದಿವ್ಯಾ ಸೇರಿದಂತೆ ಅಪಾರ ಬಂಧು– ಬಳಗ ಅಗಲಿದ್ದಾರೆ. ಶಾಸಕ ದರ್ಶನ್ ಧ್ರುವನಾರಾಯಣ, ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕಳಲೆ ಕೇಶವಮೂರ್ತಿ ಮೃತರ ಅಂತಿಮ ದರ್ಶನ ಪಡೆದರು. ಮೃತರ ಅಂತ್ಯಕ್ರಿಯೆಯನ್ನು ಸೋಮವಾರ ನಗರದ ಕಪಿಲಾ ತೀರದ 16 ಕಾಲಮಂಟಪ ಬಳಿಯ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಐದನೇ ಪುಟದಿಂದ

'ನಿರ್ಮಲಾ' ಬಜೆಟ್

ಕೈಗಾರಿಕೆ ಅಭಿವೃದ್ಧಿ, ಹೊಸ ರೈಲ್ವೆ ಕಾರಿಡಾರ್‌ಗಳು, ಖಾದಿ ಉದ್ಯಮ, ಶ್ರೀಗಂಧ ಹಾಗೂ ತೆಂಗು ಬೆಳೆಗೆ ಒತ್ತಾಸೆ, ಯುವ ಜನತೆಗೆ ಶಕ್ತಿ ತುಂಬುವ ಕಾರ್ಯಕ್ರಮಗಳು ಸೇರಿದಂತೆ ಸರ್ವ ಕ್ಷೇತ್ರಗಳಿಗೂ ಪಾಲು ನೀಡುವ ಮೂಲಕ ಸಮತೋಲಿತ ಬಜೆಟ್ ಮಂಡಿಸಿದರು.

ಏ.1ರಿಂದ ಹೊಸ ತೆರಿಗೆ ಕಾಯ್ದೆ: ಭಾರೀ ನಿರೀಕ್ಷೆ ಇಟ್ಟುಕೊಂಡಿದ್ದ ತೆರಿಗೆ ಪಾವತಿದಾರರಿಗೆ ತೀವ್ರ ನಿರಾಸೆಯಾಗಿದೆ. ಹಳೆಯ ತೆರಿಗೆ ಪದ್ಧತಿಯಡಿ ಮತ್ತಷ್ಟು ಡಿಡಕ್ಷನ್ ನೀಡಬಹುದೆಂಬ ನಿರೀಕ್ಷೆ ಸುಳ್ಳಾಗಿದ್ದು, ತೆರಿಗೆ ವ್ಯವಸ್ಥೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಆದರೆ ಕಳೆದ ಜುಲೈ 2024ರಲ್ಲಿ ಘೋಷಿಸಿದಂತೆ, ಆದಾಯ ತೆರಿಗೆ ಕಾಯ್ದೆ 1961ರ ಸಮಗ್ರ ಮರುಪರಿಶೀಲನೆ ಪೂರ್ಣಗೊಂಡಿದ್ದು, ಸರಳೀಕೃತ ನಿಯಮಗಳೊಂದಿಗೆ 'ಆದಾಯ ತೆರಿಗೆ ಕಾಯ್ದೆ, 2025' ಬರುವ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ. ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುವಂತೆ ಹೊಸ ಫಾರ್ಮ್‌ಗಳನ್ನು ವಿನ್ಯಾಸಗೊಳಿಸಲಾಗಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ.

ಸರ್ವ ವ್ಯಾಪಿ ಪ್ರಯತ್ನ: ಈ ಬಾರಿ ಬಜೆಟ್‌ನಲ್ಲಿ ಸರ್ವ ಕ್ಷೇತ್ರಗಳನ್ನೂ ಸ್ಪರ್ಶಿಸುವ ಪ್ರಯತ್ನದಡಿ ಹಲವು ಯೋಜನೆ ಹಾಗೂ ಕಾರ್ಯಕ್ರಮಗಳನ್ನು ನೀಡಲಾಗಿದೆ. ಹಾಗೆಯೇ ಮೂಲ ಸೌಕರ್ಯಕ್ಕೆ ಆದ್ಯತೆ ನೀಡಿ, ಸಾಕಷ್ಟು ಅನುದಾನ ನೀಡಲಾಗಿದೆ. ದೇಶವನ್ನು ಔಷಧಿ ತಯಾರಿಕಾ ಹಬ್ ಆಗಿ ಪರಿವರ್ತಿಸುವುದು, ವಿರಳ ಲೋಹಗಳ ಸಂಗ್ರಹಕ್ಕೆ ದೇಶದ ವಿವಿಧೆಡೆ ಕಾರಿಡಾರ್ ನಿರ್ಮಿಸುವುದು, ಮಹಿಳೆಯರಿಗಾಗಿ ಶಿ–ಮಾರ್ಟ್, ಪಶು ಸಂಗೋಪನೆಗೆ ಉತ್ತೇಜನ, ಎಲ್ಲಾ ರಾಜ್ಯಗಳಲ್ಲೂ ಐದು ಯೂನಿವರ್ಸಿಟಿ ಟೌನ್‌ಶಿಪ್ ನಿರ್ಮಾಣ, ಎಲ್ಲಾ ಜಿಲ್ಲೆಗೂ ವಿದ್ಯಾರ್ಥಿನಿ ನಿಲಯ ಸ್ಥಾಪನೆ ಸೇರಿದಂತೆ ಯೋಜನೆಗಳನ್ನು ಘೋಷಿಸಲಾಗಿದೆ

ಜವಳಿ ಕ್ಷೇತ್ರದ ಅಭಿವೃದ್ಧಿಗಾಗಿ ರಾಷ್ಟ್ರೀಯ ಯೋಜನೆ ಘೋಷಿಸಲಾಗಿದೆ. ಖಾದಿ ಉದ್ಯಮದ ಅಭಿವೃದ್ಧಿಗೆ ಮಹಾತ್ಮ ಗಾಂಧಿ ಸ್ವರಾಜ್ ಹೊಸ ಯೋಜನೆ, ಕೈಗಾರಿಕಾ ಕ್ಲಸ್ಟರ್‌ಗಳ ಅಭಿವೃದ್ಧಿ, ಬಯೋ ಫಾರ್ಮ್, ಸಣ್ಣ ಮತ್ತು ಅತಿಸಣ್ಣ ಉದ್ಯಮಕ್ಕೆ ವಿಶೇಷ ಪ್ಯಾಕೇಜ್, ದೇಶಾದ್ಯಂತ 20 ಜಲಮಾರ್ಗ ನಿರ್ಮಾಣ, ಏಳು ಹೈಸ್ಪೀಡ್ ರೈಲು ಕಾರಿಡಾರ್ ನಿರ್ಮಾಣ, ಆಯುರ್ವೇದಕ್ಕೆ ಮನ್ನಣೆ, ಟೂರಿಸ್ಟ್ ಗೈಡ್‌ಗಳಿಗಾಗಿ ಪೈಲಟ್ ಯೋಜನೆ, ಪರ್ವತ ರೈಲುಗಳ ಘೋಷಣೆ, ಮೀನುಗಾರಿಕೆಗೆ ಉತ್ತೇಜನ, ಮಹಿಳೆಯರಿಗೆ ಶಿ ಮಾರ್ಟ್ ಯೋಜನೆ, ಖೇಲೋ ಇಂಡಿಯಾ ಯೋಜನೆಯಡಿ ಕರ್ನಾಟಕ ಮತ್ತು ಕೇರಳದ ಕರಾವಳಿಯಲ್ಲಿ ಟ್ರೆಕ್ಕಿಂಗ್ ಮಾರ್ಗ ಅಭಿವೃದ್ಧಿ, ಈಶಾನ್ಯ ಭಾರತಗಳ ದೇವಾಲಗಳು, ತೀರ್ಥಕ್ಷೇತ್ರಗಳ ರಕ್ಷಣೆ ಮತ್ತು ಅಭಿವೃದ್ಧಿ, ಪ್ರಮುಖ ನಗರಗಳಿಗೆ ನಾಲ್ಕು ಸಾವಿರ ಎಲೆಕ್ಟ್ರಿಕ್ ಬಸ್ ಸೇವೆ, ಐಟಿ ಸಂಸ್ಥೆಗಳಿಗೆ ಪ್ರೋತ್ಸಾಹ, ಕಂಪನಿಗಳಿಗೆ ಹೊಸ ತೆರಿಗೆ ಪದ್ಧತಿಗೆ ಸೇರಲು ಉತ್ತೇಜನ, ಚರ್ಮ ಉತ್ಪಾದನೆಗಳ ರಫ್ತಿಗೆ ಉತ್ತೇಜನ, ಐಟಿ ಟೆಕ್ನಾಲಜಿ ಅಭಿವೃದ್ಧಿ ಸೇರಿದಂತೆ ಹಲವು ಗುರಿಗಳನ್ನು ಹೊಂದಲಾಗಿದೆ. ಸೆಮಿ ಕಂಡಕ್ಟರ್ ಯೋಜನೆಗಾಗಿ 40 ಸಾವಿರ ಕೋಟಿ, ಕಂಟೈನರ್ ಅಭಿವೃದ್ಧಿ ಯೋಜನೆಗಾಗಿ 10 ಸಾವಿರ ಕೋಟಿ ಸೇರಿದಂತೆ ವಿವಿಧ ಕ್ಷೇತ್ರಗಳ ಅಭಿವೃದ್ಧಿಗೆ ಸಾಕಷ್ಟು ಹಣವನ್ನು ಮೀಸಲಿಡಲಾಗಿದೆ.

ಒಟ್ಟಾರೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿದ ಪ್ರಧಾನಿ ಮೋದಿ 3.0 ಸರ್ಕಾರದ ಬಜೆಟ್ ಮಂಡನೆ ಬಳಿಕ ಪರ– ವಿರೋಧ ಅಭಿಪ್ರಾಯಗಳು ವ್ಯಕ್ತವಾಗುತ್ತಿವೆ. ಭಾರತದ ಅಭಿವೃದ್ಧಿ ಈ ಬಜೆಟ್ ರಹದಾರಿಯಾಗಿದೆ ಎಂದು ಬಿಜೆಪಿ ಹಾಗೂ ಮಿತ್ರ ಪಕ್ಷದವರು ಬಣ್ಣಿಸಿದರೆ, ಇದು ನಿರಾಶಾದಾಯಕ ಬಜೆಟ್ ಆಗಿದೆ ಎಂದು ಕಾಂಗ್ರೆಸ್ ಇನ್ನಿತರ ಪ್ರತಿಪಕ್ಷದವರು ಟೀಕಿಸಿದ್ದಾರೆ. ಆದರೆ ಇಂದಿನ ಬಜೆಟ್, ಜನಸಾಮಾನ್ಯರ ಬದುಕಿನ ಮೇಲೆ ಯಾವ ರೀತಿಯ ಪರಿಣಾಮ ಬೀರುತ್ತದೆ ಎಂಬುದು ಮುಂದಿನ ದಿನಗಳಲ್ಲಿ ತಿಳಿಯಲಿದೆ.

ಯುವ ಜನತೆಗೆ ಅವಕಾಶಗಳ ಹೆಬ್ಬಾಗಿಲು

ಮತ್ತು ಹೊಸ ವೇಗವನ್ನು ನೀಡುತ್ತದೆ. ಭಾರತ ಕೇವಲ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆ ಎಂಬುದಕ್ಕೆ ತೃಪ್ತಿ ಹೊಂದಿಲ್ಲ ಮತ್ತು ಬಜೆಟ್ ಭಾರತದ ಉಜ್ವಲ ಭವಿಷ್ಯದ ಅಡಿಪಾಯವನ್ನು ಬಲಪಡಿಸುತ್ತದೆ ಎಂದು ಪ್ರಧಾನಿ ಹೇಳಿದರು.

ಈ ಬಜೆಟ್ ಜಾಗತಿಕ ಮಟ್ಟದಲ್ಲಿ ಭಾರತದ ಪಾತ್ರವನ್ನು ಮತ್ತಷ್ಟು ಬಲಪಡಿಸುತ್ತದೆ. ಕೇವಲ ವೇಗವಾಗಿ ಬೆಳೆಯುತ್ತಿರುವ ಆರ್ಥಿಕತೆಯಿಂದ 1.4 ಬಿಲಿಯನ್ ದೇಶದ ಜನರು ತೃಪ್ತಿಹೊಂದಿಲ್ಲ. ನಾನು ಶೀಘ್ರದಲ್ಲೇ ಜಗತ್ತಿನಲ್ಲಿಯೇ ಮೂರನೇ ಅತಿದೊಡ್ಡ ಆರ್ಥಿಕತೆಯ ರಾಷ್ಟ್ರವಾಗಲಿದ್ದೇವೆ. ಇದು ಕೋಟ್ಯಂತರ ದೇಶವಾಸಿಗಳ ಸಂಕಲ್ಪವಾಗಿದೆ ಎಂದು ಅವರು ಹೇಳಿದರು. ಈ ಬಜೆಟ್ ವಿಶ್ವಾಸ ಆಧಾರಿತ ಆಡಳಿತ ಮತ್ತು ಮಾನವ ಕೇಂದ್ರಿತ ಆರ್ಥಿಕ ಚೌಕಟ್ಟಿನ ದೃಷ್ಟಿಯನ್ನು ಒಳಗೊಂಡಿದೆ. ವಿತ್ತೀಯ ಕೊರತೆಯನ್ನು ಕಡಿಮೆ ಮಾಡಲು ಮತ್ತು ಹಣದುಬ್ಬರವನ್ನು ಒಳಗೊಂಡಿರುವ ಮತ್ತು ದೃಢವಾದ ಆರ್ಥಿಕ ಬೆಳವಣಿಗೆಯೊಂದಿಗೆ ಹೆಚ್ಚಿನ ಬಂಡವಾಳ ವೆಚ್ಚವನ್ನು ಸಮತೋಲನಗೊಳಿಸುವ ವಿಶಿಷ್ಟ ಬಜೆಟ್ ಆಗಿದೆ. ಈ ವರ್ಷದ ಬಜೆಟ್‌ನಲ್ಲಿ ಎಂಎಸ್‌ಎಂಇ ಗಳಿಗೆ ನೀಡಲಾಗಿರುವ ಪ್ರೋತ್ಸಾಹದಿಂದ ಜಾಗತಿಕವಾಗಿ ಬೆಳೆಯಲು ಹೊಸ ಶಕ್ತಿಯನ್ನು ನೀಡುತ್ತದೆ ಪ್ರಧಾನಿ ಮೋದಿ ಹೇಳಿದ್ದಾರೆ

ಮನರೇಗಾ ಮರುಸ್ಥಾಪನೆಗೆ ಆಗ್ರಹಿಸಿ

ಮೈಸೂರಲ್ಲಿ ಕಾಂಗ್ರೆಸ್ ಅಹೋರಾತ್ರಿ ಸತ್ಯಾಗ್ರಹ





ಮೈಸೂರು ಪುರ ಭವನ ಆವರಣದಲ್ಲಿ ಮನರೇಗಾ ಮರುಸ್ಥಾಪನೆಗೆ ಆಗ್ರಹಿಸಿ ಮೈಸೂರು ನಗರ, ಜಿಲ್ಲಾ ಕಾಂಗ್ರೆಸ್ ವತಿಯಿಂದ ಅಹೋರಾತ್ರಿ ಸತ್ಯಾಗ್ರಹ ನಡೆಸಲಾಯಿತು.

ಮೈಸೂರು, ಫೆ1(ವಿವಿಹೆಚ್)– ಮನರೇಗಾ (ಮಹಾತ್ಮ ಗಾಂಧಿ ಉದ್ಯೋಗ ಖಾತ್ರಿ) ಯೋಜನೆ ಮರು ಸ್ಥಾಪನೆಗೆ ಆಗ್ರಹಿಸಿ ಮೈಸೂರು ನಗರ ಹಾಗೂ ಜಿಲ್ಲಾ ಕಾಂಗ್ರೆಸ್ ಸಮಿತಿ ವತಿಯಿಂದ ಭಾನುವಾರ ಅಹೋರಾತ್ರಿ ಸತ್ಯಾಗ್ರಹ ನಡೆಸಿದರು. ಮೈಸೂರಿನ ಪುರಭವನ ಆವರಣದಲ್ಲಿ ಭಾನುವಾರ ಸಂಜೆ 6.30ಕ್ಕೆ ಆರಂಭಗೊಂಡ ಸತ್ಯಾಗ್ರಹವು ಸೋಮವಾರ ಬೆಳಗ್ಗೆ 7 ಗಂಟೆಗೆ ಮುಕ್ತಾಯಗೊಳ್ಳಲಿದೆ.

ಇದಕ್ಕೂ ಮೊದಲು ನಗರದ ಗಾಂಧಿ ಚೌಕದ ಮಹಾತ್ಮ ಗಾಂಧಿ ಪ್ರತಿಮೆಗೆ ಪುಷ್ಪಾರ್ಚನೆ ಮಾಡಲಾಯಿತು. ನಂತರ ಅಲ್ಲಿಂದ ಮೆರವಣಿಗೆ ಮೂಲಕ ಬಂದು ಪುರ ಭವನ ಆವರಣದಲ್ಲಿನ ಅಂಬೇಡ್ಕರ್ ಪ್ರತಿಮೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ. ಎಚ್.ಸಿ. ಮಹದೇವಪ್ಪ ಮತ್ತು ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಪುಷ್ಪಾರ್ಚನೆ ಮೂಲಕ ಅಹೋರಾತ್ರಿ ಸತ್ಯಾಗ್ರಹಕ್ಕೆ ಚಾಲನೆ ನೀಡಿದರು.

ಈ ವೇಳೆ ಕೆಪಿಸಿಸಿ ಉಪಾಧ್ಯಕ್ಷ, ಮಾಜಿ ಸಂಸದ ವಿ.ಎಸ್.ಉಗ್ರಪ್ಪ ಮಾತನಾಡಿ, ವಿಬಿ ಜಿ ರಾಮ್ ಜಿ ಕಾಯ್ದೆ ಕರಾಳ ಕಾನೂನು. ಇದು ರೈತರು, ದಲಿತರು, ಅಲ್ಪಸಂಖ್ಯಾತರಿಗೆ ಅಪಮಾನ ಮಾಡುತ್ತದೆ. ನಿರುದ್ಯೋಗಿಗಳ ಉದ್ಯೋಗದ ಹಕ್ಕನ್ನು ಕಸಿಯುತ್ತದೆ. ಸ್ಥಳೀಯ ಆಡಳಿತ ಗ್ರಾಮ ಪಂಚಾಯಿತಿಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಳ್ಳಲು ಕೇಂದ್ರ ಸರ್ಕಾರ ಇದನ್ನು ರೂಪಿಸಿದೆ ಎಂದು ಕಿಡಿಕಾರಿದರು.

ದೇಶದ ಅಭಿವೃದ್ಧಿಯಲ್ಲಿ ಮೋದಿ ಕೊಡುಗೆ ಶೂನ್ಯ. ಅಂಬೇಡ್ಕರ್, ಗಾಂಧಿ ಅವರ ಹೆಸರನ್ನು ಬದಲಾಯಿಸುವ ಕೆಲಸ ಮಾಡುವುದರೊಂದಿಗೆ ಅವರ ಆಶಯಗಳಿಗೆ ಎಳ್ಳು–ನೀರು ಬಿಡಲಾಗುತ್ತಿದೆ. ಅಭಿವೃದ್ಧಿಯನ್ನು ಕುಂಠಿತಗೊಳಿಸಲಾಗಿದೆ ಎಂದು ದೂರಿದರು. ಬಳಿಕ ವಿಧಾನ ಪರಿಷತ್ ಸದಸ್ಯ ಡಾ. ಯತ್ರೀಂದ್ರ ಮಾತನಾಡಿ, ಕೋಟ್ಯಾಂತರ ಬಡವರು, ಕಾರ್ಮಿಕರ ಹಕ್ಕನ್ನು ಹತ್ತಿಕ್ಕುವ ಸಲುವಾಗಿ ಮನರೇಗಾ ಹೆಸರನ್ನು ಜಿ ರಾಮ್ ಜಿ ಎಂದು ಬದಲಾಯಿಸಿದ್ದಾರೆ. ಇದನ್ನು ಮರು ಸ್ಥಾಪಿಸುವ ಮೂಲಕ ಗಾಂಧೀಜಿಯವರ ಆಶಯಗಳನ್ನು ಉಳಿಸಬೇಕಿದೆ ಎಂದು ಕರೆ ಕೊಟ್ಟರು.

ಮಾಜಿ ಪ್ರಧಾನಿ ಮನಮೋಹನ ಸಿಂಗ್ ಕಾಲದಲ್ಲಿ ಗಾಂಧಿ ಅವರ ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ನನಸು ಮಾಡಲು ಮನರೇಗಾಕ್ಕೆ ಗಾಂಧಿ ಹೆಸರನ್ನು ಇಟ್ಟು ಪ್ರತಿಯೊಬ್ಬರಿಗೂ ಗ್ರಾಮ ಮಟ್ಟದಲ್ಲಿಯೇ ಉದ್ಯೋಗದ ಹಕ್ಕು ನೀಡುವಂತೆ ಯೋಜನೆ ರೂಪಿಸಲಾಗಿತ್ತು ಆದರೆ ಈಗ, ಕೇಂದ್ರದ ಬಜೆಟ್ ಆಧಾರದಲ್ಲಿ ಕೆಲಸ ಮಾಡುವ ಯೋಜನೆಯಾಗಿ ಜಿ ರಾಮ್ ಜಿ ಜಾರಿಗೆ ತಂದಿದೆ. ಇದು ಸಾಮಾನ್ಯರ ಬದುಕನ್ನು ಕಸಿಯುತ್ತದೆ ಎಂದರು. ರಾವಣನು ವೇಷ ಧರಿಸಿ ಸೀತೆ ಅಪಹರಣ ಮಾಡಿ ಕಿರುಕುಳ ನೀಡಿದ ರೀತಿಯಲ್ಲಿ ಕೇಂದ್ರ ಸರ್ಕಾರ ರಾಮನ ಹೆಸರಲ್ಲಿ ಬಡವರಿಗೆ ಕಿರುಕುಳ ನೀಡುವ ಕೆಲಸವನ್ನು ಮಾಡುತ್ತಿದೆ. ರಾಜ್ಯದ ಯಾವುದೋ ಒಂದು ಹಳ್ಳಿಯಲ್ಲಿ ನಡೆಯಬೇಕಿರುವ ಕೆಲಸವನ್ನು, ಕೇಂದ್ರ ಮೂಲ ಸ್ಥಾನದಲ್ಲಿರುವ ವ್ಯಕ್ತಿಯೊಬ್ಬ ನಿರ್ಧರಿಸುವ ಹಕ್ಕನ್ನು ತನ್ನ ತೆಕ್ಕೆಗೆ ತೆಗೆದುಕೊಳ್ಳುತ್ತಿದೆ. ಆ ಮೂಲಕ ಬಡವರನ್ನು ಮತ್ತಷ್ಟು ಬಡವರನ್ನಾಗಿಸಲು ಷಡ್ಯಂತ್ರ ರೂಪಿಸಲಾಗುತ್ತಿದೆ ಎಂದು ದೂರಿದರು.

ನರೇಗಾ ಯೋಜನೆಗೆ ಬಲ ತುಂಬುವ ಕೆಲಸ ಈ ಬಾರಿಯ ಬಜೆಟ್‌ನಲ್ಲಿ ಆಗಿಲ್ಲ. 2.34 ಲಕ್ಷ ಕೋಟಿ ಮನರೇಗಾ ಯೋಜನೆಗೆ ಮೀಸಲಿಡುವ ಬದಲು ಬಜೆಟ್‌ನಲ್ಲಿ 95 ಸಾವಿರ ಕೋಟಿ ಮಾತ್ರ ಮೀಸಲಿಡಲಾಗಿದೆ. ಇದು ಬಡವರ ವಿರುದ್ಧ ಕೇಂದ್ರದ ಶೋಷಣೆಯ ಮಸಲತ್ತಾಗಿದೆ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಶಾಸಕರಾದ ತನ್ವೀರ್ ಸೇಠ್, ಕೆ.ಹರೀಶ್ ಗೌಡ, ದರ್ಶನ್ ಧ್ರುವನಾರಾಯಣ್, ಡಿ.ರವಿ ಶಂಕರ್, ಎಂಎಲ್‌ಸಿ ಡಿ.ತಿಮ್ಮಯ್ಯ, ಕೆಪಿಸಿಸಿ ಉಪಾಧ್ಯಕ್ಷ ಜಿ.ಎನ್. ನಂಜುಂಡಸ್ವಾಮಿ, ಕೋಟೆ ಶಿವಣ್ಣ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಎಚ್.ಪಿ.ಮಂಜುನಾಥ್, ಗ್ಯಾರಂಟಿ ಯೋಜನೆಗಳ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರನಾಥ್, ಅಹಿಂದಾ ಜವರಪ್ಪ ಸೇರಿದಂತೆ ನೂರಾರು ಮಂದಿ ಕಾಂಗ್ರೆಸ್ ಮುಖಂಡರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಜಿ.ಡಿ.ಹರೀಶ್‌ಗೌಡರ ಜನ್ಮದಿನ ಅದ್ದೂರಿ ಆಚರಣೆ...



ಮೈಸೂರಿನ ಹೆಚ್.ಡಿ.ದೇವೇಗೌಡ ವೃತ್ತದ ಸಮೀಪ ರಿಂಗ್ ರಸ್ತೆಯಲ್ಲಿರುವ ಎಂಪ್ರೋ ಹೋಟೆಲ್ ಸಭಾಂಗಣದಲ್ಲಿ ಭಾನುವಾರ ಸಂಜೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ ಅವರ ಜನ್ಮದಿನವನ್ನು ಅವರ ಅಭಿಮಾನಿ ಬಳಗದ ವತಿಯಿಂದ ಅದ್ದೂರಿಯಾಗಿ ಆಚರಿಸಲಾಯಿತು. ಜಿ.ಡಿ.ಹರೀಶ್‌ಗೌಡ ಅವರಿಗೆ ಬೃಹತ್ ಹಾರ ಹಾಕಿ ಸನ್ಮಾನಿಸುವ ಮೂಲಕ ಅವರ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕನ ಜನ್ಮದಿನದ ಸಂಭ್ರಮಾಚರಣೆ ಮಾಡಿದರು. ಇದೇ ವೇಳೆ ಭಾರೀ ಗಾತ್ರದ ಕೇಕ್ ಕತ್ತರಿಸಿ ಅಭಿಮಾನಿಗಳಿಗೆ ಹರೀಶ್‌ಗೌಡರು ತಿನ್ನಿಸಿ ಸಂಭ್ರಮಿಸಿದರು. ಅಭಿಮಾನಿಗಳ ಜೊತೆಗೆ ಹಿತೈಷಿಗಳು, ಸ್ನೇಹಿತರು ಹರೀಶ್‌ಗೌಡರಿಗೆ ಜನ್ಮದಿನದ ಶುಭಾಶಯ ಕೋರಿದರು. ಮಾಜಿ ಶಾಸಕ ಅಶ್ವಿನ್ ಕುಮಾರ್, ಮೈಮುಲ್ ಮಾಜಿ ಅಧ್ಯಕ್ಷ ಪಿ.ಎಂ.ಪ್ರಸನ್ನ, ಮುಖಂಡರಾದ ಅರವಿಂದ್, ವೈ.ಎಸ್.ಬಸವರಾಜು, ಎಸ್.ಎನ್.ಕಾಂತರಾಜು, ವಿನಾಯಕ ರಾಜೇಂದ್ರ, ಸಿದ್ದೇಗೌಡ, ಮಂಜಣ್ಣ, ವಿಜಯೇಂದ್ರ, ಮಹೇಂದ್ರ, ರಾಮೇಗೌಡ ಮತ್ತಿತರರು ಹಾಜರಿದ್ದರು.

ಮೈಸೂರು ಮಿತ್ರ

ಸೋಮವಾರ 2 ಫೆಬ್ರವರಿ 2026

ಜಿ.ಡಿ.ಹರೀಶ್‌ಗೌಡರ ಹುಟ್ಟುಹಬ್ಬ: ಅರ್ಥಪೂರ್ಣ ಆಚರಣೆ











ಮೈಸೂರು: ಭಾನುವಾರ ಹುಣಸೂರು ಶಾಸಕ ಹಾಗೂ ಚಾಣಾಕ್ಷ ಸಹಕಾರಿ ಜಿ.ಡಿ.ಹರೀಶ್‌ಗೌಡ ಅವರ ಹುಟ್ಟುಹಬ್ಬವನ್ನು ಅವರ ಅಭಿಮಾನಿಗಳು ವಿವಿಧ ಸೇವಾ ಕಾರ್ಯಗಳು ಹಾಗೂ ದೇಣಿಗೆಯೊಂದಿಗೆ ಅರ್ಥಪೂರ್ಣವಾಗಿ ಆಚರಿಸಿದರು.

ರಸ್ತೆಬದಿ ವ್ಯಾಪಾರಿಗಳಿಗೆ ತಳ್ಳುಗಾಡಿಗಳು, ಬಡ ಮಹಿಳೆಯರಿಗೆ ಹೊಲಿಗೆ ಯಂತ್ರ, ಪೌರಕಾರ್ಮಿಕರಿಗೆ ಉಡುಗೊರೆಗಳನ್ನು ನೀಡುವುದರೊಂದಿಗೆ ಇದೇವೇಳೆ ರಕ್ತದಾನವನ್ನು ಮಾಡಲಾಯಿತು. ಈ ಸಂದರ್ಭದಲ್ಲಿ ಟಿಎಪಿಸಿಎಂಎಸ್ ನಿರ್ದೇಶಕ ಹಾಗೂ ಜೆಡಿಎಸ್ ಮುಖಂಡ ಕೆ.ಚಂದ್ರಶೇಖರ್, ಗುಂಗ್ರಾಲ್ ಗ್ರಾಮ ಪಂಚಾಯತಿ ಮಾಜಿ ಉಪಾಧ್ಯಕ್ಷ ಹಾಗೂ ಹಾಲು ಉತ್ಪಾದಕರ ಸಂಘದ ಸದಸ್ಯ ಇ.ಪಿ.ರವಿ, ಜೆಡಿಎಸ್ ಮುಖಂಡರಾದ ಬೆಳವಾಡಿ ಮಹದೇವ, ಲಾಯರ್ ಸಿದ್ದರಾಜು, ಬೋಗಾದಿ ಗ್ರಾಪಂ ಮಾಜಿ ಸದಸ್ಯ ಸೊಸೈಟಿ ಆನಂದ, ಕೇಬಲ್ ರವಿ, ಸುರೇಶ್, ಕಾಳಪ್ಪ ಇತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಮಂಗಾತ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಲ್ಯಾಂಡ್‌ಲಾರ್ಡ್ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಬಾರ್ಡರ್-2 (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
45 ಫೇಸ್ ದಿ ಇಯರ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ದ್ರೌಪದಿ-2 (ತ)	4 ಪ್ರದರ್ಶನಗಳು
ಸಂಗಂ	
ಕಲ್ಟ್ (ಕ)	4 ಪ್ರದರ್ಶನಗಳು
ಲಿಡೋ	
ಡೆವಿಲ್ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಮಾವುತ (ಕ)	4 ಪ್ರದರ್ಶನಗಳು

ಮೈಸೂರಲ್ಲಿ ಮಡಿವಾಳ ಮಾಚಿದೇವರ ಜಯಂತಿ



ಮಡಿವಾಳ ಮಾಚಿದೇವರ ಜಯಂತಿ ಕಾರ್ಯಕ್ರಮದಲ್ಲಿ ಶಾಸಕ ಕೆ.ಹರೀಶ್‌ಗೌಡ ಮಾಚಿದೇವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು, ಫೆ.1(ಎಂಟಿವೈ)– ಶಿಕ್ಷಣದಿಂದ ಮಾತ್ರ ಸಾಧನೆ ಸಾಧ್ಯ, ಈ ಹಿನ್ನೆಲೆಯಲ್ಲಿ ಮಡಿವಾಳ ಸಮುದಾಯ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಹೆಚ್ಚಿನ ಆದ್ಯತೆ ನೀಡಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.


ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಮಡಿವಾಳ ಮಾಚಿದೇವರ ಜಯಂತಿ ಉತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಮಡಿವಾಳ ಮಾಚಿದೇವರ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗವಾಗಿರುವ ಮಡಿವಾಳ ಸಮುದಾಯ ಕುಲಕಸುಬನ್ನೇ ಅವಲಂಭಿಸಿದೆ. ಸಮಾಜದ ಎಲ್ಲಾ ಕ್ಷೇತ್ರಗಳಲ್ಲೂ ಹಿಂದುಳಿದಿರುವ ಮಡಿವಾಳ ಸಮುದಾಯದ ಜನ ತಮ್ಮ ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸುವ ಮೂಲಕ ಉನ್ನತ ಹುದ್ದೆಗಳಿಗೇರಿಸಬೇಕು. ಸಮುದಾಯ, ಈ ಸಂಬಂಧ ಸರ್ಕಾರಿ ಅಧಿಕಾರಿಗಳ ಮಾರ್ಗದರ್ಶನ ಪಡೆದುಕೊಳ್ಳಬೇಕು. ಅಲ್ಲದೆ, ಜನಪ್ರತಿನಿಧಿಗಳ ಸಹಕಾರ ಪಡೆದುಕೊಳ್ಳುವುದರೊಂದಿಗೆ ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಒತ್ತು ನೀಡಬೇಕು ಎಂದರು.

ಮಡಿವಾಳ ಸಮುದಾಯದವರು ಸಲ್ಲಿಸಿರುವ ಬೇಡಿಕೆಗಳ ಬಗ್ಗೆ ಸರ್ಕಾರದ ಗಮನ ಸೆಳೆಯಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ನಗರದಲ್ಲಿರುವ ನಾಲ್ಕು ಮಡಿವಾಳ ಕಟ್ಟೆಗಳ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲು ಬದ್ಧವಾಗಿದ್ದೇನೆ. ಎಲ್ಲಾ ಮಡಿವಾಳ ಸಂಘಟನೆಗಳು ಒಗ್ಗೂಡಿ ಪ್ರಸ್ತಾವನೆ ಸಲ್ಲಿಸಿದರೆ, ಮಡಿಕಟ್ಟೆಗೆ ಅತ್ಯಾಧುನಿಕ ತಂತ್ರಜ್ಞಾನವುಳ್ಳ ಬಟ್ಟೆ ಸ್ವಚ್ಛ ಮಾಡುವ ಯಂತ್ರ ಅಳವಡಿಕೆಗೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು.

ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ ಮಾತನಾಡಿ, 12ನೇ ಶತಮಾನದಲ್ಲಿ ಬಸವಣ್ಣ ಅವರ ಅನುಭವ ಮಂಟಪದಲ್ಲಿ ಯಾವುದೇ ಜಾತಿ, ಮೇಲು–ಕೀಳು ಎಂಬ ಭೇದ–ಭಾವವಿಲ್ಲದೆ ಎಲ್ಲಾ ವರ್ಗದ ವಚನಕಾರರು ಒಗ್ಗೂಡಿ ವಚನಗಳ ಮೂಲಕ ಸಮಾಜದ ಅಂಕು–ಡೊಂಕುಗಳನ್ನು ತಿದ್ದಲು ಪ್ರಯತ್ನಿಸುತ್ತಿದ್ದರು. ಅನುಭವ ಮಂಟಪದಲ್ಲಿ ಮಡಿವಾಳ ಮಾಚಯ್ಯ, ಅಂಬಿಗರ ಚೌಡಯ್ಯ, ಹರಳಯ್ಯ, ದೋಹಾರ ಕಕ್ಕಯ್ಯ ಸೇರಿದಂತೆ ಎಲ್ಲಾ ವಚನಕಾರರು ದುಡಿಮೆಯೇ ದೇವರು, ಕಾಯಕದ ಮೂಲಕ ಕೈಲಾಸ ನೋಡಿ ಹಾಗೂ ಪ್ರತಿಯೊಂದು ಕಾಯಕವನ್ನು ಗೌರವಿಸಿ ಸಮ ಸಮಾಜ ನಿರ್ಮಾಣ ಮಾಡಿ ಎಂಬ ಸಂದೇಶವನ್ನು ವಚನಗಳ ಮೂಲಕ ತಿಳಿಸಿಕೊಟ್ಟರು. ಕೊಳೆ ಬಟ್ಟೆ ತೊಳೆದು ಶುದ್ಧ ಮಾಡುವಂತೆ ಮನಸ್ಸಿನಲ್ಲಿ ಮೇಲು ಕೀಳು ಕಲ್ಮಶವಿದ್ದರೆ ಜನಸಾಮಾನ್ಯರು ಮೊದಲು ಅದನ್ನು ತೊಳೆದು ಶುದ್ಧ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಶರಣ ಪ್ರವಚನಕಾರ ಯಡಿಯೂರು ಮೂಡಲಗಿರಿ ಮಾತನಾಡಿದರು. ಗ್ಯಾರಂಟಿ ಯೋಜನೆಯ ಜಿಲ್ಲಾ ಅಧ್ಯಕ್ಷ ಅರುಣ್ ಕುಮಾರ್, ಮುಖಂಡರಾದ ದುಡ್ಡಗೆರೆ ಶಿವಣ್ಣ, ಸಂತೋಷ್, ಜಯರಾಮ, ಚನ್ನಕೇಶವ ರವಿನಂದನ, ಪ್ರಶಾಂತ್, ಕೇಶವ ಬಿ.ಜಿ, ನಾಗೇಶ್, ರವಿ, ಸಿದ್ದಪ್ಪಾಜಿ, ಸತ್ಯನಾರಾಯಣ, ಮಂಜು, ಜಗದೀಶ , ರಾಜೇಶ್, ಮಾಧುರಾಜ್, ಮಹಮದ್ ರಫಿ, ಮಂಜುನಾಥ್, ಮಂಜು ಶೆಟ್ಟಿ, ಸಿದ್ದಪಾಜಿ ಇನ್ನಿತರರು ಉಪಸ್ಥಿತರಿದ್ದರು.

ಮೆರವಣಿಗೆ: ಕಾರ್ಯಕ್ರಮಕ್ಕೂ ಮುನ್ನ ಮಡಿವಾಳ ಮಾಚಿದೇವರ ಜಯಂತಿ ಉತ್ಸವ ಸಮಿತಿ ವತಿಯಿಂದ ಮೈಸೂರು ಅರಮನೆಯ ಕೋಟೆ ಆಂಜನೇಯಸ್ವಾಮಿ ದೇವಾಲಯದ ಮುಂಭಾಗದಿಂದ ಆರಂಭಗೊಂಡ ಮೆರವಣಿಗೆ ವೇಳೆ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ, ಮಾಜಿ ಸಂಸದ ಪ್ರತಾಪ ಸಿಂಹ, ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದ ರಾಜ್ಯಾಧ್ಯಕ್ಷ ರಘು ಆರ್. ಕೌಟಿಲ್ಯ ಸೇರಿದಂತೆ ಇನ್ನಿತರರು ಪುಷ್ಪಾರ್ಚನೆ ಮಾಡಿದರು. ಬಳಿಕ ಮೆರವಣಿಗೆ ಕಳಸ ಹೊತ್ತ ಮಹಿಳೆಯರು, ಡೊಳ್ಳು ಕುಣಿತ, ಕಂಸಾಳೆ, ಪೂಜಾ ಕುಣಿತ ಸೇರಿದಂತೆ ಇನ್ನಿತರ ಜಾನಪದ ಕಲಾತಂಡಗಳೊಂದಿಗೆ ಕೆ.ಆರ್.ವೃತ್ತ, ಡಿ.ದೇವರಾಜ ಅರಸ್ ರಸ್ತೆ, ಜೆಎಲ್‌ಬಿ ರಸ್ತೆ, ವಿನೋಬಾ ರಸ್ತೆ ಮೂಲಕ ಕಲಾಮಂದಿರ ತಲುಪಿತು.





ಚಾಮರಾಜನಗರ ವಿಶ್ವವಿದ್ಯಾನಿಲಯ

CHAMARAJANAGARA UNIVERSITY
SUVARNA GANGOTRI, CHAMARAJANAGARA - 571313

Ph No: 08226-297512 Email ID:chamarajanagarauniversity@gmail.com

No:CUC/DSW/28/2025-26 Date: 27-01-2026

ಅಲ್ಪಾವಧಿ ಮೆಸ್ ಟೆಂಡರ್ ಪ್ರಕಟಣೆ

(Website: https://cuc.karnataka.gov.in/en)

ಚಾಮರಾಜನಗರ ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಒಳಪಡುವ ಪರಿಶಿಷ್ಟ ಜಾತಿ/ವರ್ಗದ ವಿದ್ಯಾರ್ಥಿನಿಲಯ, ಚಾಮರಾಜನಗರ ಮತ್ತು ಡಾ.ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಮಹಿಳಾ ವಿದ್ಯಾರ್ಥಿನಿಲಯ, ಸುವರ್ಣಗಂಗೋತ್ರಿ, ಚಾಮರಾಜನಗರ ಇಲ್ಲಿನ ಸ್ನಾತಕ ಪೂರ್ವ ವಿದ್ಯಾರ್ಥಿಗಳಿಗೆ ರೂ.1750/– ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರೂ.2000/–ರ ಮಾಸಿಕ ದರದಲ್ಲಿ ಮೆಸ್ ಟೆಂಡರ್ ನಡೆಸಲು ಖಾಸಗಿಯವರಿಂದ ಒಂದು ವರ್ಷದ ಅವಧಿಗೆ ಹೊರಗುತ್ತಿಗೆ ಆಧಾರದ ಮೇಲೆ ಅರ್ಹ ಸಂಸ್ಥೆಯಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಮತ್ತು ಪಾರದರ್ಶಕ ಅಧಿನಿಯಮ (KTPP) 1999/2000ರ ಪ್ರಕಾರ ಇ-Procurement ಟೆಂಡರ್ ಮೂಲಕ ಪಡೆಯುವ ಅವಶ್ಯಕತೆ ಇರುತ್ತದೆ. ಸದರಿಯವರುಗಳ ಸೇವೆಯನ್ನು ಸಹ ಇ-Procurement ಟೆಂಡರ್ ಮೂಲಕ ಪಡೆಯಲು ಉದ್ದೇಶಿಸಿದೆ

1	ಟೆಂಡರ್ ಪ್ರಕಟಣೆ ದಿನಾಂಕ.	NO/CUC/DSW/28/2025-26 Date: 27-01-2026
2	ಟೆಂಡರ್ ಫಾರಂ ಅಪ್ ಲೋಡ್ ಮಾಡಲು ಪ್ರಾರಂಭಿಸುವ ದಿನಾಂಕ.	ದಿನಾಂಕ :30–01–2026
3	ಟೆಂಡರ್ ಫಾರಂ ಭರ್ತಿ ಮಾಡಿ ಸಲ್ಲಿಸಲು ಕೊನೆಯ ದಿನಾಂಕ.	ದಿನಾಂಕ : 12–02–2026. ಸಂಜೆ 5.00 ಗಂಟೆಗೆ
4	ತಾಂತ್ರಿಕ ಲಕೋಟೆ ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ	ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ ಚಾಮರಾಜನಗರ ದಿನಾಂಕ:16–02–2026, ಬೆಳಿಗ್ಗೆ 11.00 ಗಂಟೆಗೆ
5	ಆರ್ಥಿಕ ಲಕೋಟೆಯನ್ನು ತೆರೆಯುವ ಸ್ಥಳ, ವೇಳೆ ಮತ್ತು ದಿನಾಂಕ.	ಚಾಮರಾಜನಗರ ವಿಶ್ವವಿದ್ಯಾನಿಲಯ, ಸುವರ್ಣಗಂಗೋತ್ರಿ ಚಾಮರಾಜನಗರ ದಿನಾಂಕ:18–02–2026, ಬೆಳಿಗ್ಗೆ 10.30 ಗಂಟೆಗೆ ನಂತರ
6	ಟೆಂಡರ್‌ನೊಂದಿಗೆ ಪಾವತಿಸಬೇಕಾದ ಇ.ಎಂ.ಡಿ ಮೊತ್ತ.	ರೂ. 50,000/–
7	ಸಂಪರ್ಕಿಸಬೇಕಾದ ಅಧಿಕಾರಿ ಹಾಗೂ ವಿಳಾಸ, ದೂರವಾಣಿ ಸಂಖ್ಯೆ.	ಕುಲಸಚಿವರು, ಚಾಮರಾಜನಗರ ವಿಶ್ವವಿದ್ಯಾನಿಲಯ, ಚಾಮರಾಜನಗರ. ದೂರವಾಣಿ ಸಂಖ್ಯೆ: 08226–297512

ಸಂ:ವಾಸಾಸಂಇ:ಚಾನಗರ:674:2025–26

ಸಹಿ/– ಕುಲಸಚಿವರು,
ಚಾಮರಾಜನಗರ ವಿಶ್ವವಿದ್ಯಾನಿಲಯ,
ಚಾಮರಾಜನಗರ


ಜೆ.ಡಿ.ಎಸ್. ಶಾಸಕಾಂಗ ಪಕ್ಷದ ಮುಖ್ಯ ಸಚೇತಕರು ಹಾಗೂ
ಹುಣಸೂರು ಕ್ಷೇತ್ರದ ಜನನೆಚ್ಚಿನ ಯುವ ಶಾಸಕರಾದ
ಜಿ.ಡಿ.ಹರೀಶ್‌ಗೌಡ
ಅವರ ಜನ್ಮದಿನದ ಶುಭಾಶಯಗಳು
ಬಲ್ಲಹಳ್ಳಿ ಮನು
ಪಿ.ಡಬ್ಲ್ಯೂ.ಡಿ ಗುತ್ತಿಗೆದಾರರು
ಎ.ಪಿ.ಎಂ.ಸಿ. ಮಾಜಿ ನಿರ್ದೇಶಕರು
ಹಾಗೂ ಶ್ರೀನಿಧಿ ಗ್ರೂಪ್ಸ್ ಮಾಲೀಕರಾದ
ಕೋಟೆಹುಂಡಿ
ಮಹದೇವ್ರು
ಅವರಿಗೆ
ಜನ್ಮದಿನದ ಶುಭಾಶಯಗಳು
7411151112
ಸುಮಿತ್ರ
ಮಾಜಿ ಅಧ್ಯಕ್ಷರು
ವನಿತಾ
ಮಾಜಿ ಅಧ್ಯಕ್ಷರು
ಸುಮ
ಮಾಜಿ ಅಧ್ಯಕ್ಷರು
ಲತಾ ಪ್ರಸನ್ನಾಚಾರಿ
ಗ್ರಾಮ ಪಂಚಾಯಿತಿ, ಅಧ್ಯಕ್ಷರು
ದಾಸಯ್ಯ
ಉಪಾಧ್ಯಕ್ಷರು
ನಂದರಾಜ
ಗ್ರಾ. ಪಂ. ಮಾಜಿ ಉಪಾಧ್ಯಕ್ಷರು
ಮಂಜುನಾಥ್
ಎ.ಪಿ.ಎಂ.ಸಿ. ದಲ್ಲಾಳರು
ಶುಭಕೋರುವವರು : ದೊಡ್ಡಮಾರಗೌಡನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರು, ಉಪಾಧ್ಯಕ್ಷರು
ಸದಸ್ಯರುಗಳು ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮುಖಂಡರುಗಳು
ಪರಶಿವಮೂರ್ತಿ
ಪಿ.ಡಬ್ಲ್ಯೂ.ಡಿ. ಗುತ್ತಿಗೆದಾರರು
ಡಿ.ಬಿ.ಶಂಕರ್
ಗ್ರಾ. ಪಂ. ಸದಸ್ಯರು